ಸಂಪುಟ: 05 ಸಂಚಿಕೆ: 14 ಪುಟಗಳು: 08 ಶುಕ್ರವಾರ 28 ಮಾರ್ಚ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 UV 9448225696 +91 8035841833 ₹5
ಉದಯ ಸಂಭ್ರಮ
# ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಡೊನಾಲ್ಡ್ ಟ್ರಂಪ್ ನೇರ ದಾಳಿಯನ್ನು ಎದುರಿಸುತ್ತೇವೆ ಎಂದ ಕೆನಡಾ

• ಉದಯವಾಹಿನಿ, ಬೆಂಗಳೂರು

ಅಮೆರಿಕ-ಕೆನಡಾ ನಡುವಿನ ಸುಂಕ ವಿವಾದ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ನಾ ಕೊಡೆ, ನೀ ಬಿಡೆ ಎಂಬಂತೆ ಉಭಯ ದೇಸಗಳು ಕಿತ್ತಾಟ ನಡೆಸುತ್ತಿವೆ. ಆದರೆ ಸುಂಕ ಹೆಚ್ಚಳದಿಂದ ಕೆನಡಾ ಮೆತ್ತಗಾಗಲಿದೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಊಹೆ ಸುಳ್ಳಾಗುತ್ತಿದ್ದು, ಕೆನಡಾದ ಖಾರವಾದ ಪ್ರತಿಕ್ರಿಯೆಗಳಿಂದ ಸ್ವತಃ ಟ್ರಂಪ್ ದಂಗಾಗಿದ್ದಾರೆ. ಕೆನಡಾ ಮೇಲೆ ಅಧಿಕ ತೆರಿಗೆ ವಿಧಿಸುವ ಡೊನಾಲ್ಡ್ ಟ್ರಂಪ್ ಅವರ ನೀತಿಯನ್ನು ತೀವ್ರವಾಗಿ ಖಂಡಿಸಿರುವ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ, ಇದನ್ನು ಕೆನಡಾದ ಮೇಲೆ ನೇರ ದಾಳಿ ಎಂದು ಕರೆದಿದ್ದಾರೆ. ಅಲ್ಲದೇ ಟ್ರಂಪ್ ಅವರ ಸುಂಕ ದಾಳಿಗಳನ್ನು ಎದುರಿಸಲು ಕೆನಡಾ ಸಿದ್ಧವಾಗಿದೆ ಎಂದೂ ಮಾರ್ಕ್ ಕಾರ್ನಿ ಘೋಷಿಸಿದ್ದಾರೆ. ಡೊನಾಲ್ಡ್ ಟ್ರಂಪ್ ಅವರು ಕೆನಡಾದ ಮೇಲೆ ಹೊಸ ತೆರಿಗೆಗಳನ್ನು ಹೇರಿದ್ದಾರೆ. ಆಟೋಮೊಬೈಲ್‌ಗಳ ಮೇಲೆ ಶೇ.25ರಷ್ಟು ಹೆಚ್ಚುವರಿ ಸುಂಕ ವಿಧಿಸಿ ಅಮೆರಿಕ ಅಧ್ಯಕ್ಷ ಆದೇಶ ಹೊರಡಿಸಿದ್ದಾರೆ. ಅಲ್ಲದೇ ಈ ಸುಂಕ ಶಾಶ್ವತವಾಗಿ ಇರುತ್ತದೆ ಎಂದೂ ಟ್ರಂಪ್ ಘೋಷಿಸಿದ್ದಾರೆ. ಅಮೆರಿಕದ ಅಧ್ಯಕ್ಷರ ಈ ನಿರ್ಧಾರದಿಂದ ಇದರಿಂದ ಕೆನಡಾದ ಆಟೋ ಉದ್ಯಮಕ್ಕೆ ದೊಡ್ಡ ಹೊಡೆತ ಬಿದ್ದಿದೆ.

## ಸರ್ಕಾರಿ ಜಮೀನು ಒತ್ತುವರಿ ಆರೋಪ ಆದೇಶ ವಿಸ್ತರಿಸಿದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು



ರಾಮನಗರ ಜಿಲ್ಲೆಯ ಬಿಡದಿ ಹೋಬಳಿಯ ಕೇತಗಾನಹಳ್ಳಿ ಸರ್ಕಾರಿ ಜಮೀನುಗಳ ಒತ್ತುವರಿ ತೆರವು ಕಾರ್ಯಾಚರಣೆಗೆ ಸಂಬಂಧಿಸಿದಂತೆ ರಾಮನಗರ ತಹಶೀಲ್ದಾರ್ ಅವರು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ನೀಡಿರುವ ನೋಟಿಸ್ ಅನುಸಾರ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗಬಾರದು ಎಂಬ ಈ ಹಿಂದಿನ ಆದೇಶವನ್ನು ಹೈಕೋರ್ಟ್ ವಿಸ್ತರಿಸಿ ಆದೇಶಿಸಿದೆ.

ಈ ಸಂಬಂಧ ಎಚ್.ಡಿ.ಕುಮಾರ ಸ್ವಾಮಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎನ್.ಎಸ್.ಸಂಜಯಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ನ್ಯಾಯಪೀಠ, ಅರ್ಜಿದಾರರ ವಿರುದ್ಧ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗಬಾರದು ಎಂಬ ಮಧ್ಯಂತರ ಆದೇಶವನ್ನು ವಿಸ್ತರಿಸಿ ವಿಚಾರಣೆಯನ್ನು ಏಪ್ರಿಲ್ 1ಕ್ಕೆ ಮುಂದೂಡಿತು.

## ಕಾಂಗ್ರೇಸ್‌ನ ನಡವಳಿಕೆಯಿಂದ ರಾಷ್ಟ್ರ ಮಟ್ಟದಲ್ಲಿ ರಾಜ್ಯಕ್ಕೆ ಕೆಟ್ಟ ಹೆಸರು

• ಉದಯವಾಹಿನಿ, ಚಿಕ್ಕಮಗಳೂರು

ಕಾಂಗ್ರೆಸ್ ಕೊಲೆಗಾರರ ಪಕ್ಷ ಎಂದು ಸಾಬೀತಾಗಿದೆ. ಮಧುಬಲೆ (ಹನಿಟ್ರ್ಯಾಪ್) ವಿಷಯದಲ್ಲಿ ಕಾಂಗ್ರೆಸ್‌ನ ನಡವಳಿಕೆಯಿಂದ ರಾಷ್ಟ್ರ ಮಟ್ಟದಲ್ಲಿ ರಾಜ್ಯಕ್ಕೆ ಕೆಟ್ಟ ಹೆಸರು ಬಂದಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು. 'ಆಡಳಿತ ಪಕ್ಷದ ಶಾಸಕರು, ವಿಧಾನ ಪರಿಷತ್ ಸದಸ್ಯರ ದೂರವಾಣಿ ಕರೆ ಕದ್ದಾಲಿಕೆ ಮಾಡಲಾಗುತ್ತಿದೆ. ಕೊಲೆ ಮಾಡಲು ಕೂಡ ಬಂದಿದ್ದರು ಎಂಬ ಹೇಳಿಕೆಗಳನ್ನು ಅವರ ಪಕ್ಷದವರೇ ನೀಡುತ್ತಿದ್ದಾರೆ. ಅಧಿಕಾರ ಉಳಿಸಿಕೊಳ್ಳಲು ಕಾಂಗ್ರೆಸ್ ಯಾವ ಹಂತಕ್ಕೂ ಹೋಗಬಲ್ಲದು ಎಂಬುದಕ್ಕೆ ಇದಕ್ಕಿಂತ ದೊಡ್ಡ ಸಾಕ್ಷಿ ಬೇಕಿಲ್ಲ ಎಂದು ಅವರು ಸುದ್ದಿಗಾರರಿಗೆ ಗುರುವಾರ ಪ್ರತಿಕ್ರಿಯಿಸಿದರು. ಈ ರೀತಿಯ ಹೊಲಸು ರಾಜಕಾರಣ ಕರ್ನಾಟಕಕ್ಕೆ ಶೋಭೆ ತರುವುದಿಲ್ಲ. ಮಂತ್ರಿಯನ್ನು ಕಾಪಾಡಿಕೊಳ್ಳುವುದು ಮುಖ್ಯಮಂತ್ರಿಯ ಕೆಲಸ. ಆದರೆ, ಅವರು ಗೃಹ ಸಚಿವರ ಕಡೆಗೆ ತೋರಿಸುತ್ತಾರೆ, ಗೃಹ ಸಚಿವರು ಮುಖ್ಯಮಂತ್ರಿ ಕಡೆಗೆ ತೋರಿಸುತ್ತಿದ್ದಾರೆ. ಇದು ಎಡಬಿಡಂಗಿ ಸರ್ಕಾರ ಎಂಬುದು ಗೊತ್ತಾಗುತ್ತಿದೆ. ನಾನೂ ಗೃಹ ಸಚಿವನಾಗಿ ಕೆಲಸ ಮಾಡಿದ್ದೇನೆ. ಸಿಐಡಿ ಅಥವಾ ಎಸ್‌ಐಟಿ ತನಿಖೆಗೆ ಒಪ್ಪಿಸುವ ಅಧಿಕಾರ ಇರುವುದು ಮುಖ್ಯಮಂತ್ರಿಗೆ ಹೊರತು ಗೃಹ ಸಚಿವರಿಗೆ ಅಲ್ಲ' ಎಂದರು. 'ಕರ್ನಾಟಕದಲ್ಲಿ ಗುಪ್ತಚರ ಇಲಾಖೆ ಸತ್ತು ಹೋಗಿದೆ. ಹೇಳುವವರು, ಕೇಳುವವರು ಯಾರೂ ಇಲ್ಲ. ದನಗಳನ್ನ ರಸ್ತೆಗೆ ಬಿಟ್ಟಂತೆ ಆಗಿದೆ' ಎಂದು ಹೇಳಿದರು.

# ನಾಯಕರೇ ಈ ರೀತಿಯಾದ್ರೆ ನಮ್ಮಂತಹ ಕಾರ್ಯಕರ್ತರ ಪಾಡೇನು

• ಉದಯವಾಹಿನಿ, ಬೆಂಗಳೂರು



**ಯತ್ನಾಳ್ ಉಚ್ಚಾಟನೆ ಬಗ್ಗೆ ಬಿಜೆಪಿಗರು ಪ್ರತಿಕ್ರಿಯೆ!**

ವಿಜಯಪುರದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್‌ರವರನ್ನ ಬಿಜೆಪಿ ಶಿಸ್ತು ಪಾಲನಾ ಸಮಿತಿ ಆರು ವರ್ಷಗಳ ಕಾಲ ಉಚ್ಚಾಟನೆ ಮಾಡಿ ಆದೇಶ ಹೊರಡಿಸಿದೆ. ತಾವು ಕೊಟ್ಟ ನೋಟಿಸ್‌ಗೆ ಉತ್ತರ ನೀಡಿಲ್ಲ ಎಂಬ ಕಾರಣ ನೀಡಿ ಬಿಜೆಪಿಯ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟನೆ ಮಾಡಿದ್ದಾರೆ.

ಬಸನಗೌಡ ಪಾಟೀಲ್ ಯತ್ನಾಳ್‌ರವರ ಕೆಲ ಹೇಳಿಕೆಗಳು ಪಕ್ಷಕ್ಕೆ ಮತ್ತು ಕಾರ್ಯಕರ್ತರಿಗೆ ಮುಜುಗರ ಉಂಟು ಮಾಡಿತ್ತು. ಹಲವಾರು ಬಾರಿ ಯತ್ನಾಳ್ ವಿರುದ್ಧ ಕಾರ್ಯಕರ್ತರೇ ದೂರು ನೀಡುವ ಮಟ್ಟಿಗೆ ಹೋಗಿತ್ತು. ಆದರೆ ಇದೀಗ ಬಸನಗೌಡ ಪಾಟೀಲ್ ಉಚ್ಚಾಟನೆ ಮಾಡಿರುವುದು ಪಕ್ಷದ ಕಾರ್ಯಕರ್ತರಿಗೂ ಹಾಗೂ ಪಕ್ಷಕ್ಕೂ ಒಂದು ರೀತಿಯಲ್ಲಿ ಸಮಾಧಾನ ತಂದಿದೆ ಎಂದು ಹೇಳಿದರು.

ಇನ್ನೂ ಪಕ್ಷಕ್ಕೆ ವಿರುದ್ಧ ಪಕ್ಷದ, ರಾಜ್ಯಾಧ್ಯಕ್ಷರ ವಿರುದ್ಧ ಮಾತನಾಡುವುದನ್ನು ಯಾರು ಕೂಡ ಮಾಡಬಾರದು ನಮ್ಮಲ್ಲಿ ನಾಯಕರೆಲ್ಲರೂ ಕೂಡ ಕಾರ್ಯಕರ್ತರೇ, ಪಕ್ಷ, ಸಂಘಟನೆ ಮೊದಲು ನಂತರ ವ್ಯಕ್ತಿ, ಉಚ್ಚಾಟನೆಯ ತೀರ್ಮಾನವನ್ನು ಹೈಕಮಾಂಡ್ ನಾಯಕರು ಸರಿಯಾಗಿ ನಿರ್ಧಾರ ಮಾಡಿದ್ದಾರೆಂದು ತಿಳಿಸಿದರು.

ಯಾರು ಕೂಡ ಪಕ್ಷದ ಮುಜುಗರ ತರವಂತಹ ಕೆಲಸವನ್ನು ಮಾಡಬಾರದು ಇನ್ನೂ ಕೆಲವರಿಗೆ ಇದು ಎಚ್ಚರಿಕೆಯ ಗಂಟೆ ಎಂದು ಇತರರಿಗೆ ಕಾರ್ಯಕರ್ತರು ಸಲಹೆ ನೀಡಿದರು.

# ಸಮೀಕ್ಷೆ ಪೂರ್ಣಗೊಳಿಸಿ ವರದಿ ಸಲ್ಲಿಸಿ



**ನ್ಯಾ.ನಾಗಮೋಹನ್ ದಾಸ್ ಆಯೋಗ ಮುಂದುವರಿಸಲು ಕ್ಯಾಬಿನೆಟ್ ತೀರ್ಮಾನ**

**ದತ್ತಾಂಶ ಸಂಗ್ರಹಕ್ಕಾಗಿ ಹೊಸ ಸಮೀಕ್ಷೆ ನಡೆಸಲು ಸಂಪುಟ ಸಭೆ**

**ಪರಿಶಿಷ್ಟ ಜಾತಿಯ ಹೊಸ ಸಮೀಕ್ಷೆ ನಡೆಸಿ ದತ್ತಾಂಶ ಸಂಗ್ರಹ**

**104 ಪುಟಗಳ ವರದಿ ಸಿಎಂಗೆ ಹಸ್ತಾಂತರ ಮಾಡಿದ ಆಯೋಗ**

### ಬೇರೆ ವಿಚಾರ ಹೇಳುವಂತಿಲ್ಲ

ವರದಿ ನೀಡಿರುವ ಹಂತದಲ್ಲಿ ಬೇರೆ ಯಾವ ವಿಚಾರವನ್ನು ಹೇಳಲು ಸಾಧ್ಯವಿಲ್ಲ. ಸರ್ಕಾರದ ತೀರ್ಮಾನ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಶಾಶ್ವತವಾದ ಪರಿಹಾರವನ್ನು ಕೊಡಬೇಕು ಎಂಬುದು ನನ್ನ ಆಸೆಯಾಗಿದೆ. ಸರ್ಕಾರ ಏನು ತೀರ್ಮಾನ ಮಾಡುತ್ತದೆ ಅದರ ಆಧಾರದಲ್ಲಿ ಅಂತಿಮ ವರದಿ ಸಲ್ಲಿಸುತ್ತೇನೆ. ಮಧ್ಯಂತರ ವರದಿ ನೀಡಿದ್ದೇನೆ, ಇದಕ್ಕೆ ಸರ್ಕಾರ ಉತ್ತರ ಕೊಟ್ಟಿಲ್ಲ. ಉತ್ತರದ ಬಳಿಕ ಮುಂದಿನ ತೀರ್ಮಾನ ಕೈಗೊಳ್ಳುತ್ತೇನೆ

-ಹೆಚ್.ಕೆ.ಪಾಟೀಲ್, ಸಚಿವ

### ಪಕ್ಷದಲ್ಲಿ ಚರ್ಚೆ ಮಾಡಿದ ನಂತರ ತೀರ್ಮಾನ



ದಲಿತ ಸಮುದಾಯಗಳಿಗೆ ಒಳ ಮೀಸಲಾತಿ ಕಲ್ಪಿಸುವ ಸಂಬಂಧ ರಚಿಸಲಾಗಿದ್ದ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಸಮಿತಿಯ ಮಧ್ಯಂತರ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವೀಕರಿಸಿದ್ದಾರೆ. ಒಳಮೀಸಲಾತಿ ಮಧ್ಯಂತರ ವರದಿ ವಿಚಾರವಾಗಿ ಚರ್ಚೆ ಮಾಡುತ್ತಿದ್ದೇವೆ. ಶಾಸಕರು, ಸಚಿವರು ಸಾಧಕ-ಬಾಧಕಗಳ ಬಗ್ಗೆ ಚರ್ಚೆ ಮಾಡುತ್ತಿದ್ದು, ಪಕ್ಷದಲ್ಲಿ ಚರ್ಚೆ ಮಾಡಿದ ನಂತರ ತೀರ್ಮಾನಕ್ಕೆ ಬರಲಾಗುವುದು ಎಂದು ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ತಿಳಿಸಿದರು. ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ ಸಂಬಂಧ ಕೇಂದ್ರ ಸರ್ಕಾರವು ಮಲತಾಯಿ ಧೋರಣೆ ತೋರುತ್ತಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು. ನಮ್ಮ ಸಂಸದರು ಕರ್ನಾಟಕ ರಾಜ್ಯದ ಸ್ವಾಭಿಮಾನ ಹಾಗೂ ಗೌರವ ಉಳಿಸಲು ಹೋರಾಟ ಮಾಡುತ್ತಿದ್ದಾರೆ. ಹತ್ತಾರು ವರ್ಷಗಳಿಂದ ರಾಯಚೂರಿನಲ್ಲಿ ಏಮ್ಸ್ ಆರಂಭಿಸಬೇಕು ಎಂದು ಪ್ರಸ್ತಾಪ ಮಾಡಲಾಗಿತ್ತು. ನಾನು ವೈದ್ಯಕೀಯ ಶಿಕ್ಷಣ ಸಚಿವನಾಗಿದ್ದಾಗಲೂ ಪ್ರಸ್ತಾವನೆ ಸಲ್ಲಿಸಲಾಗಿತ್ತು. ರಾಯಚೂರಿನಲ್ಲಿ ಜಾಗ ನೀಡುವುದು ಸೇರಿದಂತೆ ಎಲ್ಲಾ ರೀತಿಯ ಸಹಕಾರ ನೀಡಲು ರಾಜ್ಯ ಸರ್ಕಾರ ಮಾಡಿತ್ತು. ಆದರೆ ಕೇಂದ್ರ ಸರ್ಕಾರ ನಮಗೆ ಸಹಕಾರ ನೀಡುತ್ತಿಲ್ಲ ಎಂದು ತಿಳಿಸಿದರು.





• ಉದಯವಾಹಿನಿ, ಬೆಂಗಳೂರು

ಒಳಮೀಸಲಾತಿ ವರ್ಗೀಕರಣಕ್ಕೆ ಸಂಬಂಧಿಸಿದಂತೆ ನಾಗಮೋಹನ್ ದಾಸ್ ಅವರ ಏಕಸದಸ್ಯ ಆಯೋಗ ನೇಮಕ ಮಾಡಲಾಗಿತ್ತು. ಒಳಮೀಸಲಾತಿ ವರ್ಗೀಕರಣ ವಿಚಾರದಲ್ಲಿ ಮಧ್ಯಂತರ ವರದಿ ನೀಡಿದ್ದಾರೆ ಎಂದು ಸಚಿವ ಹೆಚ್.ಕೆ.ಪಾಟೀಲ್ ಹೇಳಿದರು. ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಧ್ಯಂತರ ವರದಿಯಲ್ಲಿ 4 ಶಿಫಾರಸು ಮಾಡಿದ್ದಾರೆ. ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿಯಲ್ಲಿರುವ ಉಪಜಾತಿಗಳ ವೈಜ್ಞಾನಿಕ ವರ್ಗೀಕರಣವನ್ನು ಹೊಸದಾದ ಸಮೀಕ್ಷೆ ನಡೆಸಿ ದತ್ತಾಂಶವನ್ನು ಸಂಗ್ರಹಿಸಬೇಕು. ನೂತನ ವಿಜ್ಞಾನ ತಂತ್ರಜ್ಞಾನದ ಸಾಧನೆಗಳನ್ನು ಬಳಸಿ 30 ರಿಂದ 40 ದಿವಸಗಳ ಒಳಗೆ ಹೊಸದಾದ ಸಮೀಕ್ಷೆಯನ್ನು ನಡೆಸಬಹುದು. ಹೊಸ ಸಮೀಕ್ಷೆ ನಡೆಸಲು ಅಗತ್ಯವಿರುವ ಪ್ರಶ್ನಾವಳಿ ಸಿದ್ಧಪಡಿಸಬೇಕು. ಇದಕ್ಕೆ ಉನ್ನತ ಮಟ್ಟದ ಸಮಿತಿ ರಚನೆ ಸೂಕ್ತ ಎಂದರು.

ಹೊಸ ಸಮೀಕ್ಷೆಯ ದತ್ತಾಂಶದ ಆಧಾರದ ಮೇಲೆ ಆದ್ಯತೆಯ ಮೇರೆಗೆ ಹಂಚಿಕೆ ಮಾಡಬೇಕು ಅಂತಾ ಶಿಫಾರಸು ಮಾಡಿದ್ದಾರೆ. ಅಲ್ಲದೇ ನಾಗಮೋಹನ್ ದಾಸ್ ಸಮಿತಿಯನ್ನೇ ಮುಂದುವರಿಸಲು ಕ್ಯಾಬಿನೆಟ್ ತೀರ್ಮಾನ ಮಾಡಿದ್ದು, 60 ದಿವಸಗಳ ಒಳಗೆ ಈ ಕಾರ್ಯವನ್ನು ಪೂರ್ಣಗೊಳಿಸಲು ತೀರ್ಮಾನ ಮಾಡಲಾಗಿದೆ ಎಂದು ತಿಳಿಸಿದರು. ಆಯೋಗ 60 ದಿನದೊಳಗೆ ಸಮೀಕ್ಷೆ ಮಾಡುತ್ತೇವೆ ಅಂದಿದ್ದಾರೆ. ನಾವು ಅದಕ್ಕೆ ಅನುಮತಿ ಕೊಟ್ಟಿದ್ದೇವೆ. ಜನಗಣತಿಯಲ್ಲಿ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂದು ಇದೆ. ಆದರೆ ಇದರಲ್ಲಿ ಇರುವ ಗೊಂದಲ ಬಗೆಹರಿಸುವ ಉದ್ದೇಶ ಇದೆ ಎಂದರು.

**ಉನ್ನತ ಮಟ್ಟದ ಸಮಿತಿ ರಚನೆ:** ಜೊತೆಗೆ, ಆಧುನಿಕ ತಂತ್ರಜ್ಞಾನ ಬಳಸಿ 40 ದಿನದೊಳಗೆ ಹೊಸದಾಗಿ ಸಮೀಕ್ಷೆ ನಡೆಸಬಹುದಾಗಿದೆ ಎಂದು ವರದಿಯಲ್ಲಿ ಅಭಿಪ್ರಾಯಿಸಲಾಗಿದೆ. ಈ ನಿಟ್ಟಿನಲ್ಲಿ ಸಮೀಕ್ಷೆ ನಡೆಸಲು ಅಗತ್ಯ ಪ್ರಶ್ನಾವಳಿ ಸಿದ್ಧಪಡಿಸಿ, ಆಯೋಗಕ್ಕೆ ಬೇಕಾಗುವ ಮಾಹಿತಿ, ಅಗತ್ಯ ಸೌಲಭ್ಯ, ಸಂಪನ್ಮೂಲ, ಮೂಲ ಸೌಕರ್ಯಗಳನ್ನು ಕಲ್ಪಿಸಲು ಸಿಎಸ್ ನೇತೃತ್ವದ ಉನ್ನತ ಮಟ್ಟದ ಸಮಿತಿ ರಚನೆ ಮಾಡುವಂತೆ ಆಯೋಗ ವರದಿ ಶಿಫಾರಸು ಮಾಡಿದೆ ಎಂದರು.

**ಒಳಮೀಸಲಾತಿ ಶೀಘ್ರ ಜಾರಿಗಾಗಿ ಸಮೀಕ್ಷೆ:** ನಾಗಮೋಹನ್ ದಾಸ್ ಆಯೋಗ ವರದಿಯನ್ನು ಸಚಿವ ಸಂಪುಟ ಸಭೆ ಅಂಗೀಕರಿಸಿದೆ. ಒಳಮೀಸಲಾತಿ ಶೀಘ್ರ ಜಾರಿಗಾಗಿ ಸಮೀಕ್ಷೆ ನಡೆಸಲು ನಾಗಮೋಹನ್ ದಾಸ್ ಆಯೋಗವನ್ನೇ ಕೇಳಿಕೊಳ್ಳಲು ನಿರ್ಣಯಿಸಲಾಗಿದೆ. ಎರಡು ತಿಂಗಳ ಒಳಗೆ ಸಮೀಕ್ಷೆ ಪೂರ್ಣಗೊಳಿಸಿ, ಸಮೀಕ್ಷಾ ವರದಿ ಸಲ್ಲಿಸುವ ನಿಟ್ಟಿನಲ್ಲಿ ಆಯೋಗದ ಅವಧಿಯನ್ನು ಎರಡು ತಿಂಗಳಿಗೆ ವಿಸ್ತರಿಸಲು ತೀರ್ಮಾನಿಸಲಾಗಿದೆ.

ಸಮೀಕ್ಷೆಯ ದತ್ತಾಂಶದ ಆಧಾರದಲ್ಲಿ ಎಸ್‌ಸಿ ವರ್ಗೀಕರಣ ಮಾಡಿ ಆದ್ಯತೆ ಮೇರೆಗೆ ಒಳಮೀಸಲಾತಿ ಹಂಚಿಕೆ ಮಾಡ ಲಾಗುವುದು. ಮನೆ ಮನೆಗೆ ಹೋಗಿ ಸಮೀಕ್ಷೆ ನಡೆಸಲಾಗುವುದು ಎಂದು ತಿಳಿಸಿದರು.

**ಎರಡು ತಿಂಗಳ ಒಳಗೆ ವರದಿ :** ಆದಿ ಜಾಂಬವ, ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಸೇರಿ ಸುಮಾರು 46 ಲಕ್ಷ ಉಪಜಾತಿಗಳ ಗೊಂದಲ ಇದ್ದು, ಸಮೀಕ್ಷೆಯಲ್ಲಿ ಈ ಗೊಂದಲಕ್ಕೆ ತೆರೆ ಬೀಳಲಿದೆ. ಆಯೋಗವೇ ಸಮೀಕ್ಷೆ ನಡೆಸಲಿದ್ದು, ಅದಕ್ಕೆ ಬೇಕಾಗುವ ಸಿಬ್ಬಂದಿಯನ್ನು ಮುಖ್ಯ ಕಾರ್ಯದರ್ಶಿ ನೇತೃತ್ವದ ಉನ್ನತ ಮಟ್ಟದ ಸಮಿತಿ ಒದಗಿಸಿಕೊಡಲಿದೆ. ರಾಜ್ಯದಲ್ಲಿ ಸುಮಾರು 2.10 ಕೋಟಿಗೂ ಅಧಿಕ ಎಸ್‌ಸಿ ಸಮುದಾಯದವರು ಇದ್ದು, ಎಲ್ಲಾ 101 ಎಸ್‌ಸಿ ಉಪಜಾತಿಗಳ ಸಂಬಂಧ ಸಮೀಕ್ಷೆ ನಡೆಸಿ, ಎರಡು ತಿಂಗಳ ಒಳಗೆ ವರದಿ ನೀಡಲಿದೆ ಎಂದು ಸಚಿವರು ವಿವರಿಸಿದರು.

**1** ಬಿಸಿಬಿಸಿ ಚರ್ಚೆ ಹಾಗೂ ವಿವಾದಗಳ ನಡುವೆ ನ್ಯಾ. ನಾಗಮೋಹನ್ ದಾಸ್ ಅವರ ಒಳಮೀಸಲಾತಿ ಮಧ್ಯಂತರ ವರದಿ ಸಲ್ಲಿಕೆ.

**2** ಮಾ. 27ರಂದು ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ವರದಿ ಸಲ್ಲಿಸಿದ ನ್ಯಾ. ನಾಗಮೋಹನ್ ದಾಸ್.

**3** ಮಧ್ಯಂತರ ವರದಿಯಲ್ಲಿ ಸರ್ಕಾರಿ ನೌಕರಿಗಳಲ್ಲಿ ಒಳಮೀಸಲಾತಿ ಬಗ್ಗೆ ಉಲ್ಲೇಖ ಮಾಡಿಲ್ಲ ಎಂದು ಸ್ಪಷ್ಟಪಡಿಸಿದ ನ್ಯಾ. ನಾಗಮೋಹನ್ ದಾಸ್

**ಕ್ಯಾಬಿನೆಟ್ ನಲ್ಲಿ ಚರ್ಚೆ!**

ಈಗಾಗಲೇ ನ್ಯಾ. ನಾಗಮೋಹನ್ ದಾಸ್ ಅವರು ತಮ್ಮ ವರದಿಯನ್ನು ಸಿಎಂ ಸಿದ್ದರಾಮಯ್ಯ ಅವರಿಗೆ ನೀಡಿದ್ದು, ಕ್ಯಾಬಿನೆಟ್ ನಲ್ಲಿ ಈ ವಿಚಾರ ಚರ್ಚೆ ಆಗುವ ಸಾಧ್ಯತೆ ಇದೆ. ಒಳಮೀಸಲಾತಿಗಾಗಿ ಹೋರಾಟ ತೀವ್ರಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕ್ಯಾಬಿನೆಟ್ ಸಭೆಯಲ್ಲಿ ಏನು ತೀರ್ಮಾನ ಕೈಗೊಳ್ಳಲಾಗುವುದು ಎಂಬುದು ಮಹತ್ವ ಪಡೆದಿದೆ.

**ಮಧ್ಯಂತರ ವರದಿ ಸಲ್ಲಿಕೆ**

## ಬೆಂಗಳೂರಲ್ಲಿ ಖಾಸಗಿ ಟ್ಯಾಂಕರ್‌ಗಳಿಂದ ದುಪ್ಪಟ್ಟು ಹಣ ವಸೂಲಿ

• ಉದಯವಾಹಿನಿ, ಬೆಂಗಳೂರು



**ತೀವ್ರ ನೀರಿನ ಅಭಾವದ ಪರಿಣಾಮ**

ರಾಜಧಾನಿಯಲ್ಲಿ ಬೇಸಿಗೆ ಶುರುವಾಗುತ್ತಿದ್ದಂತೆ ಖಾಸಗಿ ಟ್ಯಾಂಕರ್‌ಗಳ ಹಾವಳಿ ಶುರುವಾಗಿದ್ದು, ಮಾಲೀಕರು ನೀರಿಗೆ ದುಪ್ಪಟ್ಟು ಹಣ ವಸೂಲಿ ಮಾಡುವ ಆರೋಪ ಕೇಳಿ ಬಂದಿದೆ. ಇದಕ್ಕೆ ಕಡಿವಾಣ ಹಾಕಬೇಕಾದ ಜಿಲ್ಲಾಡಳಿತ ಮತ್ತು ನಗರ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಕೈಚೆಲ್ಲಿದ್ದಾರೆ.

ಪ್ರತಿ ವರ್ಷ ಬೇಸಿಗೆಯಲ್ಲೂ ನಗರದಲ್ಲಿ ಸಾಕಷ್ಟು ಜನರು ನೀರಿಗಾಗಿ ಖಾಸಗಿ ಟ್ಯಾಂಕರ್‌ಗಳನ್ನು ಅವಲಂಬಿಸುವುದು ಸಾಮಾನ್ಯವಾಗಿದೆ. ಆದರೆ, ಕಳೆದ ವರ್ಷ ಉದ್ಭವಿಸಿದ ತೀವ್ರ ನೀರಿನ ಅಭಾವದ ಪರಿಣಾಮ, ಟ್ಯಾಂಕರ್ ಮಾಲೀಕರು ತಮ್ಮ ಇಚ್ಛಾನುಸಾರ ಹಣ ವಸೂಲಿ ಮಾಡುತ್ತಿದ್ದರು. ಇದರಿಂದ ಕಂಗಾಲಾದ ಜನರು, ನಗರದ ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ದೂರು ನೀಡಿದ ಹಿನ್ನೆಲೆಯಲ್ಲಿ ಜಿಲ್ಲಾಡಳಿತವೇ ನೀರಿನ ದರ ನಿಗದಿಪಡಿಸಿತ್ತು. ಈ ಬೇಸಿಗೆಯಲ್ಲೂ ಅದೇ ದರ ಮುಂದುವರಿಸಬೇಕಿದ್ದರೂ, ನಗರದ ಹಲವೆಡೆ ಖಾಸಗಿ ಟ್ಯಾಂಕರ್ ಮಾಲೀಕರು ಎರಡು ಪಟ್ಟು ಹಣ ವಸೂಲಿ ಮಾಡುತ್ತಿದ್ದಾರೆ ಎಂಬ ದೂರುಗಳು ಕೇಳಿ ಬಂದಿವೆ.

**ವಿವಿಧೆಡೆ ದುಪ್ಪಟ್ಟು**

ಮಂಜುನಾಥ ನಗರ, ರಾಮಯ್ಯ ಲೇಔಟ್, ದಾಸರಹಳ್ಳಿ, ಪೀಣ್ಯ, ಬಾಗಲಗುಂಟೆ ಸುತ್ತಲಿನ ಪ್ರದೇಶಗಳಲ್ಲಿ 6 ಸಾವಿರ ಲೀಟರ್‌ಗೆ 600 ರಿಂದ 700 ರೂ.ಬೆಲೆ ನಿಗದಿ ಮಾಡಿದ್ದರೆ, ಕೆಂಗೇರಿ, ಆರ್‌ಆರ್‌ನಗರ, ನಾಗದೇವನಹಳ್ಳಿ, ಶಿರ್ಕೆ, ಭುವನೇಶ್ವರಿನಗರ (ಕೆಂಚನಪುರ ಕ್ರಾಸ್), ಕೆ.ಆರ್.ಪುರ, ಕಾಡುಗೋಡಿ ಸುತ್ತಲಿನ ಹಲವು ಪ್ರದೇಶಗಳಲ್ಲಿ 800 ರೂ-1000 ರೂ., 5 ಕಿ.ಮೀ.ಗಿಂತ ದೂರಕ್ಕೆ ನೀರು ಪೂರೈಸಲು 1200-1500ರೂ. ವಸೂಲಿ ಮಾಡಲಾಗುತ್ತಿದೆ.

## ಹಾಲು, ಮೊಸರು ಬೆಲೆ ಏರಿಕೆ ಬೆನ್ನಲ್ಲೇ ವಿದ್ಯುತ್ ದರ ಹೆಚ್ಚಳ

• ಉದಯವಾಹಿನಿ, ಬೆಂಗಳೂರು



**ಪ್ರತಿ ಯೂನಿಟ್‌ಗೆ 36 ಪೈಸೆ ಏರಿಕೆ**

ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟದಲ್ಲಿ ನಂದಿನಿ ಹಾಲು ಹಾಗೂ ಮೊಸರು ದರ ಏರಿಕೆಗೆ ಗ್ರೀನ್ ಸಿಗ್ನಲ್ ನೀಡಿದೆ. ಹೀಗಾಗಿ ನಂದಿನಿ ಹಾಲು ಮತ್ತು ಮೊಸರು ಪ್ರತಿ ಲೀಟರ್‌ಗೆ ಬರೋಬ್ಬರಿ 4 ರೂ. ಏರಿಕೆ ಮಾಡಲಾಗಿದೆ. ಇದರ ಬೆನ್ನಲ್ಲೇ ಇಂದೇ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಜನರಿಗೆ ವಿದ್ಯುತ್ ಶಾಕ್ ಕೊಟ್ಟಿದೆ. ಹೌದುಪ್ರತಿ ಯೂನಿಟ್‌ಗೆ 36 ಪೈಸೆ ಹೆಚ್ಚಳ ಮಾಡಿ ಕೆಇಆರ್‌ಸಿ ಅಧಿಕೃತ ಆದೇಶ ಹೊರಡಿಸಿದ್ದು, ಪರಿಷ್ಕೃತ ವಿದ್ಯುತ್ ದರ ಏಪ್ರಿಲ್ 1ರಿಂದಲೇ ಅನ್ವಯವಾಗಲಿದೆ. ಮುಂದಿನ ಮೂರು ವರ್ಷಗಳಿಗೆ ದರ ಏರಿಕೆ ಮಾಡಿ ಪಟ್ಟಿ ಆದೇಶಿಸಿದೆ.

ಯೂನಿಟ್‌ಗೆ 49 ಪೈಸೆ ಏರಿಕೆ ಮಾಡುವಂತೆ ಡಿಸೆಂಬರ್ ಕೊನೆಯ ವಾರದಲ್ಲಿ ಎಸ್ಕಾಂಗಳು ಕೆಇಆರ್‌ಸಿ ಪ್ರಸ್ತಾವನೆ ಸಲ್ಲಿಸಿದ್ದವು. ಪ್ರಸ್ತಾವನೆಯಂತೆ ಉತ್ಪಾದನೆಯ ಖರ್ಚು-ವೆಚ್ಚ ಮತ್ತು ನಿರ್ವಹಣೆಯ ನಷ್ಟ ಸರಿದೂಗಿಸುವ ನಿಟ್ಟಿನಲ್ಲಿ ದರ ಏರಿಕೆಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಹೀಗಾಗಿ ಕೆಇಆರ್‌ಸಿ ಅಧಿಕೃತವಾಗಿ ಪ್ರತಿ ಯೂನಿಟ್ ವಿದ್ಯುತ್‌ಗೆ 36 ಪೈಸೆ ಏರಿಕೆ ಮಾಡಿ ಆದೇಶ ಹೊರಡಿಸಿದೆ. ಏಪ್ರಿಲ್ 1 ರಿಂದಲೇ ಹೊಸ ದರ ಜಾರಿಯಾಗಲಿದ್ದು, ರಾಜ್ಯದ ಜನರಿಗೆ ವಿದ್ಯುತ್ ದರದ ಬಿಸಿ ತಟ್ಟಲಿದೆ.

ಇತ್ತೀಚೆಗಷ್ಟೇ ಬೆಂಗಳೂರು ನಮ್ಮ ಮೆಟ್ರೋ ದರ ಏರಿಕೆ ಮಾಡಲಾಗಿತ್ತು. ಅದಕ್ಕೂ ಮುನ್ನ ಕೆಎಸ್ ಆರ್‌ಟಿಸಿ ಬಸ್ ಪ್ರಯಾಣ ದರವೂ ಹೆಚ್ಚಿಸಲಾಗಿತ್ತು. ಹಾಗೇ ಮದ್ಯದ ದರ ಏರಿಕೆ. ಹೀಗೆ ಸಾಲು ಸಾಲು ಬೆಲೆ ಏರಿಕೆಯಿಂದ ಕಂಗೆಟ್ಟಿರುವ ರಾಜ್ಯದ ಜನತೆಗೆ ಇಂದು ಹಾಲು ಹಾಗೂ ಮೊಸರು ದರ ಏರಿಕೆ ಬಿಸಿ ಮುಟ್ಟಿದೆ. ಇದರ ಬೆನ್ನಲ್ಲೇ ಇದೀಗ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಕೂಡ ವಿದ್ಯುತ್ ಶಾಕ್ ಕೊಟ್ಟಿದೆ.

# ಬೆಂಗಳೂರು ಎರಡನೇ ಏರ್‌ಪೋರ್ಟ್ ನಿರ್ಮಾಣಕ್ಕೆ ನೂರೆಂಟು ವಿಘ್ನ

**| ಅಸದ್ಯ ಬಂದ್ ಆಗಿರುವ ಹೆಚ್‌ಎಎಲ್ ಏರ್‌ಪೋರ್ಟ್ ಅನ್ನೇ ಮತ್ತೆ ಕಾರ್ಯಾರಂಭ ಮಾಡಲು ಸಂಸದ ತೇಜಸ್ವಿ ಸೂರ್ಯ ಒತ್ತಾಯ**

• ಉದಯವಾಹಿನಿ, ಹೊಸದಿಲ್ಲಿ

ಬೆಂಗಳೂರಿನ ದೇವನಹಳ್ಳಿ ಬಳಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಎರಡು ಟರ್ಮಿನಲ್‌ಗಳೊಂದಿಗೆ ಕಾರ್ಯಾಚರಣೆ ನಡೆಸುತ್ತಿದೆ. ಇಲ್ಲಿ ದಟ್ಟಣೆ ಹೆಚ್ಚಾದ ಕಾರಣಕ್ಕೆ ಪರ್ಯಾಯವಾಗಿ ಎರಡನೇ ಏರ್‌ಪೋರ್ಟ್ ನಿರ್ಮಾಣಕ್ಕೆ ಮುಂದಾಗಿದೆ. ಆದರೆ ಇದಕ್ಕೂ ಮುನ್ನ ಬೆಂಗಳೂರಿನ ಏರ್‌ಪೋರ್ಟ್ ಆಗಿ ಕರೆಸಿಕೊಂಡಿದ್ದು, ಹೆಚ್‌ಎಎಲ್ ಏರ್‌ಪೋರ್ಟ್. ಹೌದು ಈ ಏರ್‌ಪೋರ್ಟ್ ನಗರದ ಒಳಗೆ ಇತ್ತು. ಇದೇ ಬೆಂಗಳೂರಿಗೆ ಮೊದಲನೇ ಏರ್‌ಪೋರ್ಟ್ ಆಗಿ ಕಾರ್ಯಾಚರಣೆ ನಡೆಸುತ್ತಿತ್ತು. ಆದರೆ, ಬೆಂಗಳೂರು ದಿಢೀರ್ ಬೆಳವಣಿಗೆ ಹೊಂದಿದ್ದರಿಂದ ಈ ಏರ್‌ಪೋರ್ಟ್ ಪ್ರಯಾಣಿಕರಿಗೆ ಸಾಕಾಗುತ್ತಿರಲಿಲ್ಲ. ಈ ಕಾರಣಕ್ಕೆ ಹೆಚ್‌ಎಎಲ್ ಏರ್‌ಪೋರ್ಟ್ ಬದಲಿಗೆ ಹೊಸ ಹಾಗೂ ವಿಸ್ತಾರವಾದ ಏರ್‌ಪೋರ್ಟ್ ನಿರ್ಮಾಣ ಮಾಡಬೇಕು ಎಂಬ ದೃಷ್ಟಿಯಿಂದಲೇ ದೇವನಹಳ್ಳಿ ಬಳಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸಲಾಯಿತು.

ಕೆಲ ವರ್ಷಗಳ ಇದಕ್ಕೆ ಕೆಂಪೇಗೌಡರ ಏರ್‌ಪೋರ್ಟ್ ಎಂದು ಮರುನಾಮರಕಣ ಮಾಡಲಾಯಿತು. ಆದರೆ ಈಗ ಇಲ್ಲಿಯೂ ದಟ್ಟಣೆ ತಗ್ಗಿಸಲು ಮತ್ತೊಂದು ಏರ್‌ಪೋರ್ಟ್ ನಿರ್ಮಾಣಕ್ಕೆ ಸಿದ್ಧತೆ ನಡೆದಿದೆ.

**ಹೆಚ್‌ಎಎಲ್ ಪುನರಾರಂಭಕ್ಕೆ ಕೇಂದ್ರದ ಆಸಕ್ತಿ**



ಎರಡನೇ ಏರ್‌ಪೋರ್ಟ್ ಬದಲಿಗೆ ಸದ್ಯ ಬಂದ್ ಆಗಿರುವ ಹೆಚ್‌ಎಎಲ್ ಏರ್‌ಪೋರ್ಟ್ ಅನ್ನೇ ಮತ್ತೆ ಕಾರ್ಯಾರಂಭ ಮಾಡಬೇಕು ಎಂದು ಹಲವರು ಒತ್ತಾಯಿಸುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಕೂಡ ಧ್ವನಿ ಎತ್ತಿದ್ದಾರೆ. ಇತ್ತೀಚೆಗಷ್ಟೇ ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಅವರನ್ನೂ ಭೇಟಿಯಾಗಿ ಮನವಿಯೂ ಸಲ್ಲಿಸಿ ಬಂದಿದ್ದಾರೆ. ಬೆಂಗಳೂರಿಗಾಗಿ ಹೆಚ್‌ಎಎಲ್ ವಿಮಾನ ನಿಲ್ದಾಣದ ಪುನರಾರಂಭಕ್ಕೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ತೇಜಸ್ವಿ ಸೂರ್ಯ ತಿಳಿಸಿದ್ದಾರೆ. ಈ ಸಂಬಂಧ ಶೀಘ್ರದಲ್ಲೇ ದೆಹಲಿಯಲ್ಲಿ ಸಭೆ ಕೂಡ ನಡೆಯಲಿದೆ.

ಕೇಂದ್ರದಲ್ಲೂ ಬಿಜೆಪಿ ಸರ್ಕಾರ ಇರುವುದರಿಂದ ತೇಜಸ್ವಿ ಸೂರ್ಯ ಅವರ ಬೇಡಿಕೆಯಂತೆ ಹೆಚ್‌ಎಎಲ್ ಪುನರಾರಂಭವಾಗುವ ಸಾಧ್ಯತೆಯೂ ದಟ್ಟವಾಗಿದೆ. ಎರಡನೇ ಏರ್‌ಪೋರ್ಟ್ ನಿರ್ಮಾಣಕ್ಕೆ ರಾಜ್ಯ ಕಾಂಗ್ರೆಸ್ ಸರ್ಕಾರ ಮುಂದಾಗಿರುವುದರಿಂದ ಆ ಮನವಿಯನ್ನು ತಿರಸ್ಕರಿಸಲೂಬಹುದು ಅಥವಾ ಮುಂದೂಡುವ ಸಾಧ್ಯತೆ ಇದೆ.

**ಸದ್ಯಕ್ಕೆ ಕನಸಿನ ಮಾತಾಗಲಿದೆ**

ಈಗ ಒಂದೇ ಊರಿನ ಒಂದೇ ವಿಚಾರದ ಎರಡು ಬೇಡಿಕೆಗಳು ಕೇಂದ್ರದ ಅಂಗಳದಲ್ಲಿದೆ. ಈ ಪೈಕಿ ಯಾವ ಬೇಡಿಕೆಗೆ ಕೇಂದ್ರ ಸರ್ಕಾರ ಗ್ರೀನ್ ಸಿಗ್ನಲ್ ಕೊಡುತ್ತದೆಯೋ ಕಾದು ನೋಡಬೇಕಿದೆ. ಒಂದು ವೇಳೆ ಹೆಚ್‌ಎಎಲ್ ಏರ್‌ಪೋರ್ಟ್‌ಗೆ ಓಕೆ ಅಂದ್ರೆ, ಎರಡನೇ ಏರ್‌ಪೋರ್ಟ್ ನಿರ್ಮಾಣ ಸದ್ಯಕ್ಕೆ ಕನಸಿನ ಮಾತಾಗಲಿದೆ. ಹೆಚ್‌ಎಎಲ್ ಏರ್‌ಪೋರ್ಟ್ ಬೇಡ ಎಂದರಷ್ಟೇ ಎರಡನೇ ವಿಮಾನ ನಿಲ್ದಾಣ ನಿರ್ಮಾಣದ ಹಾದಿ ಸುಗಮವಾಗಲಿದೆ.

ಇನ್ನೂ ಮುಖ್ಯವಾದ ವಿಚಾರವೆಂದರೆ ಹೆಚ್‌ಎಎಲ್ ಈಗಾಗಲೇ ಏರ್‌ಪೋರ್ಟ್‌ನ ಎಲ್ಲಾ ಸೌಲಭ್ಯಗಳನ್ನು ಹೊಂದಿದೆ. ಹಾಗಾಗಿ ಹೊಸ ಏರ್‌ಪೋರ್ಟ್ ಬದಲಿಗೆ ಹೆಚ್‌ಎಎಲ್ ಅನ್ನೇ ಅಭಿವೃದ್ಧಿಪಡಿಸುವುದು ಸುಲಭವಾದ ಕೆಲಸ.

ಈಗ ಪರ್ಯಾಯ ಏರ್‌ಪೋರ್ಟ್ ಆಗಿರುವ ಕಾರಣ ಹೆಚ್ ಎಎಲ್ ಅನ್ನೇ ಮತ್ತೆ ಆರಂಭಿಸುವುದು ಒಳಿತು ಎಂಬ ಸಲಹೆ ಕೂಡ ಸರಿಯಾಗಿದೆ. ಹೀಗಾಗಿ ಹೆಚ್‌ಎಎಲ್‌ಗೂ ಗ್ರೀನ್ ಸಿಗ್ನಲ್ ಕೊಡಬಹುದು. ಇದರಿಂದ ಬೆಂಗಳೂರು ಎರಡನೇ ಏರ್‌ಪೋರ್ಟ್‌ಗೆ ಹಿನ್ನಡೆಯಾಗಬಹುದು ಎಂದು ಹೇಳಲಾಗುತ್ತಿದೆ. ಕರ್ನಾಟಕ ಸರ್ಕಾರ ಕೂಡ ಕೇಂದ್ರಕ್ಕೆ ಈಗಾಗಲೇ ಮೂರು ಜಾಗಗಳನ್ನು ಗುರುತಿಸಿ, ಸ್ಥಳ ಪರಿಶೀಲನೆಗೆ ಮನವಿ ಮಾಡಿದೆ. ಅತ್ತ ತೇಜಸ್ವಿ ಸೂರ್ಯ ಕೂಡ ಕೇಂದ್ರ ಸರ್ಕಾರಕ್ಕೆ ಹೆಚ್‌ಎಎಲ್ ಏರ್‌ಪೋರ್ಟ್ ಪುನರಾರಂಭಕ್ಕೆ ಮನವಿ ಮಾಡಿದ್ದಾರೆ.

**ಈ ದಿನದ ದರ** | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹8,984/Gram24ct ₹8,235/Gram22ct | ಬೆಳ್ಳಿ: ₹102.00/Gram

# 19,000 ಕೋಟಿ ದಾಟಲಿದೆ ಬಿಬಿಎಂಪಿ ಬಜೆಟ್, ಮಂಡನೆ

## ಸರ್ಕಾರ ಇದೇ ಮೊದಲ ಬಾರಿಗೆ ಬಿಬಿಎಂಪಿಗೆ 7 ಸಾವಿರ ಕೋಟಿ ರೂ.ಗಳ ಅನುದಾನ ಘೋಷಣೆ

• **ಉದಯವಾಹಿನಿ, ಬೆಂಗಳೂರು**

ಪ್ರಸಕ್ತ ಸಾಲಿನ ಬಿಬಿಎಂಪಿ ಬಜೆಟ್ ಶನಿವಾರ ಮಂಡನೆಯಾಗಲಿದೆ. ಸರ್ಕಾರ ಇದೇ ಮೊದಲ ಬಾರಿಗೆ ಬಿಬಿಎಂಪಿಗೆ 7 ಸಾವಿರ ಕೋಟಿ ರೂ.ಗಳ ಅನುದಾನ ಘೋಷಣೆ ಮಾಡಿರುವುದರಿಂದ ಈ ಬಾರಿಯ ಬಜೆಟ್ 19 ಸಾವಿರ ಕೋಟಿ ರೂ.ಗಳ ಗಡಿ ದಾಟುವ ಸಾಧ್ಯತೆಗಳಿವೆ.

ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಗರದ ಶಾಸಕರ ಸಭೆ ನಡೆಸಿದ ಬಳಿಕ ಬಜೆಟ್‌ನಲ್ಲಿ ಸಾಕಷ್ಟು ಬದಲಾವಣೆ ತರಲು ತೀರ್ಮಾನಿಸಲಾಗಿದೆ.ಶನಿವಾರ ಬೆಳಗ್ಗೆ 11 ಗಂಟೆಗೆ ಪುರಭವನದಲ್ಲಿ ಬಿಬಿಎಂಪಿ ಆಡಳಿತಾಧಿಕಾರಿ ಉಮಾಶಂಕರ್ ಹಾಗೂ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧ್ಯಕ್ಷತೆಯಲ್ಲಿ ಹಣಕಾಸು ವಿಭಾಗದ ವಿಶೇಷ ಆಯಯಕ್ತ ಹರೀಶ್ ಮಂಡನೆ ಮಾಡಲಿದ್ದಾರೆ. ದಾಖಲೆಯ 19 ಸಾವಿರ ಕೋಟಿ ಬಜೆಟ್: ರಾಜಧಾನಿ ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿಗೆ ಮಹತ್ವದ ಯೋಜನೆಗಳನ್ನು ಕೈಗೊಳ್ಳುವ ಉದ್ದೇಶದಿಂದ ರಾಜ್ಯ ಸರ್ಕಾರವು ಬಜೆಟ್‌ನಲ್ಲಿ ಬರೋಬ್ಬರಿ 7 ಸಾವಿರ ಕೋಟಿ ರೂ. ಅನುದಾನ ಒದಗಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ. ಆಸ್ತಿ ತೆರಿಗೆ ಹಾಗೂ ಸರ್ಕಾರದ ಅನುದಾನ



ನೆಚ್ಚಿಕೊಂಡು ಬಜೆಟ್ ಮಂಡಿಸುವ ಬಿಬಿಎಂಪಿಗೆ ಈ ಬಾರಿಯ ಸರ್ಕಾರದ ದೊಡ್ಡ ಮೊತ್ತದ ಅನುದಾನ ಘೋಷಣೆಯಿಂದ ಬಹುದೊಡ್ಡ ಬಲ ಸಿಕ್ಕಂತ್ತಾಗಿದೆ. ಇದರೊಂದಿಗೆ ಸಾರ್ವಜನಿಕರಿಗೆ ಹೊರೆಯಾಗದಂತೆ ಜಾಹೀರಾತು, ಪ್ರೀಮಿಯಂ ಎಫ್‌ಎಆರ್ ಸೇರಿದಂತೆ ಹೊಸ ಆದಾಯ ಮೂಲಗಳನ್ನು ಹುಡುಕಾಟದಲ್ಲಿದ್ದು, ಆ ಎಲ್ಲವನ್ನೂ ಒಟ್ಟುಗೂಡಿಸಿಕೊಂಡು ಸುಮಾರು 19 ಸಾವಿರ ಕೋಟಿ ರೂ.ಗಳ ಬಜೆಟ್ ಮಂಡಿಸುವುದಕ್ಕೆ ತಯಾರಿ ಮಾಡಿಕೊಳ್ಳಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ. ಪ್ರಮುಖವಾಗಿ 40 ಸಾವಿರ ಕೋಟಿ ರೂ. ವೆಚ್ಚದ ಪೂರ್ವ–ಪಶ್ಚಿಮ ಹಾಗೂ ಉತ್ತರ– ದಕ್ಷಿಣ ಸುರಂಗ ಕಾರಿಡಾರ್ ಯೋಜನೆಗೆ ಬಿಬಿಎಂಪಿಯ ಬಜೆಟ್‌ನಲ್ಲಿ ಬುನಾದಿ ಹಾಕುವ ಸಾಧ್ಯತೆ ಇದೆ. ಜತೆಗೆ, ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಡಿ, ಕೆರೆ, ಪ್ರವಾಹ ನಿಯಂತ್ರಣ ಕಾಮಗಾರಿಗಳು, ವಿಶ್ವ ಬ್ಯಾಂಕ್ ನೆರವಿನ ಯೋಜನೆಗಳು ಬಿಬಿಎಂಪಿಯ ಬಜೆಟ್‌ನಲ್ಲಿ ಅಡಕವಾಗಿರುವ ಸಾಧ್ಯತೆ ಇದೆ.

> **ಕಾಮಗಾರಿ ವಿಭಾಗ**
>
> **ಬ್ರ್ಯಾಂಡ್ ಬೆಂಗಳೂರು ಹೆಸರಲ್ಲಿ ಕೆಲ ರಸ್ತೆಗಳಿಗೆ ವೈಟ್ ಟ್ಯಾಪಿಂಗ್..ಪಾರ್ಕ್, ಫುಟ್ ಪಾತ್ ಉನ್ನತಿಕರಣ, ಹಾಗೂ ಹೈಟೆಕ್ ಸ್ಪರ್ಶ.ಟ್ರಾಫಿಕ್ ಕಂಟ್ರೋಲ್‌ಗೆ ಅಂಡರ್ ಪಾಸ್ ನಿರ್ಮಾಣ. ಕೆರೆ. ರಾಜಕಾಲುವೆ ಹುಳು ಎತ್ತುವುದಕ್ಕೆ ಹೆಚ್ಚಿನ ಒತ್ತು. ಪಾಲಿಕೆ ವ್ಯಾಪ್ತಿಯ ಅಸ್ತಿಗಳ ರಕ್ಷಣೆಗೆ ತಂತಿಬೇಲಿ ನಿರ್ಮಾಣ. ನಗರದ ವಿವಿಧ ಕಡೆ ಪಾರ್ಕಿಂಗ್ ಸ್ಥಳಗಳ ನಿರ್ಮಾಣ.**

ಉಳಿದಂತೆ ಕಲ್ಯಾಣ ಯೋಜನೆಗಳು, ನಿರ್ವಹಣೆ ಕಾಮಗಾರಿ ಸೇರಿದಂತೆ ಮೊದಲಾದವುಗಳಿಗೆ ಅನುದಾನ ಮೀಸಲಿಡಲಾಗಲಿದೆ ಎಂದು ಮೂಲಗಳು ಮಾಹಿತಿ ನೀಡಿವೆ.ಕಳೆದ 2024–25ನೇ ಸಾಲಿನಲ್ಲಿ ಬಿಬಿಎಂಪಿಯು 12,369 ಕೋಟಿ ರೂ. ಗಾತ್ರದ ಬಜೆಟ್ ಮಂಡನೆ ಮಾಡಲಾಗಿತ್ತು. ಸರ್ಕಾರ ಅನುಮೋದನೆ ವೇಳೆ ಹೆಚ್ಚುವರಿ 745 ಕೋಟಿ ರೂ ನೀಡುವ ಭರವಸೆಯೊಂದಿಗೆ 13,114 ಕೋಟಿ ರೂ. ಗಾತ್ರಕ್ಕೆ ಹೆಚ್ಚಿಸಿ ಅನುಮೋದನೆ ನೀಡಲಾಗಿತ್ತು.

ಸಾಮಾನ್ಯವಾಗಿ ಶೇ.5 ರಿಂದ 8 ರಷ್ಟು ಬಜೆಟ್ ಗಾತ್ರ ವಾರ್ಷಿಕವಾಗಿ ಹೆಚ್ಚಿಸಲಾಗುತ್ತದೆ. ರಾಜ್ಯ ಸರ್ಕಾರವು ಈ ಬಾರಿ ಹೆಚ್ಚುವಾರಿಯಾಗಿ 4 ಸಾವಿರ ಕೋಟಿ ರು. ಅನುದಾನ ನೀಡಿರುವುದರಿಂದ 2025–26ನೇ ಸಾಲಿನ ಬಿಬಿಎಂಪಿಯ ಆಯವ್ಯಯವು 19 ಸಾವಿರ ಕೋಟಿ ರೂ. ದಾಟುವ ಸಾಧ್ಯತೆಗಳಿವೆ.

ನಾಳಿನ ಬಜೆಟ್‌ನಲ್ಲಿ ಬಿಬಿಎಂಪಿ ವ್ಯಾಪ್ತಿಯ ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರುಗಳು ಭಾಗವಹಿಸಲಿದ್ದಾರೆ. ಆನ್ ಲೈನ್ ಮೂಲಕ ಆಯವ್ಯಯ ಮಂಡನೆಯ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆಯಲ್ಲಿ ತಿಳಿಸಿದೆ. ಕಳೆದ ಬಾರಿಯಂತೆ ಈ ಬಾರಿಯೂ ಬ್ರ್ಯಾಂಡ್ ಬೆಂಗಳೂರಿನ ಪರಿಕಲ್ಪನೆಗಳಾದ ಸುಗಮ ಸಂಚಾರಿ ಬೆಂಗಳೂರು, ಸ್ವಚ್ಛ ಹಸಿರು ಬೆಂಗಳೂರು, ಆರೋಗ್ಯಕರ ಬೆಂಗಳೂರು, ಶಿಕ್ಷಣ ಬೆಂಗಳೂರು ಹೀಗೆ ಎಂಟು ಪರಿಕಲ್ಪನೆಯಲ್ಲಿ ಬಜೆಟ್ ಸಿದ್ಧಪಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಡಿಕೆಶಿ ಕರೆದಿದ್ದ ಬಜೆಟ್‌ಪೂರ್ವ ಸಭೆಗೆ ಗೈರಾಗಿದ್ದ ಬಿಜೆಪಿ ಶಾಸಕರು ತಮ ಕ್ಷೇತ್ರಗಳಿಗೆ ಹೆಚ್ಚಿನ ಅನುದಾನ ಮೀಸಲಿಡಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

---

## ಗ್ರಾಹಕರಿಗೆ ಬಿಗ್ ಶಾಕ್: ನಂದಿನಿ ಹಾಲಿನ ದರ ಏರಿಕೆ

• **ಉದಯವಾಹಿನಿ, ಬೆಂಗಳೂರು**

ಬೆಲೆ ಏರಿಕೆಯ ಬಿಸಿಯಿಂದ ತತ್ತರಿಸಿಹೋಗಿರುವ ಗ್ರಾಹಕರಿಗೆ ಸರ್ಕಾರ ಮತ್ತೆ ಬಿಗ್ ಶಾಕ್ ನೀಡಿದೆ. ನಂದಿನಿ ಪ್ಯಾಕೆಟ್ ಹಾಲಿನ ದರ ಪ್ರತಿಲೀಟರ್‌ಗೆ 4 ರೂಪಾಯಿ ಹೆಚ್ಚಳ ಮಾಡಿ ರಾಜ್ಯ ಸರ್ಕಾರ ತೀರ್ಮಾನಿಸಿದೆ. ನಂದಿನಿ ಹಾಲಿನ ದರ ಪ್ರತಿ ಲೀಟರ್‌ಗೆ 4 ರೂಪಾಯಿ ಹೆಚ್ಚಿಸಿ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದೆ. ನಂದಿನಿ ಹಾಲಿನ ದರ ಹೆಚ್ಚಿಸಿ ಇನ್ನೂ ವರ್ಷವಾಗಿಲ್ಲ. ಆಗಲೇ ದರ ಏರಿಕೆಗೆ ಪ್ರಸ್ತಾಪ ಬಂದಿತ್ತು. ಕೆಎಂಎಫ್ ಅಧಿಕಾರಿಗಳ ಜೊತೆ ಮೂರು ದಿನಗಳ ಹಿಂದೆ ಸಭೆ ನಡೆಸಿದ ಸಿಎಂ ಸಿದ್ದರಾಮಯ್ಯ ಹಾಲಿ ದರ ಹೆಚ್ಚಳಕ್ಕೆ ಒಪ್ಪಿಗೆ ಸೂಚಿಸಿರಲಿಲ್ಲ. ಇದೀಗ ನಂದಿನ ಹಾಲಿನ ದರ ಏರಿಕೆಗೆ ಸಚಿವ ಸಂಪುಟ ಅನುಮೋದನೆ ನೀಡಿದೆ. ಗ್ರಾಹಕರಿಗೆ ಹಾಲು ಬಿಸಿತುಪ್ಪವಾಗಿದೆ.

## ಯುಗಾದಿಯಂದು ಪಂಚಾಂಗ ಶ್ರವಣ

• **ಉದಯವಾಹಿನಿ, ಬೆಂಗಳೂರು**



ಶ್ರೀ ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಮಾರ್ಚ್ 30, ಭಾನುವಾರ ಸಂಜೆ 7–00ಕ್ಕೆ ಶ್ರೀ ಬ್ರಹ್ಮಣ್ಯಾಚಾರ್ಯರಿಂದ ವಿಶ್ವಾವಸು ನಾಮ ಸಂವತ್ಸರದ ಪಂಚಾಗ ಶ್ರವಣ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ 6ನೇ ಅಡ್ಡ ರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರಂ, ಬೆಂಗಳೂರು–560003

## ವಿಶ್ವಾವಸು ನಾಮ ಸಂವತ್ಸರದ ಪಂಚಾಂಗ ಶ್ರವಣ



• **ಉದಯವಾಹಿನಿ, ಬೆಂಗಳೂರು**

ಶ್ರೀ ವ್ಯಾಸಮಧ್ವ ಸಂಶೋಧನಾ ಪ್ರತಿಷ್ಠಾನದ ವತಿಯಿಂದ ದಿನಾಂಕ 30–3–2025 ಭಾನುವಾರ ಸಂಜೆ 6–30ಕ್ಕೆ ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯರಿಂದ ವಿಶ್ವಾವಸು ನಾಮ ಸಂವತ್ಸರದ ಪಂಚಾಗ ಶ್ರವಣ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸ್ಥಳ : ಶ್ರೀ ವ್ಯಾಸಮಧ್ವ ಸಭಾಂಗಣ, 'ಪಾಜಕ', 89/24, 3ನೇ ಅಡ್ಡರಸ್ತೆ , ಮೌಂಟ್ ಜಾಯ್ ಎಕ್ಸ್ ಟೆನ್ಶನ್, ಹನುಮಂತನಗರ, ಬೆಂಗಳೂರು–560004

## ರಾಜಕೀಯಕ್ಕಾಗಿ ಕೃಷಿ ವಿವಿ ಬಳಸುವ ಛತ್ರಿಬುದ್ಧಿ ಇಲ್ಲ

• **ಉದಯವಾಹಿನಿ, ಬೆಂಗಳೂರು**

ಮಂಡ್ಯ ಕೃಷಿ ವಿಶ್ವವಿದ್ಯಾಲಯದ ಹೆಸರಿನಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಛತ್ರಿಬುದ್ಧಿ ನನಗಿಲ್ಲ ಎಂದು ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರು ತಿರುಗೇಟು ನೀಡಿದ್ದಾರೆ. ಈ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು; ಮಂಡ್ಯ ಕೃಷಿ ವಿಶ್ವವಿದ್ಯಾಲಯ ಕುರಿತು ನನ್ನ ಬಗ್ಗೆ ಹುಟ್ಟಿಕೊಂಡಿರುವ ಸಂದೇಹಾತ್ಮಕ, ರಾಜಕೀಯ ದುರುದ್ದೇಶದ ಅಪಪ್ರಚಾರದ ನಡವಳಿಕೆ ದುಃಖಕರ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಜಿಲ್ಲೆಯಲ್ಲಿ ಕೃಷಿ ವಿವಿ ಸ್ಥಾಪನೆ ಬಗ್ಗೆ ನನ್ನ ಹೃದಯಪೂರ್ವಕ ಸ್ವಾಗತವಿದೆ. ಅಭಿವೃದ್ಧಿ ವಿಷಯದಲ್ಲಿ ರಾಜಕೀಯ ನಾನೆಂದೂ ಬೆರೆಸಿಲ್ಲ, ಇದು ನನ್ನ ವ್ಯಕ್ತಿತ್ವಕ್ಕೆ ಸಲ್ಲದ ನಡವಳಿಕೆ. ವಿವಿ ಹೆಸರಿನಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಛತ್ರಿಬುದ್ಧಿ ನನಗಿಲ್ಲ ಎಂದು ಟೀಕಾಕಾರರಿಗೆ ಅವರು ಟಾಂಗ್ ನೀಡಿದ್ದಾರೆ. ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದವನು ನಾನು. ಮಂಡ್ಯ ಜಿಲ್ಲೆ ಹಿತಕ್ಕೆ ಸಂಬಂಧಿಸಿ ಅಲ್ಲಿನ ಜನಪ್ರತಿನಿಧಿಯಾಗಿ ನನ್ನದೂ ಹೊಣೆಗಾರಿಕೆ ಇದೆ. ಈ ಬಗ್ಗೆ ನನ್ನಲ್ಲಿ ಗೊಂದಲ ಇಲ್ಲ, ಇದು ಸ್ಪಷ್ಟ. ಮುಖ್ಯಮಂತ್ರಿಯಾಗಿ ಮಂಡ್ಯ ಜಿಲ್ಲೆಗೆ ನೀಡಿರುವ ಬಜೆಟ್ ಕೊಡುಗೆ ಬಗ್ಗೆ ನಾನು ಹೊಸದಾಗಿ ಹೇಳಬೇಕಿಲ್ಲ. ನನಗೆ ರಾಜಕೀಯವಾಗಿ ಶಕ್ತಿ ತುಂಬಿದ, ರಕ್ತಸಂಬಂಧಕ್ಕೂ ಮೀರಿ ಅವಿನಾಭಾವ ಬಾಂಧವ್ಯದ ದ್ಯೋತಕವಾಗಿರುವ ಮಂಡ್ಯ ಜನರ ನನ್ನ ನಡುವೆ ಹುಳಿ ಹಿಂಡುವ ವ್ಯರ್ಥ ಪ್ರಯತ್ನ ಬೇಡ ಎಂದು ಅವರು ಕಿವಿಮಾತು ಹೇಳಿದ್ದಾರೆ.

## ಸ್ಮಾರ್ಟ್ ಮೀಟರ್ ಟೆಂಡರ್‌ನಲ್ಲಿ ಅಕ್ರಮದ ವಾಸನೆ: ಕೆ.ಜೆ.ಜಾರ್ಜ್ ಹೇಳಿದ್ದೇನು

• **ಉದಯವಾಹಿನಿ, ಬೆಂಗಳೂರು**

ಸ್ಮಾರ್ಟ್ ಮೀಟರ್ ಖರೀದಿ ಟೆಂಡರ್‌ನಲ್ಲಿ ಯಾವುದೇ ಅಕ್ರಮ ನಡೆದಿಲ್ಲ. ಒಂದು ವೇಳೆ ಯಾರಾದರೂ ಸೂಕ್ತ ದಾಖಲೆಗಳನ್ನು ಒದಗಿಸಿದರೆ ಟೆಂಡರ್ ರದ್ದುಪಡಿಸಲು ಅವಕಾಶವಿದೆ ಎಂದು ಇಂಧನ ಕೆ.ಜೆ.ಜಾರ್ಜ್ ತಿಳಿಸಿದರು. ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾಡಿರುವ ಆರೋಪ ಹಿಟ್ ಅಂಡ್ ರನ್ ನಂತಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು. ಸ್ಮಾರ್ಟ್ ಮೀಟರ್ ಹೊಸ ಸಂಪರ್ಕ ತಾತ್ಕಾಲಿಕ ಸಂಪರ್ಕಗಳಿಗೆ ಮಾತ್ರ ಕಡ್ಡಾಯ ಮಾಡಲಾಗಿದೆ. ಈಗಾಗಲೇ ಇರುವ ಗ್ರಾಹಕರಿಗೆ ಅಳವಡಿಸುತ್ತಿಲ್ಲ. ಇತರ ರಾಜ್ಯಗಳಲ್ಲಿ ಎಲ್ಲಾ ಗ್ರಾಹಕರಿಗೂ ಕಡ್ಡಾಯ ಮಾಡಲಾಗಿದೆ. ಸ್ಮಾರ್ಟ್ ಮೀಟರ್ ದರ ಕೂಡ ಇತರ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಕಡಿಮೆಯೇ ಇದೆ ಎಂದ ಅವರು, ರಾಜಶ್ರೀ ಕಂಪನಿಯನ್ನು ಎಲ್ಲೂ ಕಪ್ಪು ಪಟ್ಟಿಗೆ ಸೇರಿಸಿಲ್ಲ. ಉತ್ತರಾಂಚಲದಲ್ಲಿ 2 ವರ್ಷಗಳಿಗೆ ಪ್ರತಿಬಂಧ ವಿಧಿಸಲಾಗಿತ್ತು. ಅದನ್ನು ತೆರವು ಮಾಡಲಾಗಿದೆ. ಬಿಜೆಪಿ ಆಡಳಿತ ಇರುವ ರಾಜ್ಯಗಳಲ್ಲೂ ರಾಜಶ್ರೀಗೆ ಗುತ್ತಿಗೆ ನೀಡಲಾಗಿದೆ ಎಂದು ಜಾರ್ಜ್ ಹೇಳಿದರು. ಸ್ಮಾರ್ಟ್ ಮೀಟರ್‌ಗಳಿಗೆ ಸಿಂಗಲ್ ಫೇಸ್‌ಗೆ 4,998, ತ್ರೀಫೇಸ್‌ಗೆ 8,922 ನಿಗದಿ ಮಾಡಲಾಗಿದೆ. ಇದು ಇತರ ರಾಜ್ಯಗಳಿಗಿಂತಲೂ ಕಡಿಮೆ ಬೆಲೆ ಎಂದು ಅವರು ಸಮರ್ಥಿಸಿಕೊಂಡರು. ಬಿಜೆಪಿ ಜೆಡಿಎಸ್‌ನವರು ನನ್ನ ವಿರುದ್ಧ ಡಿ.ಕೆ.ರವಿ, ಗಣಪತಿ ಆತ್ಮಹತ್ಯೆ ಪ್ರಕರಣಗಳಲ್ಲಿ ಆರೋಪಗಳನ್ನು ಮಾಡಿದರು. ಸಿಬಿಐ, ಸಿಒಡಿ ತನಿಖೆಗಳ ಬಳಿಕ ಆರೋಪ ಸುಳ್ಳು ಎಂಬುದು ಸಾಬೀತಾಯಿತು. ಆ ಬಳಿಕ ಅವರು ವಿಷಾದದ 1 ಮಾತನ್ನೂ ಆಡಿಲ್ಲ. ಈಗ ಮತ್ತೊಂದು ಆರೋಪ ಹೊರಿಸಲು ಮುಂದಾಗಿದ್ದಾರೆ' ಎಂದು ಜಾರ್ಜ್ ಹೇಳಿದರು.

## 5,300 ಆಟೋ ಟಿಪ್ಪರ್, 700 ಕಸದ ಲಾರಿಗಳ ಸಂಚಾರ ಸ್ಥಗಿತ

• **ಉದಯವಾಹಿನಿ, ಬೆಂಗಳೂರು**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಘನತ್ಯಾಜ್ಯ ನಿರ್ವಹಣಾ ಘಟಕದ ವಿರುದ್ಧ ಕ್ಲೀನರ್‌ಗಳು ಮತ್ತು ಚಾಲಕರು ಬುಧವಾರದಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದು, ಇದರ ಪರಿಣಾಮ 5,300 ಆಟೋ ಟಿಪ್ಪರ್‌ಗಳು ಮತ್ತು 700 ಕಸದ ಲಾರಿಗಳ ಸಂಚಾರ ಸ್ಥಗಿತಗೊಂಡಿದೆ.

ಬಿಬಿಎಂಪಿ ಮುಖ್ಯ ಕಚೇರಿ ಬಳಿ ನೂರಾರಿ ಪ್ರತಿಭಟನಾಕಾರರು ಪ್ರತಿಭಟನೆ ನಡೆಸಿದರು. ಪರಿಸ್ಥಿತಿಯ ಸೂಕ್ಷ್ಮತೆ ಅರಿತ ಪೊಲೀಸರು ಮುನ್ನೆಚ್ಚರಿಕಾ ಕ್ರಮವಾಗಿ ಹಲವ ರನ್ನು ವಶಕ್ಕೆ ಪಡೆದರು. ನಂತರ ಸಂಜೆ ವೇಳೆ ಬಿಡುಗಡೆ ಮಾಡಿದರು. ಐಪಿಡಿ ಸಾಲಪ್ಪ ವರದಿಯನ್ನು ಜಾರಿಗೆ ತರಬೇಕು ಮತ್ತು ಘನತ್ಯಾಜ್ಯ ವಿಲೇವಾರಿ ಮಾಡುವ ಚಾಲಕರ ಸೇವೆಯನ್ನು ಶಾಶ್ವತಗೊಳಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.



ಉದಯವಾಹಿನಿ ಚಿತ್ರ

ಮುಷ್ಕರದ ನೇತೃತ್ವ ವಹಿಸಿರುವ ಕಾರ್ಮಿಕ ಸಂರಕ್ಷಣೆ ಸಂಘಟನೆಯ ಅಧ್ಯಕ್ಷ ತ್ಯಾಗರಾಜ್ ಅವರು ಮಾತನಾಡಿ, ಬಿಬಿಎಂಪಿ ಕಚೇರಿ ಬಳಿ 500ಕ್ಕೂ ಹೆಚ್ಚು ಸದಸ್ಯರು ಪ್ರತಿಭಟನೆ ನಡೆಸಿದರು.

ಈ ವೇಳೆ ಸ್ಥಳದಲ್ಲಿದ್ದ ಪೊಲೀಸರು ಕಚೇರಿ ಪ್ರವೇಶಿಸಲು ಅವಕಾಶ ನೀಡಲಿಲ್ಲ. ಹಲವರನ್ನು ವಶಕ್ಕೆ ಪಡೆದರು ಎಂದು ಹೇಳಿದರು. ಕಸ ಸಂಗ್ರಹಣೆ ಸ್ಥಗಿತಗೊಳ್ಳುವುದರಿಂದ ಗುರುವಾರದಿಂದ ಮುಷ್ಕರದ ಪರಿಣಾಮ ಬೀರಲಿದೆ ಎಂದು ಎಚ್ಚರಿಸಿದರು. ಸಂಘಟನೆಯ ಕಾರ್ಯನಿರ್ವಾಹಕ ಟ್ರಸ್ಟಿ, ಕಾರ್ಯಕರ್ತೆ ಕಾತ್ಯಾಯಿನಿ ಚಾಮರಾಜ್ ಅವರು ಮಾತನಾಡಿ, ಪೌರಕಾರ್ಮಿಕರು ಪರಿಸ್ಥಿತಿ ಬಗ್ಗೆ ಧ್ವನಿ ಎತ್ತಿದರು. ಬಿಬಿಎಂಪಿ ಗುತ್ತಿಗೆ ವ್ಯವಸ್ಥೆಯನ್ನು ಅವಲಂಬಿಸುವ ಬದಲು ಈ ಕಾರ್ಮಿಕರನ್ನು ನೇರವಾಗಿ ನೇಮಿಸಿಕೊಳ್ಳಬೇಕು. ಪ್ರತಿಭಟನೆ 3 ದಿನಗಳವರೆಗೆ ಮುಂದುವರಿದರೆ, ನಗರ ಕಸಮಯಗೊಳ್ಳಲಿದೆ ಎಂದು ಹೇಳಿದರು.

> **ಬಿಬಿಎಂಪಿ ಕಾರ್ಯಕರ್ತರು ಮತ್ತು ಚಾಲಕರನ್ನು ನಿರ್ಲಕ್ಷಿಸಿದೆ. ಗುತ್ತಿಗೆದಾರರ ಮೂಲಕ ನೇಮಕ ಮಾಡಿಕೊಳ್ಳುವ ಬದಲು ಅವರನ್ನು 'ನೇರ ಪಾವತಿ' ಯೋಜನೆಯಡಿ ನೇಮಿಸಿಕೊಳ್ಳಬೇಕು. ಮೊದಲ ದಿನ ಪ್ರತಿಭಟನಾಕಾರರ ಸಂಖ್ಯೆ ಕಡಿಮೆ ಇದೆ. ಆದರೆ, ಗುರುವಾರದಿಂದ ಸಾವಿರಾರು ಜನರು ನಮ್ಮೊಂದಿಗೆ ಕೈಜೋಡಿಸಿ, ಪ್ರತಿಭಟನೆಯಲ್ಲಿ ಭಾಗಿಯಾಗಲಿದ್ದಾರೆಂದು ತಿಳಿಸಿದರು.**

## ಪನೀರ್ ಮಾದರಿ ಪರೀಕ್ಷೆ

• **ಉದಯವಾಹಿನಿ, ಬೆಂಗಳೂರು**

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಅಧಿಕಾರಿಗಳು ರಾಜ್ಯದಾದ್ಯಂತ 163 ಪನೀರ್ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯ ಪರೀಕ್ಷೆಗೆ ಒಳಪಡಿಸಿದ್ದಾರೆ.

ಇವುಗಳಲ್ಲಿ 17 ಮಾದರಿಗಳ ವರದಿ ಬಂದಿದ್ದು, ಎರಡು ಮಾದರಿಗಳು ಅಸುರಕ್ಷಿತ ಎನ್ನುವುದನ್ನು ಪ್ರಯೋಗಾಲಯದ ವರದಿ ದೃಢಪಡಿಸಿದೆ. ರಾಸಾಯನಿಕ ಅಂಶದ ಜತೆಗೆ ಸೂಕ್ಷ್ಮಾಣು ಜೀವಿಗಳು ಸಹ ಪತ್ತೆಯಾಗಿದ್ದು, ಕ್ಯಾಲ್ಸಿಯಂ ಮತ್ತು ಪ್ರೋಟೀನ್ ಅಂಶ ಕಡಿಮೆ ಇರುವುದು ವರದಿಯಿಂದ ತಿಳಿದು ಬಂದಿದೆ. ಇಲಾಖೆ ಅಧಿಕಾರಿಗಳು ವಿವಿಧ ಐಸ್ ಕ್ರೀಂ, ತಂಪು ಪಾನೀಯ ತಯಾರಿಕಾ ಘಟಕಗಳ ಮೇಲೂ ದಾಳಿ ನಡೆಸಿದ್ದು. ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ.

ಪನೀರ್ ಮಾದರಿಗಳ ಪರೀಕ್ಷಾ ವರದಿ ಬಗ್ಗೆ



ಉದಯವಾಹಿನಿ ಚಿತ್ರ

ಮಾಹಿತಿ ಇಲ್ಲ. ಶೀಘ್ರವೇ ವರದಿ ತರಿಸಿಕೊಂಡು, ಪರಿಶೀಲಿಸಲಾಗುವುದು. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಪ್ರತಿ ತಿಂಗಳು ವಿವಿಧ ಆಹಾರಗಳ ಗುಣಮಟ್ಟ ಪರೀಕ್ಷೆ ನಡೆಸುತ್ತಿದೆ. ಈಗಾಗಲೇ ಕೆಲ ಆಹಾರ ಪದಾರ್ಥಗಳಲ್ಲಿ ಕಲಬೆರಕೆ ಆಗಿರುವುದು ಪ್ರಯೋಗಾಲಯ ಪರೀಕ್ಷೆಯಿಂದ ದೃಢಪಟ್ಟಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

## ನ್ಯಾಯಾಧೀಶರ ವಿರುದ್ಧ ಕ್ರಮಕ್ಕೆ ಕರ್ನಾಟಕ ಹೈಕೋರ್ಟ್ ಆದೇಶ

• **ಉದಯವಾಹಿನಿ, ಬೆಂಗಳೂರು**

ಸಿವಿಲ್ ಪ್ರಕರಣವೊಂದರ ಅರ್ಜಿಯ ವಿಚಾರಣೆ ವೇಳೆ ನಕಲಿ ಸುಪ್ರೀಂ ಕೋರ್ಟ್ ತೀರ್ಪನ್ನು ಉಲ್ಲೇಖಿಸಿದ್ದ ನಗರ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರ ವಿರುದ್ಧ ಕ್ರಮಕೈಗೊಳ್ಳಲು ಕರ್ನಾಟಕ ಹೈಕೋರ್ಟ್ ಆದೇಶಿಸಿದೆ. ಮಾರ್ಚ್ 24ರಂದು ಹೊರಡಿಸಿದ ಆದೇಶದಲ್ಲಿ, ಹೈಕೋರ್ಟ್‌ನ ನ್ಯಾಯಮೂರ್ತಿ ಆರ್ ದೇವದಾಸ್ ಅವರು ನ್ಯಾಯಾಧೀಶರ ನಡವಳಿಕೆಯ ಬಗ್ಗೆ ಕಳವಳ ವ್ಯಕ್ತಪಡಿಸಿ, ಈ ಪ್ರಕರಣವು ಹೆಚ್ಚಿನ ತನಿಖೆಗೆ ಅರ್ಹವಾಗಿದೆ ಎಂದು ಹೇಳಿದ್ದಾರೆ.

ಹೆಚ್ಚು ಗೊಂದಲದ ಸಂಗತಿಯೆಂದರೆ ಸಿಟಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರು ಸುಪ್ರೀಂ ಕೋರ್ಟ್ ಅಥವಾ ಯಾವುದೇ ಇತರ ನ್ಯಾಯಾಲಯವು ಎಂದಿಗೂ ನೀಡದ ಎರಡು ತೀರ್ಪುಗಳನ್ನು ಉಲ್ಲೇಖಿಸಿದ್ದಾರೆ. ವಿದ್ವಾಂಸ ನ್ಯಾಯಾಧೀಶರ ಈ ಕೃತ್ಯಕ್ಕೆ ಕಾನೂನಿನ ಪ್ರಕಾರ ಹೆಚ್ಚಿನ ತನಿಖೆ ಮತ್ತು ಸೂಕ್ತ ಕ್ರಮದ ಅಗತ್ಯವಿದೆ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ವಾಣಿಜ್ಯ ವಿವಾದದಲ್ಲಿ ಸಿವಿಲ್ ನ್ಯಾಯಾಲಯದ ನ್ಯಾಯವ್ಯಾಪ್ತಿಯನ್ನು ಪ್ರಶ್ನಿಸುವ ಪರಿಷ್ಕರಣಾ ಅರ್ಜಿಯ ವಿಚಾರಣೆ ವೇಳೆ ಈ ತೀರ್ಪು ನೀಡಲಾಗಿತ್ತು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಪ್ರಭುಲಿಂಗ ನವದಗಿ, ಕೆಳ ನ್ಯಾಯಾಲಯವು ಅಸ್ತಿತ್ವದಲ್ಲಿಲ್ಲದ ತೀರ್ಪುಗಳ ಉಲ್ಲೇಖಗಳನ್ನು ಆಧರಿಸಿ ಮಾತ್ರ ಅವರ ಅರ್ಜಿಯನ್ನು ತಿರಸ್ಕರಿಸಿದೆ ಎಂದು ವಾದಿಸಿದರು. ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್ ಅಥವಾ ಯಾವುದೇ ಇತರ ಕಾನೂನು ಡೇಟಾಬೇಸ್‌ನಲ್ಲಿ ಅವುಗಳ ಯಾವುದೇ ಅಧಿಕೃತ ದಾಖಲೆಗಳು ಕಂಡುಬರದ ಕಾರಣ, ಉಲ್ಲೇಖಿಸಲಾದ ತೀರ್ಪುಗಳನ್ನು 'ಮೋಸದಿಂದ ತಯಾರಿಸಲಾಗಿದೆ' ಎಂದು ನವದಗಿ ಜನವರಿಯಲ್ಲಿ ಹೈಕೋರ್ಟ್‌ಗೆ ತಿಳಿಸಿದರು.



> **ನಕಲಿ ಸುಪ್ರೀಂಕೋರ್ಟ್ ತೀರ್ಪು ಉಲ್ಲೇಖ**

**ಕರ್ನಾಟಕ ಹೈ ಕೋರ್ಟ್:** ಚಿನ್ನ ಕಳ್ಳಸಾಗಣೆ ಪ್ರಕರಣ: ರನ್ಯಾಗೆ ಜಾಮೀನು ನಿರಾಕರಿಸಿದ ಸೆಷನ್ಸ್ ಕೋರ್ಟ್; ನಟಿಗೆ ಜೈಲೇ ಗತಿ ಯಂತಹ ಕೃತಕ ಬುದ್ಧಿಮತ್ತೆ ಸಾಧನಗಳು ಕೆಲವೊಮ್ಮೆ 'ಕಾಲ್ಪನಿಕ ಪ್ರಕರಣ ಕಾನೂನುಗಳನ್ನು' ಉತ್ಪಾದಿಸುತ್ತವೆ. ಪ್ರಸ್ತುತ ಪ್ರಕರಣದಲ್ಲಿ ಇದು ಒಂದು ಸಾಧ್ಯತೆಯಾಗಿರಬಹುದು ಎಂದು ಅವರು ಸೂಚಿಸಿದರು. ಈ ಆರೋಪಗಳನ್ನು ಗಂಭೀರವಾಗಿ ಪರಿಗಣಿಸಿದ ಹೈಕೋರ್ಟ್, ಈ ಆದೇಶದ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಮುಖ್ಯ ನ್ಯಾಯಾಧೀಶರ ಮುಂದೆ ಇಡಬೇಕು ಎಂದು ಆದೇಶಿಸಿದೆ. ಹೆಚ್ಚುವರಿಯಾಗಿ, ಹೈಕೋರ್ಟ್ ಪರಿಷ್ಕರಣಾ ಅರ್ಜಿಯನ್ನು ಅನುಮತಿಸಿದೆ. ವಾದಿಗಳು ಈ ಹಿಂದೆ ವಾಣಿಜ್ಯ ಮೊಕದ್ದಮೆ ಹೂಡಿದ್ದರು. ಪ್ರತಿವಾದಿಗಳ ಪರವಾಗಿ ಹಿರಿಯ ವಕೀಲ ಶ್ಯಾಮ್ ಸುಂದರ್ ಮತ್ತು ವಕೀಲ ಬಿ ಕೆ ಎಸ್ ಸಂಜಯ್ ವಾದ ಮಂಡಿಸಿದರು.

## ಮಳೆ ನೀರು ಸಂಗ್ರಹಕ್ಕೆ ನಿರ್ಲಕ್ಷ್ಯ: ರೂ. 32ಕೋಟಿ ದಂಡ

• **ಉದಯವಾಹಿನಿ, ಬೆಂಗಳೂರು**

ನಗರದಲ್ಲಿ 2,400 ಚದರಡಿ ಮತ್ತು ಅದಕ್ಕಿಂತ ಮೇಲ್ಪಟ್ಟ ವಿಸ್ತೀರ್ಣವಿರುವ ಎಲ್ಲ ಕಟ್ಟಡಗಳಿಗೆ ಮಳೆ ನೀರು ಸಂಗ್ರಹ ವಿಧಾನವನ್ನು ಜಲಮಂಡಳಿ ಕಡ್ಡಾಯಗೊಳಿಸಿದ್ದರೂ ನಗರದಲ್ಲಿ 40 ಸಾವಿರಕ್ಕೂ ಹೆಚ್ಚು ಮನೆಗಳಲ್ಲಿ ಈ ವಿಧಾನಗಳನ್ನು ಅಳವಡಿಸಿಕೊಂಡಿಲ್ಲ. ಮಳೆ ನೀರು ಸಂಗ್ರಹ ಅಳವಡಿಸಿಕೊಳ್ಳಲು ನಿರಾಸಕ್ತಿ ತೋರುತ್ತಿರುವ ನಾಗರಿಕರಿಗೆ ಕಾಯ್ದೆ ಪ್ರಕಾರ ದಂಡ ವಿಧಿಸಲಾಗಿದ್ದು, ಕಳೆದ ವರ್ಷ ಪ್ರತಿ ತಿಂಗಳು 2.7 ಕೋಟಿಯಂತೆ, ವಾರ್ಷಿಕ ಸುಮಾರು 32.40 ಕೋಟಿಯಷ್ಟು ದಂಡ ವಿಧಿಸಿದೆ. 2023ರಲ್ಲಿ 21 ಕೋಟಿಯಷ್ಟು ದಂಡವನ್ನು ಸಂಗ್ರಹಿಸಿದೆ.ನಗರದಲ್ಲಿ ದಿನೇ ದಿನೇ ನೀರಿನ ಬೇಡಿಕೆ ಹೆಚ್ಚುತ್ತಿದೆ. ಬೇಡಿಕೆ ಪೂರೈಸುವುದಕ್ಕಾಗಿ 100 ಕಿ.ಮೀ ದೂರದಿಂದ ಕಾವೇರಿ ನೀರನ್ನು ನಗರಕ್ಕೆ ಪೂರೈಸಲಾಗುತ್ತಿದೆ. ದೀರ್ಘಕಾಲದಲ್ಲಿ ಈ ಅವಲಂಬನೆ ಕಷ್ಟವಾಗಿದ್ದು. ಇದಕ್ಕೆ ಪರಿಹಾರವಾಗಿ ಕಟ್ಟಡಗಳಿಗೆ ಮಳೆ ನೀರು ಸಂಗ್ರಹ ಪದ್ಧತಿ ಅಳವಡಿಕೆಯನ್ನು ಜಲಮಂಡಳಿ ಕಡ್ಡಾಯಗೊಳಿಸಿದೆ. ಜಲಮಂಡಳಿಯ ಕಾಯ್ದೆ 72ಎ



ಉದಯವಾಹಿನಿ ಚಿತ್ರ

ಪ್ರಕಾರ, ಬಿಬಿಎಂಪಿ ವ್ಯಾಪ್ತಿಯಲ್ಲಿರುವ 2.400 ಚದರ ಅಡಿ ಮತ್ತು ಅದಕ್ಕಿಂತ ಹೆಚ್ಚು ವಿಸ್ತೀರ್ಣದ ನಿವೇಶನದಲ್ಲಿ, ಈಗಾಗಲೇ ನಿರ್ಮಾಣಗೊಂಡಿರುವ ಕಟ್ಟಡಗಳಲ್ಲಿ, ನೂತನವಾಗಿ ನಿರ್ಮಿಸುವ 1,200 ಚದರ ಅಡಿ ಮತ್ತು ಅದಕ್ಕಿಂತ ಹೆಚ್ಚು ವಿಸ್ತೀರ್ಣದ ಎಲ್ಲಾ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸುವುದು ಕಡ್ಡಾಯ. 2009ರ ಆಗಸ್ಟ್‌ನಿಂದ ಈ ಕಾನೂನು ಜಾರಿಯಲ್ಲಿದೆ. ಪ್ರಸ್ತುತ ನಗರದಲ್ಲಿ 11.09 ಲಕ್ಷ ಮನೆಗಳಿಗೆ ಕಾವೇರಿ ನೀರು ಪೂರೈಸಲಾಗುತ್ತಿದೆ. ಈವರೆಗೆ 2,08,994 ಮನೆಗಳಿಗೆ ಮಳೆ ನೀರು ಸಂಗ್ರಹ ವಿಧಾನ ಅಳವಡಿಸಿಕೊಳ್ಳಲಾಗಿದೆ. ಇದರಲ್ಲಿ 2,08,727 ಖಾಸಗಿ ಆಸ್ತಿಗಳು ಮತ್ತು 267 ಸರ್ಕಾರಿ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಇದೆ. 42,234 ಮನೆಗಳಿಗೆ ಮಳೆ ನೀರಿನ ಸಂಗ್ರಹ ವ್ಯವಸ್ಥೆ ಇಲ್ಲದ್ದರಿಂದ ಅವರಿಗೆ ದಂಡ ವಿಧಿಸಲಾಗುತ್ತಿದೆ.

ಬೆಂಗಳೂರಿಗೆ ವರ್ಷಕ್ಕೆ 19 ಟಿಎಂಸಿ ಅಡಿ ನೀರು ಪೂರೈಕೆಯಾಗುತ್ತಿದೆ. ನಗರದಲ್ಲಿ ಮಳೆ ನೀರು ಸಂಗ್ರಹ ಪದ್ಧತಿಯನ್ನು ಅಳವಡಿಸಿಕೊಂಡರೆ, ಸುಮಾರು 15 ಟಿಎಂಸಿ ಅಡಿಯಷ್ಟು ನೀರು ನಗರದಲ್ಲಿಯೇ ಸಿಗಲಿದೆ ಎಂಬುದು ತಜ್ಞರ ಅಭಿಮತ. ಇದೇ ಕಾರಣಕ್ಕೇ ಮಳೆ ನೀರು ಸಂಗ್ರಹ ಅಳವಡಿಕೆಯನ್ನು ಮಂಡಳಿ ಕಡ್ಡಾಯಗೊಳಿಸಿದೆ. ನಗರದಲ್ಲಿ ಮಳೆ ನೀರು ಸಂಗ್ರಹಕ್ಕೆ ಸಾಕಷ್ಟು ಅವಕಾಶವಿದೆ. ಆದರೆ, ಒಂದು ಕಡೆ ಜನರ ನಿರಾಸಕ್ತಿ, ಇನ್ನೊಂದೆಡೆ.

ಮಳೆ ನೀರು ಹಿಡಿದರೆ ಅದನ್ನು ಸಂಗ್ರಹಿಸಿಕೊಂಡು ಬಳಸುವ, ಹೆಚ್ಚಾದ್ದನ್ನು ಇಂಗಿಸಲು ಸ್ಥಳಾವಕಾಶದ ಕೊರತೆಯಿಂದ ಈ ವಿಧಾನ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬ ಮಾತು ಕೇಳಿಬರುತ್ತಿದೆ. ಹೀಗಾಗಿ, ಕೆಲವರು ದಾಖಲಾತಿಗಾಗಿಯಷ್ಟೇ ಮಳೆ ನೀರು ಸಂಗ್ರಹ ವಿಧಾನ ಅಳವಡಿಸಿಕೊಳ್ಳುತ್ತಿದ್ದಾರೆ. ಇನ್ನೂ ಕೆಲವರು ದಂಡ ಕಟ್ಟಿ ಸುಮ್ಮನಾಗುತ್ತಿದ್ದಾರೆ.

## 14 ವರ್ಷದ ಎಲ್ಲಾ ಬಾಲಕಿಯರಿಗೆ ಉಚಿತ ಲಸಿಕೆ ಘೋಷಣೆ




• **ಉದಯವಾಹಿನಿ, ಬೆಂಗಳೂರು**

ಗರ್ಭಕಂಠದ ಕ್ಯಾನ್ಸರ್ ತಡೆಗೆ ರಾಜ್ಯ ಸರ್ಕಾರ ಕ್ರಮ ಕೈಗೊಂಡಿದ್ದು, 14 ವರ್ಷದ ಎಲ್ಲಾ ಬಾಲಕಿಯರಿಗೆ ಉಚಿತ ಲಸಿಕೆ ನೀಡುವುದಾಗಿ ಘೋಷಣೆ ಮಾಡಿದೆ. ಆರ್ಟಿಸ್ಟ್ ಫಾರ್ ಹರ್ ಸಂಸ್ಥೆಯು ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕರ್ನಾಟಕದಲ್ಲಿ ಗರ್ಭಕಂಠ ಕ್ಯಾನ್ಸರ್ ನಿರ್ಮೂಲನಾ ಅಭಿಯಾನಕ್ಕೆ ಚಾಲನೆ ನೀಡಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಮಾತನಾಡಿದರು.

> **ಮಹಿಳೆಯರಲ್ಲಿ ಹೆಚ್ಚಾಗಿ ಗರ್ಭಕಂಠ, ಸ್ತನ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಗರ್ಭಕಂಠ ಕ್ಯಾನ್ಸರ್ ನಿರ್ಮೂಲನೆಗೆ ಎಚ್‌ಪಿವಿ ಲಸಿಕೆ ಸಹಕಾರಿ. ರಾಷ್ಟ್ರೀಯ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿ ಈ ಲಸಿಕೆ ಸೇರ್ಪಡೆ ಮಾಡುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇದು ಕಾರ್ಯಗತವಾಗುವ ವಿಶ್ವಾಸವಿದೆ. ನವದೆಹಲಿ, ಪಂಜಾಬ್ ಮತ್ತು ಸಿಕ್ಕಿಂ ರಾಜ್ಯದಲ್ಲಿ ಶಾಲಾ ಹಂತದಲ್ಲಿಯೇ ವಿದ್ಯಾರ್ಥಿನಿಯರಿಗೆ ಲಸಿಕೆ ನೀಡಲಾಗುತ್ತಿದೆ. ನಮ್ಮ ರಾಜ್ಯದಲ್ಲಿಯೂ ಈ ಲಸಿಕೆ ವಿತರಣೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಜೊತೆಗೆ ಚರ್ಚಿಸಿ, ಈ ಬಾರಿಯ ಬಜೆಟ್‌ನಲ್ಲಿ ಘೋಷಿಸಲಾಗಿದೆ ಎಂದು ಹೇಳಿದರು.**

ಹದಿಹರೆಯದ ಹೆಣ್ಣು ಮಕ್ಕಳಿಗೆ ಎಚ್‌ಪಿವಿ ಲಸಿಕೆ ಹಾಕುವುದರಿಂದ ಭವಿಷ್ಯದಲ್ಲಿ ಅವರಿಗೆ ಎದುರಾಗಬಹುದಾದ ಗರ್ಭಕಂಠ ಕ್ಯಾನ್ಸರ್ ತಡೆಗಟ್ಟಬಹುದು.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇದರ ಪ್ರಾಯೋಗಿಕ ಅನುಷ್ಠಾನಕ್ಕೆ ಸಂಬಂಧಿಸಿದ ಪ್ರಸ್ತಾವವು ಸರಕಾರದ ಮುಂದಿದ್ದು, ಶೀಘ್ರವೇ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ನಡೆದ ಗರ್ಭಕಂಠದ ಕ್ಯಾನ್ಸರ್ ನಿರ್ಮೂಲನೆ ಜಾಗೃತಿ ಆಂದೋಲನದಿಂದ ಗರ್ಭಕಂಠದ ಕ್ಯಾನ್ಸರ್ ಮುಕ್ತ ಕರ್ನಾಟಕದ ವರೆಗೆ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳೊಂದಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್.

ಗರ್ಭಕಂಠ ಕ್ಯಾನ್ಸರ್ ನಿರ್ಮೂಲನೆಗಾಗಿ ವಿಶ್ವ ಆರೋಗ್ಯ ಸಂಸ್ಥೆ ರೂಪಿಸಿರುವ 90–70–90 ಸೂತ್ರಕ್ಕೆ (14 ವರ್ಷದೊಳಗಿನ ಶೇ.90ರಷ್ಟು ಹೆಣ್ಣು ಮಕ್ಕಳಿಗೆ ಲಸಿಕೆ, 25 ವರ್ಷದ ನಂತರ ಶೇ.70ರಷ್ಟು ಮಹಿಳೆಯರ ಸ್ಕ್ರೀನಿಂಗ್, ಬಾಧಿತರ ಪೈಕಿ ಶೇ.90ರಷ್ಟು ಮಹಿಳೆಯರಿಗೆ ಚಿಕಿತ್ಸೆ ಲಭ್ಯತೆ) ಅನುಗುಣವಾಗಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇದರ ಪ್ರಾಯೋಗಿಕ ಅನುಷ್ಠಾನ ನಡೆಯಲಿದೆ. ಈ ವಿಷಯದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯು ರಾಜ್ಯಕ್ಕೆ ಮಾದರಿಯಾಗಬೇಕು ಎಂಬುದು ಸರಕಾರದ ಆಶಯವಾಗಿದೆ.

ಪ್ರಸಕ್ತ ವರ್ಷದ ಬಜೆಟ್‌ನಲ್ಲಿ ಕಲ್ಯಾಣ ಕರ್ನಾಟಕದ 5 ಜಿಲ್ಲೆಗಳ ವ್ಯಾಪ್ತಿಯಲ್ಲಿ ಈ ಲಸಿಕೆ ಹಾಕುವ ಕಾರ್ಯಕ್ರಮ ಪ್ರಕಟಿಸಿ ಹಣ ತೆಗೆದಿಡಲಾಗಿದೆ. ಈ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಈ ವರ್ಷದ 14 ವರ್ಷ ಪೂರೈಸುವ ಹೆಣ್ಣು ಮಕ್ಕಳಿಗೆ ಲಸಿಕೆ ಹಾಕಲಾಗುವುದು. ಮುಂಬರುವ ದಿನಗಳಲ್ಲಿ ಈ ಲಸಿಕೆಯ ಬೆಲೆ ತಗ್ಗುವ ಸಾಧ್ಯತೆ ಇದ್ದು, ಎಲ್ಲಾ ಹೆಣ್ಣು ಮಕ್ಕಳಿಗೂ ಇದು ಲಭ್ಯವಾಗಬೇಕು ಎಂಬುದು ಸರಕಾರದ ಉದ್ದೇಶವಾಗಿದೆ ಎಂದರು.

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷೀಯ ಚುನಾವಣೆ

## ವಿಪ್ರ ಸಮುದಾಯದ ಸಂಘಟನೆ, ನವಚೈತನ್ಯ ಶಕ್ತಿ ತುಂಬಲು ಪಾದಯಾತ್ರೆ ಮೂಲಕ ಎಸ್.ರಘುನಾಥ್ ನಾಮಪತ್ರ ಸಲ್ಲಿಕೆ

• **ಉದಯವಾಹಿನಿ, ಬೆಂಗಳೂರು**

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕೇಂದ್ರ ಕಛೇರಿಯಲ್ಲಿ ಅಧ್ಯಕ್ಷೀಯ ಚುನಾವಣೆಯಲ್ಲಿ ಅಧ್ಯಕ್ಷೀಯ ಅಭ್ಯರ್ಥಿ ಎಸ್.ರಘುನಾಥ್ ರವರು ನಾಮಪತ್ರ ಸಲ್ಲಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮಾಜಿ ಅಧ್ಯಕ್ಷರಾದ ಎಂ.ಆರ್.ವಿ.ಪ್ರಸಾದ್, ನಿಕಟಪೂರ್ವ ಉಪಾಧ್ಯಕ್ಷರಾದ ಆರ್.ಲಕ್ಷ್ಮಿಕಾಂತ್, ವಿಪ್ರ ಮುಖಂಡರಾದ ಅರುಳು ಮಲ್ಲಿಗೆ ಪಾರ್ಥಸಾರಥಿ, ಕೆ.ಪಿ.ಪುತ್ತುರಾಯ, ಪ್ರಹ್ಲಾದ್ ಬಾಬು, ಎಸ್.ದತ್ತಾತ್ರಿ, ನರಸಿಂಹನ್, ಸತ್ಯಪ್ರಕಾಶ್, ರವಿಶಂಕರ್, ಚಿದಾನಂದ್ ರವರು ಉಪಸ್ಥಿತರಿದ್ದರು.

ನಾಮಪತ್ರ ಸಲ್ಲಿಸುವ ಮುಂಚೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷೀಯ ಅಭ್ಯರ್ಥಿ ಎಸ್.ರಘುನಾಥ್ ರವರು ಸಾವಿರಾರು ವಿಪ್ರ ಮುಖಂಡರ ಜೊತೆಯಲ್ಲಿ ದೊಡ್ಡ ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಅಲ್ಲಿಂದ ಪಾದಯಾತ್ರೆ ಮೂಲಕ ಬುಲ್ ಟೆಂಪಲ್ ರೋಡ್ ನಿಂದ ಆರಂಭವಾಗಿ, ಎನ್.



ಉದಯವಾಹಿನಿ ಚಿತ್ರ

> **ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಕೆ**

ಆರ್.ಕಾಲೋನಿ,ತ್ಯಾಗರಾಜರಾಜನಗರ ರಸ್ತೆ ಮೂಲಕ ಗಾಯಿತ್ರಿ ಭವನಕ್ಕೆ ಆಗಮಿಸಿ ನಾಮಪತ್ರ ಸಲ್ಲಿಸಿದರು.

ಎಸ್.ರಘುನಾಥ್ ರವರು ಮಾತನಾಡಿ ರಾಜ್ಯದಲ್ಲಿ 30ಲಕ್ಷಕ್ಕೂ ಹೆಚ್ಚು ಜನರು ಬ್ರಾಹ್ಮಣ ಸಮುದಾಯದವರು ಇದ್ದಾರೆ ಅದರಲ್ಲಿ ಶೇಕಡವಾರು ಜನರಿಗೆ ಶಿಕ್ಷಣ ಆರೋಗ್ಯ ಮತ್ತು ಉದ್ಯೋಗದಲ್ಲಿ ಅವಕಾಶ ವಂಚಿತರಾಗಿದ್ದಾರೆ. ಜಿಲ್ಲೆ, ಗ್ರಾಮಾಂತರ, ಹೋಬಳಿ ಮಟ್ಟದಲ್ಲಿ ವಿಪ್ರರಿಗೆ ಮಹಾಸಭಾ ಸ್ಪಂದಿಸುವ ಕಾರ್ಯ ಮಾಡಬೇಕು ಎಂಬ ನಿಟ್ಟಿನಲ್ಲಿ ನಮ್ಮ ಯೋಜನೆ ರೂಪಿಸಲಾಗಿದೆ. ಪದ್ಮನಾಭನಗರದಲ್ಲಿರುವ ಸುವರ್ಣ ಭವನ ನಿರ್ಮಿಸಿ ಮಹಾಸಭಾಗೆ ಶಾಶ್ವತ ಆದಾಯ ಬರುವಂತೆ ಕ್ರಮ.

ಮಲ್ಪರ್ಗ ಮೀಸಲಾತಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರದ ಮೇಲೆ ಒತ್ತಡ ಮತ್ತು ಮಹಿಳೆಯರು, ಯುವ ಸಮುದಾಯಕ್ಕೆ ಮಹಾಸಭಾದಲ್ಲಿ ಹೆಚ್ಚಿನ ಅವಕಾಶ.

ತ್ರಿಮತಸ್ಥ ಬ್ರಾಹ್ಮಣರನ್ನು ನಾವೆಲ್ಲರು ಒಂದೇ ಎಂಬ ಮನೋಭಾವನೆಯಿಂದ ಸಂಘಟನೆ ಮಾಜುವುದು. ಪಾರದರ್ಶಕ ಆಡಳಿತಕ್ಕೆ ಒತ್ತು.

ಮಹಾಸಭಾ ಬೈಲಾ ತಿದ್ದುಪಡಿ ಮತ್ತು ಆರ್ಥಿಕವಾಗಿ ಸದೃಢ ಮಾಡುವುದು. ಸರ್ಕಾರದ ಸೌವಲತ್ತುಗಳನ್ನು ಅರ್ಹ ವಿಪ್ರ ಕುಟುಂಬಗಳಿಗೆ ತಲುಪಿಸಲು ಇ–ಸೇವಾ ಕೇಂದ್ರ ಸ್ಥಾಪನೆ. ರಾಜ್ಯಾದ್ಯಂತ ಇರುವ ವಿಪ್ರ ಸಮುದಾಯದವರು ಮತ್ತು ಮುಖಂಡರುಗಳು ಹೆಚ್ಚಿನ ಸಹಕಾರ, ಬೆಂಬಲ ನೀಡುತ್ತಿದ್ದಾರೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹೊಸ ದಿಕ್ಕಿನತ್ತ ಸಾಗಲಿದೆ ಎಂದು ಹೇಳಿದರು. ಜಿಲ್ಲಾ ಪ್ರತಿನಿಧಿ ಸ್ಪರ್ಧಿಗಳು, ವಿಪ್ರ ಸಮುದಾಯದವರು, ಮುಖಂಡರುಗಳು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

> **ಆರ್.ಲಕ್ಷ್ಮಿಕಾಂತ್ ರವರು ಮಾತನಾಡಿ ಅಧ್ಯಕ್ಷೀಯ ಅಭ್ಯರ್ಥಿ ಎಸ್.ರಘುನಾಥ್ ಮತ್ತು ನಾನು ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇವೆ, ಎಲ್ಲಾ ಜಿಲ್ಲೆಗಳಲ್ಲಿ ವಿಪ್ರ ಸಮುದಾಯದವರು, ಮುಖಂಡರುಗಳು ಮಹಾಸಭಾ ಬದಲಾವಣೆಗಾಗಿ ನಾವು ತಮ್ಮ ತಂಡಕ್ಕೆ ಬೆಂಬಲಿಸುತ್ತೇವೆ ಎಂದು ಸ್ವಯಂಪ್ರೇರಿತರಾಗಿ ಆಗಮಿಸುತ್ತಿದ್ದಾರೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹೊಸ ದಿಕ್ಕು, ನವಶಕ್ತಿಯ ಜೊತೆಯಲ್ಲಿ ರಾಜ್ಯ ವಿಪ್ರರ ಜೊತೆಯಲ್ಲಿ ಬ್ರಾಹ್ಮಣರ ಅಭವೃದ್ದಿಗೆ ಶ್ರಮಿಸಲಾಗುವುದು. ವಿಪ್ರರ ಸಂಘಟನೆ, ಅಭಿವೃದ್ದಿ ವಿಪ್ರರಿಗೆ ನವಚೈತನ್ಯ ಶಕ್ತಿ ತುಂಬುವ ಬೃಹತ್ ಪಾದಯಾತ್ರೆ ಮೂಲಕ ನಾಮಪತ್ರ ಸಲ್ಲಿಸಲಾಗಿದೆ. ನಿಮ್ಮ ಆಶೀರ್ವಾದ, ಸಹಕಾರ ಸದಾ ಹೀಗೆ ಇರಲಿ ಎಂದು ಹೇಳಿದರು.**

## ಕಾಂಗ್ರೆಸ್ ಪಕ್ಷದ ಜಿಹಾದಿ ಸರ್ಕಾರವು ಕರ್ನಾಟಕವನ್ನು ಪಾಕಿಸ್ತಾನ್ ಮಾಡಲು ಹೊರಟಿದೆ: ಎಸ್.ಮುನಿಸ್ವಾಮಿ

# ಮುಸ್ಲಿಂರಿಗೆ ಶೇ.4ರಷ್ಟು ಮೀಸಲಾತಿ ವಿರೋಧಿಸಿ ಬಿಜೆಪಿ ಪ್ರತಿಭಟನೆ

• **ಉದಯವಾಹಿನಿ ಕೋಲಾರ**

ಗುತ್ತಿಗೆ ನೀಡುವಲ್ಲಿ ಮುಸ್ಲಿಂರಿಗೆ ಶೇ 4 ರಷ್ಟು ಮೀಸಲಾತಿ ನೀಡುವ ತುಷ್ಟೀಕರಣದ ನಿರ್ಧಾರ, ಬಿಜೆಪಿಯ 18 ಶಾಸಕರ ಅಮಾನತು ಬೆಲೆ ಏರಿಕೆಯನ್ನು ನಿಯಂತ್ರಿಸಿದ ರಾಜ್ಯ ಕಾಂಗ್ರೆಸ್ ಸರ್ಕಾರದ ನಿಲುವುಗಳನ್ನು ಖಂಡಿಸಿ ಜಿಲ್ಲಾ ಬಿಜೆಪಿ ಪಕ್ಷದ ವತಿಯಿಂದ ನಗರದ ಕೆ.ಎಸ್.ಆರ್.ಟಿ.ಸಿ .ಬಸ್ ನಿಲ್ದಾಣದ ವೃತ್ತದಲ್ಲಿ ರಸ್ತೆ ತಡೆ ಮೂಲಕ ಪ್ರತಿಭಟನೆ ನಡೆಸಿ ನಂತರದಲ್ಲಿ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು,

ಮಾಜಿ ಸಂಸದ ಎಸ್.ಮುನಿಸ್ವಾಮಿ ಮಾತನಾಡಿ ಕಾಂಗ್ರೆಸ್ ಪಕ್ಷದ ಜಿಹಾದಿ ಸರ್ಕಾರವು ಕರ್ನಾಟಕವನ್ನು ಪಾಕಿಸ್ತಾನ್ ಮಾಡಲು ಹೊರಟಿದೆ. ಕರ್ನಾಟಕವನ್ನು ಪಾಕಿಸ್ತಾನಕ್ಕೆ ಸೇರ್ಪಡೆ ಮಾಡಿ ಬಿಡಿ ಎಂದು ವ್ಯಂಗವಾಡಿದರು.

ವಿಧಾನಸಭಾಧ್ಯಕ್ಷರು 18 ಮಂದಿ ಬಿಜೆಪಿ ಶಾಸಕರನ್ನು 6 ತಿಂಗಳ ಕಾಲ ಅಮಾನತ್ತು ಪಡೆಸಿರುವುದು ಕಾನೂನು ಬಾಹಿರವಾಗಿದೆ. ಅಸಂವಿಧಾನಾತ್ಮಕ, ಏಕಪಕ್ಷಿಯ , ಮನಸೋಚ್ಛೆಯಿಂದ ಕೈಗೊಂಡ ಅವೈಜ್ಞಾನಿಕವಾದ ನಿರ್ಧಾರವಾಗಿದೆ. ಜನಾದೇಶದಿಂದ ಆಯ್ಕೆಯಾದ ಶಾಸಕರಿಗೆ ಅಮಾನತ್ತು ಮಾಡುವ ಮೂಲಕ ಅಪಮಾನ ಮಾಡಿದ್ದಾರೆ, ಈ ನಿರ್ಧಾರವನ್ನು ಮರುಪರಶೀಲಿಸಿ



ಉದಯವಾಹಿನಿ ಚಿತ್ರ

> ರಾಜ್ಯದ ಮುಖ್ಯ ಮಂತ್ರಿ ಸಿದ್ದರಾಮಯ್ಯನವರಿಗೆ ಮುಸಲ್ಮಾನವರು ಮಾತ್ರ ಓಟ್ ಹಾಕಿಲ್ಲ ಎಲ್ಲಾ ಸಮುದಾಯದವರು ಓಟ್ ಹಾಕಿದ್ದಾರೆ. ಅವರು ಮುಸಲ್ಮಾನರಿಗೆ ಮಾತ್ರ ಮುಖ್ಯಮಂತ್ರಿಯಲ್ಲ ರಾಜ್ಯದ 6 ಕೋಟಿ ಜನತೆಗೆ ಸಿಎಂ ಆಗಿದ್ದಾರೆ ಎಂಬುವುದನ್ನು ಅರಿತು ಆಡಳಿತ ನಡೆಸಬೇಕು **-ಎಸ್.ಮುನಿಸ್ವಾಮಿ**

ಅಮಾನತ್ತು ಆದೇಶವನ್ನು ಕೂಡಲೇ ಹಿಂಪಡೆಯಬೇಕೆಂದು ಆಗ್ರಹ ಪಡೆಸಿದರು.

ಸರ್ಕಾರ ಕಾಮಗಾರಿಗಳಲ್ಲಿ ಶೇ 4 ರಷ್ಟು ಮೀಸಲಾತಿ ಮುಸ್ಲಿಂರಿಗೆ ನೀಡುವುದು ವಿದೇಶಗಳಲ್ಲಿ ವಿದ್ಯಾಭ್ಯಾಸ ಮಾಡುವವರಿಗೆ ಸಹಾಯಧನವಾಗಿ 20 ಲಕ್ಷ ದಿಂದ 30 ಲಕ್ಷದ ವರೆಗೆ ಹೆಚ್ಚಳ ಮಾಡಿರುವುದು. ಶಾದಿ ಭಾಗ್ಯ ,ಮುಸ್ಲಿಂ ಹೆಣ್ಣು ಮಕ್ಕಳ ಆತ್ಮ ಸಂರಕ್ಷಣೆಗೆ ಅನುದಾನ ಸೇರಿದಂತೆ ವಿವಿಧ ರೀತಿಯಲ್ಲಿ ತುಷ್ಟೀಕರಣ ರಾಜಕಾರಣದ ಮುಂದುವರೆದ ಭಾಗವಾಗಿದೆ ಎಂದು ದೂರಿದರು.

ಡಾ.ಬಿ.ಆರ್.ಅಂಬೇಡ್ಕರ್ ರಚಿಸಿದ ಸಂವಿಧಾನದಲ್ಲಿ ಧರ್ಮ ಆಧಾರಿತ ಮೀಸಲಾತಿ ಕೊಡಲು ಅವಕಾಶವಿಲ್ಲ ಇದನ್ನು ವಿವಿಧ ಉನ್ನತ ಮಟ್ಟದ ನ್ಯಾಯಾಲಯದಲ್ಲಿ ಸ್ಪಷ್ಟ ಪಡೆಸಿದೆ. ಡಾ. ಅಂಬೇಡ್ಕರ್ ಅವರ ಸಂವಿಧಾನಕ್ಕೆ ಕಾಂಗ್ರೆಸ್ ಪಕ್ಷವು ಮಾಡಿರುವ ಅಪಮಾನವಾಗಿದೆ. ಮತಗಳ ಒಲೈಕೆಗಾಗಿ ಮುಸ್ಲಿಂ ಸಮುದಾಯವನ್ನು ತುಷ್ಟೀಕರಣಗೊಳಿಸುತ್ತಿರುವ ಪರಮಾವಧಿಯಾಗಿದೆ. ಆಡಳಿತದಲ್ಲಿ ತಾರತಮ್ಯ ಮಾಡುವ ಮೂಲಕ ಹಿಂದುಗಳ ಸಮುದಾಯಕ್ಕೆ ಅನ್ಯಾಯ ಮಾಡುತ್ತಿರುವ ನಿರ್ಧಾರಗಳನ್ನು ಹಿಂದಕ್ಕೆ ಪಡೆದು ಸಮಾಜಿಕ ನ್ಯಾಯ ದೊರಕಿಸ ಬೇಕು ಇಲ್ಲವಾದರೆ ಉಗ್ರವಾದ ಪ್ರತಿಭಟನೆಯನ್ನು ಎದುರಿಸಬೇಕಾದಿತು ಎಂದು ಎಚ್ಚರಿಕೆ ನೀಡಿದರು.

**ಜನರಿಂದ ಹಣ ಲೂಟಿ**

**ರಾಜ್ಯದಲ್ಲಿ ಕಳೆದ ಎರಡು ವರ್ಷಗಳಿಂದ ಕರ್ನಾಟಕವು ರಣರಂಗವಾಗಿದೆ. ಕಾನೂನು ಸುವ್ಯವಸ್ಥೆಗಳು ಹದಗೆಟ್ಟಿದೆ. ಕಾಂಗ್ರೆಸ್ ಗ್ಯಾರೆಂಟಿಗಳಿಂದ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಒಂದು ಕಡೆ ಉಚಿತ ಎಂದು ಮತ್ತೊಂದು ಕಡೆ ದುಪ್ಪಟ್ಟು ಕಸಿಯುವ ಮೂಲಕ ಜನರಿಂದ ಹಣವನ್ನು ಲೂಟಿ ಮಾಡಲಾಗುತ್ತಿದೆ.**

ಸಾಮಾನ್ಯ ಜನರ ಬದುಕಿನ ಮೇಲೆ ಬರೆ ಎಳೆಯುತ್ತಿರುವ ಕಾಂಗ್ರೆಸ್ ಸರಕಾರವು ರೈತರ ಕೃಷಿಯ ವಿದ್ಯುತ್‌ಗೆ ಟ್ರಾನ್ಸ್ ಫಾರ್ಮರ್ ಅಳವಡಿಸುವ ವೆಚ್ಚವನ್ನು 2 ಲಕ್ಷ ರೂಗಳಿಗೆ ಏರಿಕೆ ಮಾಡಿದೆ. ಹಾಲಿನ ದರ ಏರಿಕೆ, ವಿದ್ಯುತ್ ದರ ಏರಿಕೆ ಬಸ್ ಪ್ರಯಾಣ ದರ ಏರಿಕೆ. ಸ್ಟಾಂಪ್ ಶುಲ್ಕ ಏರಿಕೆ ಮಾಡಿರುವುದಲ್ಲದೆ ದಿನೇ ದಿನೇ ಹೊಸ ತೆರಿಗೆಗಳನ್ನು ವಿಧಿಸುತ್ತಿರುವ ಪರಿಣಾಮ ಬಡಜನತೆಯ ಬದುಕು ದುರ್ಬರವಾಗಿದೆ. ಕೊಡಲೇ ಏರಿಕೆಯ ದರಗಳನ್ನು ಇಳಿಕೆ ಮಾಡಬೇಕೆಂದು ಆಗ್ರಹ ಪಡೆಸಿದರು, ರಂಜಾನ್ ಪ್ರಯುಕ್ತ 32 ಲಕ್ಷ ಕಿಟ್‌ಗಳನ್ನು ಹಂಚಲು ಮುಂದಾಗಿದೆ ಅದೇ ರೀತಿ ಯುಗಾದಿಗೂ ಕಿಟ್‌ಗಳನ್ನು ಏಕೆ ಹಂಚುತ್ತಿಲ್ಲ ಎಂದು ಪ್ರಶ್ನಿಸಿದ ಅವರು ಕರ್ನಾಟಕದ ಕಾಂಗ್ರೆಸ್ ಪಕ್ಷವು ಜಾತಿ ಮತ್ತು ಧರ್ಮದ ಮೇಲೆ ಆಡಳಿತ ನಡೆಸುವ ಮೂಲಕ ರಾಜ್ಯದಲ್ಲಿ ರಣರಂಗ ಮಾಡಲು ಅವಕಾಶ ನೀಡ ಬೇಡಿ ನಿಮ್ಮ ಆಡಳಿತದ ಮೊಂಡುತನದಿಂದ ಬಡ ಜನತೆಯನ್ನು ಬೀದಿಗೆ ಇಳಿಸಿದ್ದೀರಿ ಎಂದು ಕಿಡಿಕಾರಿದರು.

**ಅನುದಾನ ದುರ್ಬಳಕೆ**

**ರಾಜ್ಯ ಸರ್ಕಾರವು ಬಜೆಟ್‌ನಲ್ಲಿ ಎಸ್,ಸಿ,ಎಸ್ .ಟಿ. ಸಮುದಾಯಗಳಿಗೆ ಮೀಸಲಿಟ್ಟದ್ದ ಎಸ್.ಡಿ.ಎಸ್.ಪಿ. -ಟಿ.ಎಸ್.ಪಿ. ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ದುರ್ಬಳಿಸಿಕೊಂಡಿರುವುದು ಖಂಡನೀಯ. ಕಳೆದ 3 ವರ್ಷಗಳಲ್ಲಿ ಸುಮಾರು 39 ಸಾವಿರ ಕೋಟಿ ಹಣವನ್ನು ಬೇರೆ ಉದ್ದೇಶಗಳಿಗೆ ಬಳಿಸಲಾಗುತ್ತಿರುವುದರಿಂದ ಎಸ್.ಸಿ.ಎಸ್. ಟಿ. ಸಮುದಾಯಗಳಿಗೆ ವಂಚಿಸಲಾಗಿದೆ. ಈ ಅನುದಾವನ್ನು ಸಮುದಾಯದ ಅಭಿವೃದ್ದಿಗಳಿಗೆ ಮಾತ್ರ ಬಳಿಸ ಬೇಕೆಂದು ಒತ್ತಾಯಿಸಿದರು.**






## ಮಿನಿ ನ್ಯೂಸ್

### ದಾನ ಮಾಡಿದರೆ ನೆಮ್ಮದಿ ಪ್ರಾಪ್ತಿ

• **ಉದಯವಾಹಿನಿ ಮುಳಬಾಗಿಲು**

ದಾನ ಮಾಡುವುದರಲ್ಲಿ ಸಿಕ್ಕುವಷ್ಟು ನೆಮ್ಮದಿ ಬೇರೆಲ್ಲೂ ಸಿಗೋದಿಲ್ಲ, ಆರೋಗ್ಯವಂತ ಯುವ ಜನಾಂಗ ರಕ್ತದಾನವನ್ನು ಮಾಡುವ ಕಾಯಕವನ್ನು 3 ರಿಂದ 6 ತಿಂಗಳ ನಂತರ ನಿರಂತರವಾಗಿಸಿ ಕೊಂಡರೆ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದು ಕೋಲಾರ ಶಾಸಕ ಕೊತ್ತೂರು ಜಿ. ಮಂಜುನಾಥ್ ಹೇಳಿದರು. ಮುಳಬಾಗಿಲಿನ ಕಾಂಗ್ರೆಸ್ ಕಚೇರಿಯಲ್ಲಿ ಪ್ರಮಾಣ ಪತ್ರವನ್ನು ವಿತರಿಸಿ ಮಾತನಾಡಿದರು.

ಕಾಂಗ್ರೆಸ್ ಮುಖಂಡ ವಿ. ಆದಿನಾರಾಯಣ ಮಾತನಾಡಿ ಕಾಂಗ್ರೆಸ್ ಕಾರ್ಯಕರ್ತರು ಈ ರೀತಿ ಸೇವಾ ಚಟುವಟಿಕೆಗಳನ್ನು ನಿರಂತರವಾಗಿ ಹಮ್ಮಿಕೊಳ್ಳಬೇಕು, ಸಮಾಜಕ್ಕೆ ಉಪಯುಕ್ತ ಕಾರ್ಯಕ್ರಮಗಳನ್ನು ನೀಡುವ ಮೂಲಕ ಪಕ್ಷವನ್ನು ಸಂಘಟಿಸಬೇಕು, ನೀಲಕಂಠೇಗೌಡರ ನೆನಪಿನಲ್ಲಿ ತಿಂಗಳಿಗೊಮ್ಮೆ ಒಂದು ಸೇವ ಕಾರ್ಯಕ್ರಮ ಹಮ್ಮಿಕೊಳ್ಳಿ ಎಂದು ಸಲಹೆ ನೀಡಿದರು.

### ಬಿಳಿಗಿರಿ ರಂಗನಾಥ ಸ್ವಾಮಿ ದೇವಾಲಯದ ಹುಂಡಿಯಲ್ಲಿ 9.74 ಲಕ್ಷ ಹಣ ಸಂಗ್ರಹ

• **ಉದಯವಾಹಿನಿ ಚಾಮರಾಜನಗರ**

ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಪ್ರಸಿದ್ಧ ಯಾತ್ರ ಸ್ಥಳವಾದ ಬಿಳಿಗಿರಿರಂಗನ ಬೆಟ್ಟದ ಶ್ರೀ ಬಿಳಿಗಿರಿ ರಂಗನಾಥ ಸ್ವಾಮಿಯ ದೇವಾಲಯದಲ್ಲಿ ಗುರುವಾರ ಬುಧವಾರ ಬೆಳಿಗ್ಗೆ 10 ರಂದು ಹುಂಡಿಯ ಎಣಿಕೆ ಕಾರ್ಯವನ್ನು ತಹಶೀಲ್ದಾರ್ ಬಸವರಾಜು ನೇತೃತ್ವದಲ್ಲಿ ನಡೆಯಿತು. ಹುಂಡಿಯಲ್ಲಿ 9,74,822 ಹಣ ಸಂಗ್ರಹವಾಗಿದೆ.

## ಕುಡಿಯುವ ನೀರಿಗೆ ಸಮಸ್ಯೆ: ಕ್ರಮಕ್ಕೆ ಶಾಸಕರ ಸೂಚನೆ

• **ದಯವಾಹಿನಿ ಮುಳಬಾಗಿಲು**

ಬೇಸಿಗೆ ಕಾಲ ಬಂದಿರುವುದರಿಂದ ನಗರದಲ್ಲಿ ಜನತೆಗೆ ಕುಡಿಯುವ ನೀರಿನ ಸಮಸ್ಯೆ ಬಾರದಂತೆ ನಗರಸಭೆ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಶಾಸಕ ಸಮೃದ್ಧಿ ವಿ.ಮಂಜುನಾಥ್ ಸೂಚಿಸಿದರು.

ನಗರಸಭೆ ಸಭಾಂಗಣದಲ್ಲಿ ಸಾಮಾನ್ಯ ಸಭೆ ಹಾಗೂ 2025-26ನೇ ಸಾಲಿನ ಆಯವ್ಯಯ ಮಂಡನೆ ಸಭೆಯಲ್ಲಿ ಮಾತನಾಡಿ, ಮುಂದಿನ ಏಪ್ರಿಲ್ ತಿಂಗಳ ಹತ್ತರಂದು ನಗರದಲ್ಲಿ ನೀರಿನ ಸಮಸ್ಯೆ ಪರಿಹಾರಕ್ಕಾಗಿ ನಗರಸಭೆ ಸದಸ್ಯರ ಸಭೆ ನಡೆಸಿ ಟಾಸ್ಕ್ ಪೋಸ್ ಸಂಸ್ಥೆಯನ್ನು ರಚಿಸಿ ಎಲ್ಲೆಲ್ಲಿ ನೀರಿನ ಸಮಸ್ಯೆ ಕಂಡು ಬರುತ್ತದೆ.

ಆ ಪ್ರದೇಶದಲ್ಲಿ ನಗರಸಭೆಯಿಂದ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡುವ ಜೊತೆಗೆ ಹೊಸದಾಗಿ ಕೊಳವೆ ಬಾವಿಗಳನ್ನು ಕೊರೆಸಲಾಗುವುದು ಎಂದು ತಿಳಿಸಿದರು.

ನಗರದ ಡಿವಿಜಿ ಕನ್ನಡ ಗಡಿ ಭವನದ ಒಳಗಡೆ ಎಸಿ ಅಳವಡಿಸಲಾಗುವುದು ಶಾರದಾ ಮಹಿಳಾ



ಉದಯವಾಹಿನಿ ಚಿತ್ರ

ಕಾಲೇಜು ಮುಂಭಾಗದ ರಸ್ತೆ ಅದಿಗಟ್ಟಿದ್ದು ರಸ್ತೆ ಅಭಿವೃದ್ಧಿ ಕಾರ್ಯ ಕೈಗೊತ್ತಿಕೊಳ್ಳಲಾಗುವುದು ಎಂದರಲ್ಲದೆ ನಗರಸಭೆ ಸದಸ್ಯರ ಅವಧಿ ಇನ್ನು ಕೇವಲ ಐದು ತಿಂಗಳು ಮಾತ್ರ ಉಳಿದಿದ್ದು ರಾಜಕಾರಣ ಮಾಡದೆ ಜನರ ಸೇವೆ ನಿಸ್ವಾರ್ಥದಿಂದ ಮಾಡಬೇಕೆಂದು ಸದಸ್ಯರಿಗೆ ಕಿವಿಮಾತು ಹೇಳಿದರು.

ನಗರಸಭೆ ಸದಸ್ಯ ಡಿ.ಸೋಮಣ್ಣ ಮಾತನಾಡಿ, ನಗರಸಭೆಗಳನ್ನು ನಡೆಸಿದಾಗ ಮೊದಲು ರಾಷ್ಟ್ರಗೀತೆ ಹಾಗೂ ನಾಡಗೀತೆಗಳನ್ನು ಹಾಡಿದ ನಂತರವೇ ಸಭೆ ಸಮಾರಂಭಗಳನ್ನು ಪ್ರಾರಂಭಿಸಬೇಕು ಎಂದು ನೀಡಿದ ಸಲಹೆಗೆ ಶಾಸಕರು ಸೇರಿದಂತೆ ನಗರಸಭೆಯ ಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರು ಪೌರಾಯುಕ್ತರು, ಸಿಬ್ಬಂದಿ ಎದ್ದುನಿಂತು ರಾಷ್ಟ್ರಗೀತೆ ಮತ್ತು ನಾಡಗೀತೆಗಳನ್ನು ಹಾಡಿ ಗೌರವಿಸಿದರು.

> ಈಗಾಗಲೇ ನೇತಾಜಿ ಕ್ರೀಡಾಂಗಣದಲ್ಲಿ ಕ್ರೀಡಾಂಗಣ ಅಭಿವೃದ್ಧಿ ಕಾರ್ಯ ನಡೆಯುತ್ತಿದ್ದು ಒಳಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣ ನಿರ್ಮಿಸಿ ಸುಸಜ್ಜಿತ ಕ್ರೀಡಾಂಗಣವನ್ನಾಗಿ ರೂಪಿಸಲಾಗುವುದು, ಪಿ. ಒಂದರಿಂದ ರಾಷ್ಟ್ರೀಯ ಹೆದ್ದಾರಿ ಬಾಲಾಜಿ ಭವನದಿಂದ ಎಂಸಿ ರಸ್ತೆ ಮೂಲಕ ನರಸಿಂಹ ತೀರ್ಥ ಬಳಿ ಇರುವ ನ್ಯಾಯಾಲಯ ಕಟ್ಟಡ ಮುಂಭಾಗದ ರಸ್ತೆ ವರೆಗೂ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಲು ಮುಂದಾಗಿರುವುದಾಗಿ ತಿಳಿಸಿದರು.

## ರೆಸಾರ್ಟ್ ಮೇಲೆ ಅಬಕಾರಿ ಅಧಿಕಾರಿಗಳ ದಾಳಿ

• **ಉದಯವಾಹಿನಿ ಹನೂರು**

ತಾಲ್ಲೂಕಿನ ಎಲೆಮಾಳ ಗ್ರಾಮದ ಗ್ರೀನ್ ಕಾರ್ಪೆಟ್ ರೆಸಾರ್ಟ್ ನಲ್ಲಿ ಮಾರಾಟ ಮಾಡಲು ಅಕ್ರಮವಾಗಿ ಸಂಗ್ರಹ ಮಾಡಿದ್ದ ಒಟ್ಟು 77.350 ಲೀಟರ್ ಬಿಯರ್ ಮದ್ಯವನ್ನು ಅಬಕಾರಿ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ದಿನಾಂಕ 25-03-2025 ರಂದು ಮಧ್ಯಾಹ್ನ ಮಾನ್ಯ ಅಬಕಾರಿ ಜಂಟಿ ಆಯುಕ್ತರು (ಜಾ ಮತ್ತು ತ) ಮೈಸೂರು ಮತ್ತು ಮಾನ್ಯ ಅಬಕಾರಿ ಉಪ ಆಯುಕ್ತರು, ಚಾಮರಾಜನಗರ ಜಿಲ್ಲಾ ಅಬಕಾರಿ ಉಪ ಅಧೀಕ್ಷಕರು ರವರ ನಿರ್ದೇಶನದಂತೆ, ಚಾಮರಾಜನಗರ ಉಪ ವಿಭಾಗ ಹಾಗೂ ಕೊಳ್ಳೇಗಾಲ ವಲಯ ಅಬಕಾರಿ ನಿರೀಕ್ಷಕರ ರವರ ಮಾರ್ಗದರ್ಶನದಲ್ಲಿ ದಾಳಿ ನಡೆಸಿದ್ದಾರೆ.

ಕೊಳ್ಳೇಗಾಲ ವಲಯದ ಸಿಬ್ಬಂದಿಗಳೊಂದಿಗೆ ಅಬಕಾರಿ ಉಪನಿರೀಕ್ಷಕರು ಹನೂರು ತಾಲ್ಲೂಕಿನ ಎಲೆಮಾಳ ಗ್ರಾಮದಲ್ಲಿ ಇರುವ ಗ್ರೀನ್ ಕಾರ್ಪೆಟ್ ರೆಸಾರ್ಟ್‌ನಲ್ಲಿ ಅಕ್ರಮವಾಗಿ ಬಿಯರ್ ಹೊಂದಿರುವ



ಉದಯವಾಹಿನಿ ಚಿತ್ರ

ಬಗ್ಗೆ ಖಚಿತ ಮಾಹಿತಿ ಮೇರೆಗೆ ದಾಳಿ ಮಾಡಿ ರೆಸಾರ್ಟ್‌ನ ಸ್ಟೋರೂಂನಲ್ಲಿ ರೆಸಾರ್ಟ್ ಗೆ ಬರುವ ಗ್ರಾಹಕರಿಗೆ ಮಾರಾಟ ಮಾಡವ ಸಲುವಾಗಿ ಸಂಗ್ರಹಿಸಿ ಇಟ್ಟಿರುವ ಬಿಯರ್ ಮದ್ಯವನ್ನು ವಶಪಡಿಸಿಕೊಂಡಿದ್ದಾರೆ.

ಒಟ್ಟು 650 ಮಿಲಿಯ 119 ಕಿಂಗ್ ಫಿಶರ್ ಬಿಯರ್ ಬಾಟಲ್ಗಳಿರುವ 10 ಬಿಯರ್ ರಟ್ಟಿನ ಪೆಟ್ಟಿಗೆಗಳನ್ನು (ಒಟ್ಟು 77.350 ಲೀಟರ್) ಜಪ್ತುಗೊಳಿಸಿ ಸದರಿ ರೆಸಾರ್ಟ್ ನ ವ್ಯವಸ್ಥೆಪಾಕರಾದ ಚನ್ನಪ್ಪ ರವರನ್ನು ವಶಕ್ಕೆ ಪಡೆದು ಆರೋಪಿತನಿಗೆ 2023 ಕಲಂ 35(3) ರೀತ್ಯಾ ನೋಟಿಸ್ ನೀಡಿ ತನಿಖಾಧಿಕಾರಿಯ ಮುಂದೆ ವಿಚಾರಣೆಗೆ ಹಾಜರಾಗಲು ಸೂಚಿಸಿದ್ದಾರೆ.

## ನ್ಯಾಯಾಂಗ ತನಿಖೆಗೆ ಸೊಗಡು ಶಿವಣ್ಣ

• **ಉದಯವಾಹಿನಿ ತುಮಕೂರು**



ಹನಿಟ್ರ್ಯಾಪ್ ಪ್ರಕರಣವನ್ನು ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ನ್ಯಾಯಮೂರ್ತಿ ಉಸ್ತುವಾರಿಯಲ್ಲಿ ತನಿಖೆ ನಡೆಸುವಂತೆ ಮಾಜಿ ಸಚಿವ ಸೊಗಡು ಶಿವಣ್ಣ ಇಲ್ಲಿ ಗುರುವಾರ ಒತ್ತಾಯಿಸಿದರು.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ಪತ್ರ ಬರೆದಿದ್ದು, ನ್ಯಾಯಮೂರ್ತಿ ಉಸ್ತುವಾರಿಯಲ್ಲಿ ಡಿಜಿಪಿ ಮಟ್ಟದ ಪೊಲೀಸ್ ಅಧಿಕಾರಿ ನೇತೃತ್ವದಲ್ಲಿ ತನಿಖೆ ನಡೆಸಬೇಕು. ಆರು ತಿಂಗಳಲ್ಲಿ ಸಮಗ್ರವಾಗಿ ತನಿಖೆ ನಡೆಸುವಂತೆ ಮನವಿ ಮಾಡಲಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಮೊದಲಿಗೆ ರಾಜಕಾರಣಿಗಳನ್ನು ಹನಿಟ್ರ್ಯಾಪ್ ಮಾಡಲಾಗುತ್ತಿದೆ. ನಂತರ ಸರ್ಕಾರದ ಅಧಿಕಾರಿಗಳು, ಮಠಾಧೀಶರು, ಚಿನ್ನದ ಅಂಗಡಿ ಮಾಲೀಕರು, ನ್ಯಾಯಾಧೀಶರು, ಶ್ರೀಮಂತ ಉದ್ಯಮಿಗಳು, ವೈದ್ಯರು ಸೇರಿದಂತೆ ಸಮಾಜದ ಪ್ರಮುಖರನ್ನು ಹನಿಟ್ರ್ಯಾಪ್‌ಗೆ ಸಿಲುಕಿಸಲಾಗುತ್ತಿದೆ. ಆ ಮೂಲಕ ಅಕ್ರಮವಾಗಿ ಹಣ ಸಂಪಾದನೆ ಮಾಡುವುದು ಮುಂದುವರಿದಿದೆ ಎಂದು ಹೇಳಿದರು.

ಕೆಲವು ಕ್ರಿಮಿನ್‌ಗಳು ಹನಿಟ್ರಾಪ್ ಮಾಡುವುದನ್ನೇ ಉದ್ಯಮ ಮಾಡಿಕೊಂಡಿದ್ದಾರೆ. ಇದಕ್ಕೆ ಕೆಲವು ರಾಜಕಾರಣಿಗಳು ಕುಮ್ಮಕ್ಕು ನೀಡುತ್ತಿದ್ದಾರೆ. ಬಲಿಷ್ಠ ರಾಜಕಾರಣಿಗಳು. ಪೊಲೀಸ್ ಅಧಿಕಾರಿಗಳು, ಕೆಲವು ಪತ್ರಕರ್ತರು. ಯುವಜನರು, ಸಮಾಜಘಾತುಕ ಶಕ್ತಿಗಳು ಇಂತಹ ಅಪರಾಧ ಕೃತ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.

## ಕಸಬಾ ಕೃಷಿಪತ್ತಿನ ಸಹಕಾರ ಸಂಘ ಜೆ.ಡಿ.ಎಸ್ ಪಾಲು

• **ಉದಯವಾಹಿನಿ ಹುಣಸೂರು**

ಹೈವೋಲ್ಟೇಜ್ ಚುನಾವಣೆಯಾಗಿ ಮಾರ್ಪಾಡಾಗಿದ್ದ ಕಸಬಾ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ ಎಲ್ಲಾ 12 ಸ್ಥಾನಗಳನ್ನೂ ಬಾಚಿಕೊಳ್ಳುವ ಮೂಲಕ ಜೆ.ಡಿ.ಎಸ್ ಪ್ರಾಬಲ್ಯ ಮೆರೆದಿದೆ.

ಚುನಾವಣೆಯನ್ನು ಪ್ರತಿಷ್ಠೆಯಾಗಿ ಸ್ವೀಕರಿಸಿದ ಕಾಂಗ್ರೆಸ್ ಒಂದು ಸ್ಥಾನವನ್ನೂ ಗೆಲ್ಲಲಾಗದೇ ತೀವ್ರ ನಿರಾಸೆ ಅನುಭವಿಸಿದೆ.

ಸಾಲಗಾರರ ಕ್ಷೇತ್ರವು 5 ಸಾಮಾನ್ಯ ಕ್ಷೇತ್ರವನ್ನು ಹೊಂದಿದ್ದು, ಈ ಪೈಕಿ ಶಾಸಕ ಜಿ.ಡಿ.ಹರೀಶ್‌ಗೌಡ ಅತಿಹೆಚ್ಚು 332 ಮತಗಳೊಂದಿಗೆ ಜಯಭೇರಿ ಬಾರಿಸಿದ್ದಾರೆ. ರಮೇಶ್ (273 ಮತಗಳು), ಎಸ್.ದಿವಾಕರ್ (256), ಮಹದೇವು (256) ಮತ್ತು ಕೆ.ಎಸ್.ಬೀರೇಶ್ 236 ಮತಗಳೊಂದಿಗೆ ವಿಜಯ ಸಾಧಿಸಿದ್ದಾರೆ.

ಪರಿಶಿಷ್ಟ ಜಾತಿ ಕ್ಷೇತ್ರದಲ್ಲಿ ರುದ್ರಬೋವಿ 207 ಮತಗಳು, ಪರಿಶಿಷ್ಟ ಪಂಗಡ ಕ್ಷೇತ್ರದಲ್ಲಿ ಪುಟ್ಟರಾಜು 197 ಮತಗಳನ್ನು ಗಳಿಸಿ ವಿಜಯಶಾಲಿಗಳಾದರೆ, ಮಹಿಳಾ



ಉದಯವಾಹಿನಿ ಚಿತ್ರ

ಮೀಸಲು ಕ್ಷೇತ್ರದಲ್ಲಿ ಶಶಿಕಲಾ ಬಾಯಿ 211, ಸುನಂದಾ 198, ಮತಗಳೊಂದಿಗೆ ಜಯಶೀಲರಾದರು. ಬಿಸಿಎಂ(ಎ) ಕ್ಷೇತ್ರದಿಂದ ಎಂ.ಕೆ.ವಾಸೇಗೌಡ 287 ಮತಗಳನ್ನು ಗಳಿಸಿದರೆ, ಬಿಸಿಎಂ(ಬಿ) ಕ್ಷೇತ್ರದಿಂದ ಎಚ್.ಸಿ.ರವಿಕುಮಾರ್ 231 ಮತಗಳೊಂದಿಗೆ ವಿಜಯ ಸಾಧಿಸಿದರು. ಸಾಲಗಾರರಲ್ಲದ ಕ್ಷೇತ್ರ(ಸಾಮಾನ್ಯ) ನಗರಸಭೆ ಮಾಜಿ ಅಧ್ಯಕ್ಷೆ ಗೀತಾ ನಿಂಗರಾಜು 260 ಮತಗಳನ್ನು ಪಡೆದು ನಗೆ ಬೀರಿದ್ದಾರೆ.

ಫೆ.18ರಂದು ಸಂಘದ ಚುನಾವಣೆ ನಡೆದಿತ್ತು. ಆದರೆ ಸಂಘದ ಸದಸ್ಯರ ಸದಸ್ಯತ್ವ ವಜಾಗೊಳಿಸಿರುವುದನ್ನು ಪ್ರಶ್ನಿಸಿ ಕೆಲ ಸದಸ್ಯರು ಹೈಕೋರ್ಟ್ ಮೆಟ್ಟಿಲೇರಿದ್ದರು.

**ವಿಜಯೋತ್ಸವಕ್ಕೆ ಜನಸಾಗರ**

**ಗೆಲುವು ಮಾಹಿತಿ ಪಡೆದ ಜೆ.ಡಿ.ಎಸ್ ಕಾರ್ಯಕರ್ತರು ಮತ ಎಣಿಕೆ ನಡೆದ ಅಂಬೇಡ್ಕರ್ ಭವನದ ಸುತ್ತಮುತ್ತ ಜಮಾವಣೆಗೊಂಡು ಪಟಾಕಿ ಸಿಡಿಸಿ, ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು.**

ಸದಸ್ಯರಿಗೆ ಮತದಾನದ ಹಕ್ಕು ಕಲ್ಪಿಸಿದ ನ್ಯಾಯಾಲಯ ಮುಂದಿನ ಆದೇಶದವರೆಗೆ ಮತ ಎಣಿಕೆ ನಡೆಸದಂತೆ ಮಧ್ಯಂತರ ಆದೇಶ ನೀಡಿತ್ತು.

ನಂತರ ಮಾ.22ರಂದು ಮತ ಎಣಿಕೆಗೆ ಆದೇಶ ನೀಡಿದ್ದರನ್ವಯ ನಗರದ ಅಂಬೇಡ್ಕರ್ ಭವನದಲ್ಲಿ ಶನಿವಾರ ಬಿಗಿ ಪೊಲೀಸ್ ಭದ್ರತೆಯೊಂದಿಗೆ ಮತ ಎಣಿಕೆ ಕಾರ್ಯ ಸಂಪನ್ನಗೊಂಡಿತು. ನಂತರ ಚುನಾವಣಾಧಿಕಾರಿ ರಾಜು ವಿಜೇತ ಅಭ್ಯರ್ಥಿಗಳಿಗೆ ಪ್ರಮಾಣಪತ್ರ ನೀಡಿ ವಿಜೇತರ ಪಟ್ಟಿಯನ್ನು ಘೋಷಿಸಿದರು.

### ಜನರಿಗೆ ಸ್ಪಂದಿಸುವೆ: ಬಿ.ರೇವಣ್ಣ

• **ಉದಯವಾಹಿನಿ ಪಾಂಡವಪುರ**

ರಾಜಕೀಯ ಅಧಿಕಾರ ಸಿಗಲಿ, ಸಿಗದಿರಲಿ, ಸದಾ ಮೇಲುಕೋಟೆ ಕ್ಷೇತ್ರದ ಜನರ ನೋವು ನಲಿವುಗಳಿಗೆ ಸ್ಪಂದಿಸುವೆ ಎಂದು ಕೆಪಿಸಿಸಿ ಸದಸ್ಯ ಬಿ. ದೇವಣ್ಣ ಹೇಳಿದರು. ತಮ್ಮ ನಿವಾಸದಲ್ಲಿ ಅಭಿಮಾನಿಗಳು ಏರ್ಪಡಿಸಿದ್ದ ಹುಟ್ಟುಹಬ್ಬವನ್ನು ಆಚರಿಸಿದ ವೇಳೆ ಮಾತನಾಡಿ, ನಾನೊಬ್ಬ ಸಾಮಾನ್ಯ ರೈತ ಕುಟುಂಬದಿಂದ ಬಂದವನು. ನನ್ನಂತಹ ಯುವಕನನ್ನು ಕ್ಷೇತ್ರದ ಜನತೆ ಇಷ್ಟೊಂದು ಪ್ರೀತಿ ಮತ್ತು ಅಭಿಮಾನ ತೋರಿಸಿ ಹಾರೈಸಿದ್ದಾರೆ' ಎಂದು ಸಂತಸ ವ್ಯಕ್ತಪಡಿಸಿದರು. ಬಿ.ರೇವಣ್ಣ ಅಭಿಮಾನಿ ಬಳಗದ ಬಿ.ಟಿ.ಮಂಜುನಾಥ್ ಮಾತನಾಡಿ, ಹಲವಾರು ವರ್ಷಗಳಿಂದ ರೇವಣ್ಣ ಅವರು ಸಮಾಜಮುಖಿ ಕೆಲಸ ಮಾಡುತ್ತಿದ್ದಾರೆ. ಸೂಕ್ತ ಸಮಯದಲ್ಲಿ ಸರಿಯಾದ ರಾಜಕೀಯ ನಿರ್ಧಾರ ಕೈಗೊಳ್ಳಲಿದ್ದಾರೆ. ವೀಣಾ ರೇವಣ್ಣ, ಅಭಿಮಾನಿ ಬಳಗದ ಬಣ್ಣದ ಅಂಗಡಿ ಮಹದೇವು, ಲಯನ್ ಎಲ್. ಕೆ.ಜಯರಾಮು, ಶ್ರೀಧರ, ಶ್ರೀಕಂಠ, ಭರತ್ ಪಾಲ್ಗೊಂಡಿದ್ದರು.

### ಕುಡಿಯುವ ನೀರಿನ ಘಟಕಕ್ಕೆ ಚಾಲನೆ

• **ಉದಯವಾಹಿನಿ ಮಡಿಕೇರಿ**

ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಮೈದಾನದಲ್ಲಿ ಆಟಗಾರರಿಗೆ ಪ್ರಯೋಜನಕಾರಿಯಾಗಿ ರೋಟರಿ ಮಡಿಕೇರಿ ವುಡ್ಸ್ ವತಿಯಿಂದ 1.80 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾದ ಶುದ್ಧ ಕುಡಿಯುವ ನೀರಿನ ಘಟಕವನ್ನು ರೋಟರಿ ಜಿಲ್ಲೆ 3181ನ ಗವರ್ನರ್ ವಿಕ್ರಂದತ್ತ ಲೋಕಾರ್ಪಣೆಗೊಳಿಸಿದರು.

ನಂತರ ಮಾತನಾಡಿದ ಅವರು ಕೊಡಗು ಜಿಲ್ಲೆಯಲ್ಲಿ ರೋಟರಿ ಸಂಸ್ಥೆಯು ಜನೋಪಯೋಗಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಹಮ್ಮಿಕೊಂಡಿರುವುದು ಶ್ಲಾಘನೀಯ. ರೋಟರಿ ವುಡ್ ಶುದ್ದ ಕುಡಿಯುವ ನೀರಿನ ಘಟಕದ ಮೂಲಕ ಬಹುದಿನಗಳ ಬೇಡಿಕೆಯನ್ನು ಈಡೇರಿಸಿದೆ' ಎಂದು ಶ್ಲಾಘಿಸಿದರು.

ಕೊಡಗು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಅಶೋಕ ಸಂಗಪ್ಪ ಆಲೂರು ಮಾತನಾಡಿ, 120 ವರ್ಷಗಳ ಸುಧೀರ್ಘ ಇತಿಹಾಸವನ್ನು ಮನುಕುಲದ ಸೇವೆಯಲ್ಲಿ ಕಳೆದಿರುವ ರೋಟರಿ ಸಂಸ್ಥೆ ಜಗತ್ತಿನಾದ್ಯಂತ ಲಕ್ಷಾಂತರ ಯೋಜನೆಗಳೊಂದಿಗೆ ಮಾನವ ಸೇವೆಗೆ ಮುಂದಾಗಿದೆ. ಕಾರ್ಯಪ್ಪ ಕಾಲೇಜಿನ ಕ್ರೀಡಾಪಟುಗಳಿಗೆ ಅಗತ್ಯವಾದ ಶುದ್ಧ ಕುಡಿಯುವ ನೀರಿನ ಘಟಕದ ಮೂಲಕ ರೋಟರಿ ತನ್ನ ಕಾರ್ಯಯೋಜನೆಯನ್ನು ಮತ್ತಷ್ಟು ಅರ್ಥಪೂರ್ಣವಾಗಿಸಿದೆ ಎಂದು ಶ್ಲಾಘಿಸಿದರು.

ಪ್ರಾಂಶುಪಾಲ ಮೇಜರ್ ರಾಘವ ಮಾತನಾಡಿ, 'ಕಾಲೇಜಿನ ಅನೇಕ ಬೇಡಿಕೆಗಳನ್ನು ರೋಟರಿ ಸಂಸ್ಥೆಗಳು ಈಡೇರಿಸುವ ಮೂಲಕ ನೈಜವಾದ ಸಮಸ್ಯೆಗಳಿಗೆ ಪರಿಣಾಮಕಾರಿಯಾಗಿ ಸ್ಪಂದಿಸಿದೆ. ಹಳ್ಳಿಹಳ್ಳಿಗೂ ರೋಟರಿ ತನ್ನ ಸದಸ್ಯರ ಮೂಲಕ ಸಹಾಯ ಯೋಜನೆ ಕೈಗೊಳ್ಳುವುದರೊಂದಿಗೆ ಗಾಂಧೀಜಿಯವರ ರಾಮರಾಜ್ಯದ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟಿದೆ' ಎಂದರು.

## ಮಹದೇಶ್ವರ ಬೆಟ್ಟದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳನ್ನು ಬೇಗ ಪೂರ್ಣಗೊಳಿಸಬೇಕು: ಡಿಸಿ

# ಮಲೆ ಮಹದೇಶ್ವರ ಬೆಟ್ಟದ ಮಾಸ್ಟರ್ ಪ್ಲಾನ್ ಕುರಿತು ಅಧಿಕಾರಿಗಳ ಸಭೆ

• **ದಯವಾಹಿನಿ ಹನೂರು**

ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ಪುಣ್ಯಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದ ಮಾಸ್ಟರ್ ಪ್ಲಾನ್ ಅಂತಿಮಗೊಳಿಸುವ ಸಂಬಂಧ ಶಾಸಕ ಎಂ.ಆರ್.ಮಂಜುನಾಥ್ ಹಾಗೂ ಜಿಲ್ಲಾಧಿಕಾರಿ ಶಿಲ್ಪಾನಾಗ್ ನೇತೃತ್ವದಲ್ಲಿ ಮಹದೇಶ್ವರ ಬೆಟ್ಟದ ನಾಗಮಲೆ ಭವನದಲ್ಲಿ ಇಲಾಖೆಯ ಅಧಿಕಾರಿಗಳು ಇಂಜಿನಿಯರ್ ಅವರುಗಳ ಸಭೆ ನಡೆಯಿತು.

ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಮಾತನಾಡಿ ಮುಖ್ಯಮಂತ್ರಿಗಳು ಹಾಗೂ ಪ್ರಾಧಿಕಾರದ ಅಧ್ಯಕ್ಷರು ಅವರ ಸೂಚನೆ ಮೇರೆಗೆ ವಿವಿಧ ಇಲಾಖೆ ಅಧಿಕಾರಿಗಳ ಜೊತೆ ಸಭೆ ನಡೆಸಿ ಮಹದೇಶ್ವರ ಬೆಟ್ಟದ ಮಾಸ್ಟರ್ ಪ್ಲಾನ್ ಅಂತಿಮ ಗೊಳಿಸುವ ನಿಟ್ಟಿನಲ್ಲಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು.

ಸರ್ವೆ ಕಾರ್ಯ ನಡೆಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಮಾದರಿ ಧಾರ್ಮಿಕ ಕ್ಷೇತ್ರವನ್ನಾಗಿಸಲು ಕ್ರಮವಹಿಸಲಾಗುವುದು. ಹನೂರಿನಿಂದ ಮಲೆ ಮಹದೇಶ್ವರ ಬೆಟ್ಟಕ್ಕೆ ಕೆ-ಶಿಫ್ ರಸ್ತೆ ಕಾಮಗಾರಿ ಕೈಗೊಳ್ಳುವುದು ಸೇರಿದಂತೆ ಇನ್ನಿತರೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು ಎಂದರು.

ಅಲ್ಲದೆ ಮಹದೇಶ್ವರ ಬೆಟ್ಟದ ಮಾಸ್ಟರ್ ಪ್ಲಾನ್ ಆವರಣದ ಅರಣ್ಯದಂಚಿನಲ್ಲಿ ಬರುವ ವಿವಿಧ ಭಾಗಗಳಲ್ಲಿ ಇರುವ ಜಮೀನನ್ನು ತುರ್ತಾಗಿ ಸರ್ವೇ ನಡೆಸಿ ವರದಿ ನೀಡುವಂತೆ ಸೂಚನೆ ನೀಡಿದರು.

ಸಾರಿಗೆ ಬಸ್ ನಿಲ್ದಾಣವನ್ನು ಹೆಚ್ಚಾಗಿ ಅಭಿವೃದ್ಧಿಪಡಿಸಬೇಕು.

ದಿನದಿಂದ ದಿನಕ್ಕೆ ಸಾರಿಗೆ ಬಸ್ ವ್ಯವಸ್ಥೆ ಹೆಚ್ಚಾಗಿ ಕಲ್ಪಿಸುವುದು ಹಾಗೂ ಮಹದೇಶ್ವರ ಬೆಟ್ಟಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬರುವುದರಿಂದ ಅವರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು. ನೆರಳಿನ ವ್ಯವಸ್ಥೆ. ಕುಡಿಯುವ ನೀರಿನ ವ್ಯವಸ್ಥೆ ಶೌಚಾಲಯ ನಿರ್ಮಾಣ ಮಾಡಲು ವರದಿಯನ್ನು ಸಲ್ಲಿಸಲಾಗುವುದು ಎಂದರು.

ಮಹದೇಶ್ವರ ಬೆಟ್ಟದಲ್ಲಿ ಸಚಿವ ಸಂಪುಟ ದಿನಾಂಕ ಯಾವಾಗ ಎಂದು ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಯವರು ಸಚಿವ ಸಂಪುಟ ನಡೆಸುವ ದಿನಾಂಕ ನಿಗದಿ ಮಾಡಿಲ್ಲ ಈ ಬಗ್ಗೆ ಇನ್ನೂ ನಮಗೆ ಯಾವುದೇ ಮಾಹಿತಿ ನೀಡಿಲ್ಲ ಮುಂದಿನ ದಿನಗಳಲ್ಲಿ ಇದರ ಬಗ್ಗೆ ತಿಳಿಸುತ್ತೇವೆ ಎಂದು ಹೇಳಿದರು.

ಶಾಸಕ ಎಂ. ಆರ್.ಮಂಜುನಾಥ್ ಅವರು ಮಾತನಾಡಿ ಮಹದೇಶ್ವರ ಬೆಟ್ಟದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು. ಈಗಾಗಲೇ ಕೆಲವು ಕಾಮಗಾರಿಗಳು ಉದ್ಘಾಟನೆ ಹಂತಕ್ಕೆ ಬಂದಿದೆ.

ಅದನ್ನು ಸಹ ಪೂರ್ಣಗೊಳಿಸಿ ಇನ್ನುಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದರು.

> ಈಗಾಗಲೇ ಮಹದೇಶ್ವರ ಬೆಟ್ಟದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕು ಎಂದು ತಿಳಿಸಿದರು. ಕೆಲವು ಅಭಿವೃದ್ಧಿ ಕಾಮಗಾರಿಗಳು ವಿಳಂಬವಾಗುತ್ತಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದ ಜಿಲ್ಲಾಧಿಕಾರಿಯವರು ಇಂಜಿನಿಯರ್ ಸೆಲ್ವಂ ಗಣಪತಿ ಅವರನ್ನು ತರಾಟೆಗೆ ತೆಗೆದುಕೊಂಡು. ಮುಂದಿನ ದಿನಗಳಲ್ಲಿ ಬರುವಷ್ಟರಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು
> **-ಶಿಲ್ಪಾ ನಾಗ್, ಜಿಲ್ಲಾಧಿಕಾರಿ**



ಉದಯವಾಹಿನಿ ಚಿತ್ರ

**ಶೌಚಾಲಯ ಸ್ನಾನದ ಗೃಹ ನಿರ್ಮಾಣ ಕಾಮಗಾರಿ ವೀಕ್ಷಣೆ**

**ನಂತರ ಮಹದೇಶ್ವರ ಬೆಟ್ಟದ ಡಾರ್ಮೆಟ್ರಿ ಹತ್ತಿರ ನೂತನವಾಗಿ ಲೋಕೋಪಯೋಗಿ ಇಲಾಖೆಯ ವತಿಯಿಂದ 95 ಲಕ್ಷ ರೂ ರಲ್ಲಿ ನಿರ್ಮಿಸಲಾಗುತ್ತಿರುವ ಬೃಹತ್ ಸೌಚಾಲಯ ಹಾಗೂ ಸ್ನಾನದ ಗೃಹ ನಿರ್ಮಾಣ ಅಭಿವೃದ್ಧಿ ಕಾಮಗಾರಿಯನ್ನು ವೀಕ್ಷಣೆ ಮಾಡಿ ತುರ್ತಾಗಿ ಕೆಲಸವನ್ನು ಮುಗಿಸುವಂತೆ ಸಂಬಂಧ ಪಟ್ಟ ಇಂಜಿನೀಯರ್‌ಗಳಿಗೆ ಸೂಚನೆಯನ್ನು ನೀಡಿದರು.**

## ರೈತರಿಗೆ ಸಾಲ ನೀಡದ ಎಂಡಿಸಿಸಿ ಬ್ಯಾಂಕ್: ಪ್ರತಿಭಟನೆ

• **ಉದಯವಾಹಿನಿ ಮೈಸೂರು**

ಎಂಡಿಸಿಸಿ ಬ್ಯಾಂಕ್‌ನಿಂದ ರೈತರಿಗೆ ಸರಿಯಾಗಿ ಸಾಲ ನೀಡದ ಹಿನ್ನೆಲೆಯಲ್ಲಿ, ಶಾಸಕ ಜಿ.ಡಿ.ಹರೀಶ್ ಗೌಡ ನೇತೃತ್ವದಲ್ಲಿ ನೂರಾರು ರೈತರು ಬ್ಯಾಂಕ್ ಮುಂಭಾಗ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಹುಣಸೂರು ತಾಲ್ಲೂಕಿನ ನಾನಾ ಕೃಷಿ ಪತ್ತಿನ ಸರಕಾರಿ ಸಂಘಗಳ ಸದಸ್ಯರು, ರೈತರು, ನಗರದ ಅಶೋಕ ರಸ್ತೆಯಲ್ಲಿರುವ ಬ್ಯಾಂಕ್ ಮುಂಭಾಗ ಪ್ರತಿಭಟನೆ ನಡೆಸಿ, ಸರಕಾರದ ವಿರುದ್ಧ ಘೋಷಣೆ ಕೂಗಿ ಕಿಡಿಕಾರಿದರು. ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಶಾಸಕ ಜಿ.ಡಿ.ಹರೀಶ್‌ಗೌಡ, ಸಹಕಾರಿ ಬ್ಯಾಂಕ್‌ಗಳಿಗೆ ರೈತರು ಸಾಲ ಮರು ಪಾವತಿ ಮಾಡಿದ್ದರೂ, ಅವರಿಗೆ ಬ್ಯಾಂಕ್‌ನಿಂದ ಮತ್ತೆ ಸಾಲ ನೀಡುತ್ತಿಲ್ಲ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಎಂದು ತಾರತಮ್ಯ ಮಾಡುತ್ತಾರೆ. ಸಾಲ ಕೊಡಲು ಕೂಡ ರಾಜಕೀಯ ಮಾಡುತ್ತಾರೆ. ಬ್ಯಾಂಕ್ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ. ಸಾಲ ಕೊಡುವುದಕ್ಕೆ ಯಾಕೆ



ಉದಯವಾಹಿನಿ ಚಿತ್ರ

ತಾರತಮ್ಯ ಮಾಡಬೇಕು ಎಂದು ಪ್ರಶ್ನಿಸಿದರು.

ಹುಣಸೂರಿನ ರೈತರಿಗೆ ಎಂಡಿಸಿಸಿ ಬ್ಯಾಂಕ್‌ನಲ್ಲಿ ಸಾಲ ಕೊಡುತ್ತಿಲ್ಲ. ಕಳೆದ 5 ತಿಂಗಳಿನಿಂದಲೂ ಕೂಡ ರೈತರನ್ನು ಅಲೆದಾಡಿಸುತ್ತಿದ್ದಾರೆ. ರೈತರಲ್ಲೂ ಜೆಡಿಎಸ್, ಬಿಜೆಪಿ, ಕಾಂಗ್ರೆಸ್ ಎಂಬಂತಾಗಿದೆ. ಎಂಡಿಸಿಸಿ ಬ್ಯಾಂಕ್ ದಿವಾಳಿ ಆಗಿದೆ ಅನ್ನಿಸುತ್ತದೆ.

ಸಹಕಾರ ಕ್ಷೇತ್ರದಲ್ಲಿ ಜಿಟಿಡಿ ಕುಟುಂಬದ ಹಿಡಿತ ತಪ್ಪಿಸಲು ರೈತರನ್ನು ಟಾರ್ಗೆಟ್ ಮಾಡುತ್ತಿದ್ದಾರೆ. ಹನಗೂಡು, ಧರ್ಮಾಪುರ ಸಹಕಾರಿ ಬ್ಯಾಂಕ್‌ಗಳಲ್ಲಿ ಸಾಲ ಕಟ್ಟಿದ್ದರೂ ಸಾಲ ನೀಡುತ್ತಿಲ್ಲ. ಸಾಲ ಕೊಡಲು ರೈತರಿಂದ ಅಧಿಕಾರಿಗಳು ಲಂಚ ಪಡೆಯುತ್ತಿದ್ದಾರೆ ಎಂದು ಆರೋಪಿಸಿದರು. ಹುಣಸೂರಿನಲ್ಲಿ 15 ವರ್ಷಗಳಿಂದಲೂ ಅಧಿಕಾರದಲ್ಲಿದ್ದ ನಾಯಕರು ಇದರ ಹಿಂದೆ ಇದ್ದಾರೆ. ಅವರೇ ಖುದ್ದು ರೈತರಿಗೆ ಸಾಲ ನೀಡದಂತೆ ನಿರ್ದೇಶನ ನೀಡಿದ್ದಾರೆ ಎಂದರು.

> ನಾನು ಒಬ್ಬ ಹಾಲಿ ಶಾಸಕನಾಗಿ ರೈತರ ಪರ ಇಲ್ಲಿ ಬಂದು ಪ್ರತಿಭಟನೆ ಮಾಡುತ್ತಿದ್ದೇನೆ. ನಾನು ಸಹಕಾರಿ ಬ್ಯಾಂಕ್ ಕಡೆ ತಲೆ ಹಾಕಬಾರದು ಎಂದು ಈ ರೀತಿಯಾಗಿ ಮಾಡುತ್ತಿದ್ದಾರೆ. ನಾನು ಕೈ ಮುಗಿದು ಕೇಳುತ್ತೇನೆ. ರೈತರ ಪರವಾಗಿ ಕೆಲಸ ಮಾಡಿ ನಾನು ಬರೋದೇ ಇಲ್ಲ. ನಾನು ಬರಬಾರದು ಎಂದೇ ಚುನಾವಣೆ ನಡೆಸಿಲ್ಲ. ಈಗ ಸಾಲ ನೀಡದೆ ಇನ್ನೊಂದು ರೀತಿಯ ಆಟ ಆಡುತ್ತಿದ್ದಾರೆ ಎಂದು ರಾಜ್ಯ ಸರಕಾರದ ವಿರುದ್ಧ ಹರಿಹಾಯ್ದರು.

## ಇಂದು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಉದ್ಘಾಟನೆ

• **ಉದಯವಾಹಿನಿ ತುಮಕೂರು**

ವಿಶ್ವವಿದ್ಯಾನಿಲಯದ ನೂತನ ಕ್ಯಾಂಪಸ್ ಜ್ಞಾನಸಿರಿಯಲ್ಲಿ ನಿರ್ಮಿಸಲಾಗಿರುವ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ರಾಜ್ಯ ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್. ಎಸ್. ಬೋಸರಾಜು ಮಾ. 28 ರಂದು ಬೆಳಿಗ್ಗೆ 10ಕ್ಕೆ ಲೋಕಾರ್ಪಣೆಗೊಳಿಸಲಿದ್ದಾರೆ.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಮೋಶನ್ ಸೊಸೈಟಿ ಅನುದಾನದಲ್ಲಿ ಈ ವಿಜ್ಞಾನ ಕೇಂದ್ರವನ್ನು ನಿರ್ಮಿಸಲಾಗಿದೆ.

ಕೇಂದ್ರ ಜಲಶಕ್ತಿ ಹಾಗೂ ರೈಲ್ವೇ ಖಾತೆ ರಾಜ್ಯ ಸಚಿವರು ಹಾಗೂ ತುಮಕೂರು ಸಂಸದರಾದ ವಿ. ಸೋಮಣ್ಣ, ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಆಗಿರುವ ಡಾ. ಜಿ. ಪರಮೇಶ್ವರ್,



ಉದಯವಾಹಿನಿ ಚಿತ್ರ

ಉನ್ನತ ಶಿಕ್ಷಣ ಸಚಿವರಾದ ಡಾ. ಎಂ. ಸಿ. ಸುಧಾಕರ್, ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ಅವರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಶಾಸಕ ಬಿ. ಸುರೇಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಉಪಪ್ರಾದೇಶಿಕ ವಿಜ್ಞಾನ ಕೇಂದ್ರದ ಅಧ್ಯಕ್ಷರೂ ಆಗಿರುವ ಕುಲಪತಿಗಳಾದ ಪ್ರೊ. ಎಂ. ವೆಂಕಟೇಶ್ವರಲು, ಕುಲಸಚಿವರಾದ ನಾಹಿದಾ ಉಪಸ್ಥಿತರಿರುವರು.

**ರೂ. 3.65 ಕೋಟಿ ವೆಚ್ಚ**

**ವಿಜ್ಞಾನವನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ರೂ. 3.65 ಕೋಟಿ ವೆಚ್ಚದಲ್ಲಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಿದ್ದು, ಇದರಲ್ಲಿ ಒಳಾಂಗಣ ಮತ್ತು ಹೊರಾಂಗಣ ಪ್ರಾತ್ಯಕ್ಷಿಕೆಗಳು ಇರುತ್ತವೆ. ತುಮಕೂರಿನ ನಿರ್ಮಿತಿ ಕೇಂದ್ರವು ಈ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ವಿಜ್ಞಾನ ಕೇಂದ್ರಕ್ಕಾಗಿ ಬಿದರಕಟ್ಟೆ ಜ್ಞಾನಸಿರಿ ಕ್ಯಾಂಪಸ್‌ನಲ್ಲಿ ಐದು ಎಕರೆ ಜಾಗವನ್ನು ಮೀಸಲಿಡಲಾಗಿದೆ. ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಈ ಕೇಂದ್ರಕ್ಕೆ ಭೇಟಿ ನೀಡಲು ಅವಕಾಶವಿರುತ್ತದೆ.**

## ಅಂತರಾಳದಿಂದ... EDITORIAL

# ಸತ್ಯವನ್ನು ಹಾಸ್ಯದ ಮೂಲಕ ಸಮಾಜಕ್ಕೆ ಹೇಳುವವರು ಬೇಕು

**ಕುನಾಲ್ ಕಾಮ್ರಾ ಪ್ರಕರಣ**

ಹಾಸ್ಯವನ್ನು ಹಾಸ್ಯವಾಗಿ ಸ್ವೀಕರಿಸಲು ತನ್ನಿಂದ ಆಗುತ್ತಿಲ್ಲ ಎಂಬುದನ್ನು ನಮ್ಮ ಸಮಾಜವು ಮತ್ತೆ ಮತ್ತೆ ತೋರಿಸಿಕೊಡುತ್ತಿದೆ. ಹಾಸ್ಯದ ವಿರುದ್ಧ ನಡೆದಿರುವ ಅಭಿಯಾನದಲ್ಲಿ ರಾಜಕಾರಣಿಗಳು ಮುಂಚೂಣಿಯಲ್ಲಿ ಇರುವಂತೆ ಕಾಣುತ್ತಿದೆ. ಹಾಸ್ಯ ಮಾಡಿದಾಗ ಬಹಳ ಸುಲಭವಾಗಿ ಕೋಪಕ್ಕೆ ಗುರಿಯಾಗುವ ಗುಂಪಿನವರು ತಮ್ಮ ಸಿಟ್ಟು ತೋರಿಸಿಕೊಳ್ಳಲು ಹಾಸ್ಯ ಕಲಾವಿದ ಕುನಾಲ್ ಕಾಮ್ರಾ ಅವರನ್ನು ಮತ್ತೆ ಮತ್ತೆ ಗುರಿಮಾಡಿಕೊಳ್ಳುತ್ತಿದ್ದಾರೆ.

ಈ ಬಾರಿ ಕುನಾಲ್ ಅವರು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಏಕನಾಥ ಶಿಂದೆ ಅವರನ್ನು ಉದ್ದೇಶಿಸಿ ಮುಂಬೈನಲ್ಲಿ ಆಡಿದ ಮಾತೊಂದು ವಿವಾದ ಸೃಷ್ಟಿಸಿದೆ. ಶಿಂದೆ ಅವರನ್ನು ಗುರಿಯಾಗಿಸಿಕೊಂಡು ಕುನಾಲ್ ಅವರು ಕಾರ್ಯಕ್ರಮವೊಂದರಲ್ಲಿ ಮಾತಿನಿಂದ ತಿವಿದಿರುವುದು ಶಿವಸೇನಾ ಕಾರ್ಯಕರ್ತರನ್ನು ಕೆರಳಿಸಿದೆ. ಅವರು ಕಾರ್ಯಕ್ರಮ ನಡೆದ 'ಹ್ಯಾಬಿಟ್ಯಾಟ್ ಸ್ಟುಡಿಯೊ'ದಲ್ಲಿ ದಾಂದಲೆ ಸೃಷ್ಟಿಸಿದ್ದಾರೆ, ಆ ಸ್ಟುಡಿಯೊ ಇರುವ ಹೋಟೆಲ್‌ನ ಮೇಲೆಯೂ ತಮ್ಮ ಕೋಪವನ್ನು ಹರಿಬಿಟ್ಟಿದ್ದಾರೆ. ಸ್ಟುಡಿಯೊದ ಒಂದು ಭಾಗದಲ್ಲಿ ಅಕ್ರಮವಾಗಿ ಶೆಡ್‌ಗಳನ್ನು ನಿರ್ಮಿಸಲಾಗಿತ್ತು ಎಂದು ಹೇಳಿ ಬೃಹನ್ ಮುಂಬೈ ಮಹಾನಗರ ಪಾಲಿಕೆಯು ಅವುಗಳನ್ನು ತೆರವು ಮಾಡಿದೆ. ಶಿಂದೆ ಅವರ ವಿರುದ್ಧ ಅವಹೇಳನಕಾರಿ ಮಾತು ಆಡಿದ ಆರೋಪ ಹೊರಿಸಿ ಕುನಾಲ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಕುನಾಲ್ ಅವರು ಕ್ಷಮೆ ಯಾಚಿಸಬೇಕು ಎಂದು ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಒತ್ತಾಯಿಸಿದ್ದಾರೆ. ಒಂದು ಹೆಜ್ಜೆ ಮುಂದೆ ಹೋಗಿರುವ ಶಿವಸೇನಾ ನಾಯಕರೊಬ್ಬರು ಕುನಾಲ್ ಅವರನ್ನು ಪಕ್ಷದ ಕಾರ್ಯಕರ್ತರು ದೇಶದ ಎಲ್ಲೆಡೆ ಅಟ್ಟಿಸಿಕೊಂಡು ಹೋಗುತ್ತಾರೆ, ಅವರು ದೇಶ ಬಿಟ್ಟು ಓಡಿ ಹೋಗುವಂತೆ ಮಾಡಲಾಗುತ್ತದೆ ಎಂಬ ಎಚ್ಚರಿಕೆ ನೀಡಿದ್ದಾರೆ.

> ಹಾಸ್ಯದ ಮಾತುಗಳನ್ನು ಆಡಿದ ವ್ಯಕ್ತಿಯ ಬೆನ್ನಟ್ಟಿ ಹೋಗುವುದು, ಆತನನ್ನು ಕಿರುಕುಳಕ್ಕೆ ಗುರಿಪಡಿಸುವುದು ಗಂಭೀರವಾದ ವಿಚಾರ. ಟೀಕೆ ಮತ್ತು ಹಾಸ್ಯವನ್ನು ಶಿವಸೇನಾ ಪಕ್ಷವು ಸಹಿಸಿದ ನಿದರ್ಶನಗಳು ಹಿಂದೆಯೂ ಬಹಳ ಕಡಿಮೆಯೇ. ಹಾಸ್ಯವನ್ನು ಹಿಂಸೆಯ ಮೂಲಕ ಎದುರಿಸಿದ ಇತಿಹಾಸ ಕೂಡ ಈ ಪಕ್ಷಕ್ಕೆ ಇದೆ. ಶಿವಸೇನಾ ಪಕ್ಷವನ್ನು ಸ್ಥಾಪಿಸಿದ ವ್ಯಕ್ತಿ ವೃತ್ತಿಪರ ವ್ಯಂಗ್ಯಚಿತ್ರಕಾರ ಆಗಿದ್ದವರು.

ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ರಾಜಕಾರಣಿಗಳಲ್ಲಿ ಇರುವ ತಪ್ಪು ಗ್ರಹಿಕೆಯನ್ನು ಫಡ್ನವೀಸ್ ಅವರ ಮಾತು ತೋರಿಸುತ್ತಿದೆ. ''ಸ್ವಾತಂತ್ರ್ಯ ಎಂಬುದು ನಿಯಂತ್ರಣವಿಲ್ಲದ ವರ್ತನೆಯಾಗಬಾರದು... ರಾಜ್ಯದ ಜನರು ಗೌರವಿಸುವ ಉಪಮುಖ್ಯಮಂತ್ರಿಯನ್ನು, ರಾಜ್ಯದ ಹಿರಿಯ ನಾಯಕರನ್ನು ಅಗೌರವದಿಂದ ಕಾಣಲು, ಇಂತಹ ಕೀಳು ಮಟ್ಟದ ಹಾಸ್ಯ ಮಾಡಲು ಯಾರಿಗೂ ಹಕ್ಕಿಲ್ಲ' ಎಂದು ಫಡಣವೀಸ್ ಹೇಳಿದ್ದಾರೆ. ಜನರು ತಮ್ಮನ್ನು ಗೌರವಿಸಬೇಕು, ತಮ್ಮನ್ನು ಹೊಗಳಬೇಕು ಎಂದು ಬಯಸುವ ಮೂಲಕ ರಾಜಕಾರಣಿಗಳು ಅಗೌರವ ಸಂಪಾದಿಸಬಲ್ಲರು, ಅಷ್ಟೇ. ಹಾಸ್ಯವೊಂದು ಕೆಳಮಟ್ಟದ್ದೋ ಮೇಲ್ಮಟ್ಟದ್ದೋ ಎಂಬುದನ್ನು ತೀರ್ಮಾನಿಸಬೇಕಿರುವುದು ಮುಖ್ಯಮಂತ್ರಿಯ ಕೆಲಸ ಅಲ್ಲ. ಕೆಳಮಟ್ಟದ ಹಾಸ್ಯಕ್ಕೂ ಅದರದೇ ಆದ ಸ್ಥಾನ ಇದೆ, ಅಂತಹ ಹಾಸ್ಯವನ್ನು ಅದರದೇ ಆದ ವೇದಿಕೆಯಲ್ಲಿ ಮಾಡಬಹುದು. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸಬೇಕಿರುವ ಮುಖ್ಯಮಂತ್ರಿಯು ಅಭಿವ್ಯಕ್ತಿಯ ಹಕ್ಕನ್ನು ಚಲಾಯಿಸಿದ್ದಕ್ಕಾಗಿ ಪ್ರಜೆಯೊಬ್ಬರು ಕ್ಷಮೆ ಕೇಳಬೇಕು ಎಂದು ಆಗ್ರಹಿಸುತ್ತಿರುವುದು ಆಶ್ಚರ್ಯ ಮೂಡಿಸುವಂಥದ್ದು. ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ, ಆದರೆ ಅದಕ್ಕೆ ಮಿತಿ ಇದೆ ಎಂದು ಶಿಂದೆ ಹೇಳಿದ್ದಾರೆ. ಆದರೆ ಟೀಕೆಗೆ, ಹಾಸ್ಯಕ್ಕೆ ಗುರಿಯಾಗಿರುವ ವ್ಯಕ್ತಿಯೇ 'ಮಿತಿ'ಯನ್ನು ನಿರ್ಧರಿಸಲು ಆಗದು.



ಹಾಸ್ಯದ ಮಾತುಗಳನ್ನು ಆಡಿದ ವ್ಯಕ್ತಿಯ ಬೆನ್ನಟ್ಟಿ ಹೋಗುವುದು, ಆತನನ್ನು ಕಿರುಕುಳಕ್ಕೆ ಗುರಿಪಡಿಸುವುದು ಗಂಭೀರವಾದ ವಿಚಾರ. ಟೀಕೆ ಮತ್ತು ಹಾಸ್ಯವನ್ನು ಶಿವಸೇನಾ ಪಕ್ಷವು ಸಹಿಸಿದ ನಿದರ್ಶನಗಳು ಹಿಂದೆಯೂ ಬಹಳ ಕಡಿಮೆಯೇ. ಹಾಸ್ಯವನ್ನು ಹಿಂಸೆಯ ಮೂಲಕ ಎದುರಿಸಿದ ಇತಿಹಾಸ ಕೂಡ ಈ ಪಕ್ಷಕ್ಕೆ ಇದೆ. ಶಿವಸೇನಾ ಪಕ್ಷವನ್ನು ಸ್ಥಾಪಿಸಿದ ವ್ಯಕ್ತಿ ವೃತ್ತಿಪರ ವ್ಯಂಗ್ಯಚಿತ್ರಕಾರ ಆಗಿದ್ದವರು. ಹೀಗಿದ್ದರೂ ವ್ಯಂಗ್ಯ ಮತ್ತು ವಿಡಂಬನೆಯನ್ನು ಎದುರಿಸಲು ಈ ಪಕ್ಷವು ದೈಹಿಕ ದಾಳಿ, ಬೆದರಿಕೆ, ದಾಂದಲೆಯಂತಹ ಅಸ್ತ್ರಗಳನ್ನು ಬಳಕೆ ಮಾಡುತ್ತಿದೆ. ಅಸಹನೆಯ ವಾತಾವರಣವೊಂದು ದೇಶದಲ್ಲಿ ಬಲ ಹೆಚ್ಚಿಸಿಕೊಳ್ಳುತ್ತಿದೆ. ರಾಜಕಾರಣಿಗಳು ತಮ್ಮನ್ನು ತಾವು ನೈತಿಕವಾಗಿ ಬಹಳ ಉನ್ನತ ವ್ಯಕ್ತಿಗಳೆಂದು ಭಾವಿಸುತ್ತಿದ್ದಾರೆ. ಹಾಸ್ಯವೆಂಬುದು ಸಮಾಜವು ತನಗೆ ತಾನೇ ಹಿಡಿದುಕೊಳ್ಳುವ ಕನ್ನಡಿ. ಅದನ್ನು ಸಹಿಸಲು ಆಗದೇ ಇರುವುದು ಸರ್ವಾಧಿಕಾರದ, ಅನಾರೋಗ್ಯಕರವಾದ ಸಮಾಜದ ಲಕ್ಷಣ. ಆಡಿದ ಮಾತುಗಳಿಗೆ ಕ್ಷಮೆ ಕೇಳುವುದಿಲ್ಲ ಎನ್ನುವ ಮೂಲಕ ಕುನಾಲ್ ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಅಧಿಕಾರಸ್ಥರ ಮುಖಕ್ಕೆ ಹಿಡಿಯುವಂತೆ ಸತ್ಯವನ್ನು ಹಾಸ್ಯದ ಮೂಲಕ ಹೇಳುವ ವ್ಯಕ್ತಿಗಳು ಸಮಾಜಕ್ಕೆ ಬೇಕು.

# ರಾಮಾಯಣ



## ಕೈಕೇಯಾ ದೇವಿಗೆ ಮಂಥರೆಯ ದುಬೋಧನೆ

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ನನ್ನನ್ನು ಕರೆದುಕೊಂಡುಹೋಗದಿದ್ದರೆ ನಾನು ವಿಷಪಾನದಿಂದಲಾದರೂ ಅಗ್ನಿಪ್ರವೇಶದಿಂದಲಾದರೂ ಪ್ರಾಣವನ್ನು ತೊರೆಯುವೆನು ಎಂದು ಹೇಳಿದಳು. ಶ್ರೀರಾಮನು ಆ ಮಾತನ್ನು ಕೇಳಿಯೂ ವನಕ್ಕೆ ಕರೆದುಕೊಂಡುಹೋಗುವುದಕ್ಕೆ ಒಡಂಬಡದಿರಲು ಸೀತಾದೇವಿಯು ಅತ್ಯಂತ ದುಃಖಾಕ್ರಾಂತೆಯಾಗಿ ತನ್ನ ಶೋಕಾಗ್ನಿಯಿಂದ ಅತ್ಯಂತ ಉಷ್ಣವಾಗಿ ಸುರಿಯುತ್ತಿದ್ದ ಕಣ್ಣೀರಿನಿಂದ ಭೂಮಿಯನ್ನು ನೆನೆಸುತ್ತ ಕೋಪಗೊಂಡಿದ್ದಳು.

**ಸೀತಾದೇವಿಯನ್ನು ಕರೆದುಕೊಂಡು ಹೋಗುವುದಕ್ಕೆ ಶ್ರೀರಾಮನ ಸಂಮತಿ**

ಆ ಬಳಿಕ ಶ್ರೀರಾಮನು ಸಂತಸದಿಂದಿರಲು ಸೀತಾದೇವಿಯು ತನ್ನ ಪತಿಯಾದ ರಘುನಾಥನನ್ನು ಸ್ನೇಹಾತಿಶಯದಿಂದಲೂ ಬಹುಮಾನದಿಂದಲೂ ಕೈ ಹಿಡಿದು ನಿಲ್ಲಿಸಿ ಆತನನ್ನು ಕುರಿತು ಹೇಳ ತೊಡಗಿದಳು: ಶ್ರೀರಾಮ, ಮಿಥಿಲಾಪಟ್ಟಣದಲ್ಲಿ ಸಕಲತತ್ತ್ವವನ್ನೂ ಬಲ್ಲ ನನ್ನ ತಂದೆಯಾದ ಜನಕರಾಯನು ಅಯೋನಿಜೆಯಾದ ನನ್ನನ್ನು ಮಗಳಾಗಿ ಪಡೆದು ನನ್ನ ಸೌಂದರಲಕ್ಷಣಗಳನ್ನು ನೋಡಿ ಪುರುಷೋತ್ತಮನಾದ ನಾರಾಯಣನೇ ತನಗೆ ಅಳಿಯನಾಗುವನೆಂದು ತಿಳಿದು ನನ್ನನ್ನು ನಿನಗೆ ಕೊಟ್ಟು ವಿವಾಹ ಮಾಡಿದನು. ಸೂರ್ಯನಂತೆ ತಪಿಸುತ್ತ ತೇಜೋಮಯನಾದ ನಿನ್ನಲ್ಲಿ ಪೌರುಷವಿಲ್ಲವೆಂದು ಅಜ್ಞಾನದಿಂದ ನುಡಿದರೆ ಅದು ಅನೃತವಲ್ಲದೆ ಸತ್ಯವಲ್ಲ, ನೀನು ಯಾವಕಾರಣ ಸಂಶಯಪಡುತ್ತೀಯೆ ನಿನಗೆ ಯಾರಿಂದ ಭಯವುಂಟಾಗಿದೆ ಮತ್ತೊಂದು ಗತಿಯಿಲ್ಲದ ನನ್ನನ್ನು ಏಕೆ ಬಿಟ್ಟು ಹೋಗುವುದಾಗಿ ಹೇಳುತ್ತೀಯೆ ಪೂರ್ವದಲ್ಲಿ ದ್ಯುಮತ್ತೇನನೆಂಬ ರಾಜನ ಮಗಳೂ ಪತಿವ್ರತೆಯೂ ಆದ ಸಾವಿತ್ರಿ ಎಂಬವಳು ತನ್ನ ಪತಿಯಾದ ಸತ್ಯವಂತನ ಹಿಂದೆಯೇ ವನಕ್ಕೆ ಹೋಗಿ ಅತ್ಯಂತ ಕೀರ್ತಿಯನ್ನು ಪಡೆದಳು. ಹಾಗೆ ನಾನು ವನಕ್ಕೆ ಬಂದು ನಿನ್ನ ಸೇವಾ ಸತ್ಕಾರಗಳನ್ನು ಮಾಡಿ ಕೀರ್ತಿಯನ್ನು ಪಡೆಯುವಂತೆ ಮಾಡು. ನಾನು ನಿನ್ನನ್ನು ಹೊರತಾಗಿ ಮತ್ತೊಬ್ಬ ಪುರುಷನನ್ನು ಮನಸ್ಸಿನಿಂದಲೂ ಸ್ಮರಿಸಿದವಳಲ್ಲ. ಕುಲಗೇಡಿಯಾದ ಸ್ತ್ರೀಯಂತೆ ಇರತಕ್ಕವಳಲ್ಲ. ಶ್ರೀರಾಮ, ಬಹುಕಾಲದಿಂದ ನಿನ್ನನ್ನೇ ನಂಬಿಕೊಂಡಿರುವ ಪತ್ನಿಯಾದ ನನ್ನನ್ನು ನರ್ತಕನಂತೆ ಬೇರೆಯವರಿಗೆ ಕೊಟ್ಟು ಹೋಗಲು ಬಯಸುತ್ತೀಯಾ ನನ್ನನ್ನು ವನಕ್ಕೆ ಕರೆದುಕೊಂಡು ಹೋಗು, ನಿನ್ನ ಸಂಗಡ ಅರಣ್ಯವಾಸವನ್ನು ಮಾಡಿದರೂ ತಪಸ್ಸನ್ನು ಮಾಡಿದರೂ ನನಗೆ ಬಳಲಿಕೆ ತೋರದು. ನಾನು ನಿನ್ನ ಜೊತೆಯಲ್ಲಿ ಬಂದು ಎಲೆ ಮರಗಳ ಮೇಲೆ ಮಲಗಿದರೂ ರಾಜಹಂಸ ಪಕ್ಷಿಯ ತುಬುಟಗಳ ಹಾಸಿಗೆಯ ಮೇಲೆ ಮಲಗಿದ ಹಾಗೆ ಶರೀರಕ್ಕೆ ಅತ್ಯಂತ ಸುಖವಾಗಿರುವುದು. ಮತ್ತು ಭಯಂಕರವಾದ ಸುಳಿಗಾಳಿಗಳಿಂದೇಳುವ ಕೆಂಧೂಳಿಯು ನನ್ನ ಮೈಯ ಮೇಲೆ ಮುಸುಕಿದರೂ ನಿನ್ನ ಸಹವಾಸದಿಂದ ಗಂಧಾನುಲೇಪನದಂತೆ ತೋರುವುದು. ನಿನ್ನ ಸಂಗಡ ಗರಿಕೆಯ ಮೇಲೆ ಮಲಗಿದರೂ ಶ್ರೇಷ್ಠವಾದ ರತ್ನಕಂಬಳಿಯ ಮೇಲೆ ಶಯನಮಾಡುವಂತೆ ಸುಖವಾಗಿಯೇ ಇರುವುದು, ಕಂದ ಮೂಲ ಫಲ ತರಗೆಲೆಗಳನ್ನು ನಿನ್ನ ಕೈಯಿಂದ ತೆಗೆದುಕೊಂಡರೆ ಅವು ಅಮೃತಕ್ಕೆ ಸಮಾನವಾಗಿರುವುವು. ನಾನು ನಿನ್ನ ಸಮೀಪದಲ್ಲಿದ್ದರೆ ತಾಯಿತಂದೆ ಮನೆ ಮೊದಲಾದವನ್ನು ನೆನೆಯುವವಳಲ್ಲ.

**ಮುಂದುವರಿಯುವುದು...**

# ಗರ್ವ



**ಜ್ಞಾನ ಅಮೃತಕ್ಕೆ ಸಮಾನ**

ಕೆಲವರು ತಾವು ಮಾಡಿದ ಸಮಾಜಮುಖಿ ಕಾರ್ಯಗಳಲ್ಲಿ ಯಶಸ್ಸು ಕಂಡಾಗ ಸಂತಸ ಪಡುತ್ತಾರೆ,ಹಾಗಿರುವುದು ತಪ್ಪಲ್ಲ, ಆದರೆ ಬೀಗುವುದು ತಪ್ಪೆನಿಸುತ್ತದೆ. ಆ ಮೂಲಕ ಕೆಲವರು ಸಲ್ಲದ ವರ್ತನೆಗೆ ಮುಂದಾಗುತ್ತಾರೆ. ಅವರ ಕಾರ್ಯದ ಪ್ರಯೋಜನ ಪಡೆದವರಲ್ಲಿ ಕೆಲವರು ಅವರನ್ನು ಮುಖಸ್ತುತಿ ಮಾಡುತ್ತಿರುವವರೂ ಇರುತ್ತಾರೆ. ಅದರಿಂದಾಗಿ ಕೆಲವರು ಅಹಂಕಾರಿಗಳಾಗುತ್ತಾರೆ. ಇನ್ನು ಕೆಲವರು ತಮ್ಮನ್ನು ಪ್ರಶಂಸೆ ಮಾಡುವುದನ್ನು ತಿಳಿದು ನವಚೈತನ್ಯ ಹೊಂದುತ್ತಾರೆ.

ಅಹಂಕಾರಿಗಳ ವ್ಯಕ್ತಿತ್ವ ಮಸುಕಾಗುತ್ತದೆ. ಅಗೌರವಕ್ಕೂ ಕಾರಣವಾಗುವ ಸಾಧ್ಯತೆ ಉಂಟಾಗುತ್ತದೆ. ತನ್ನ ಸಾಧನೆ ಮೂಲಕ ಸಾರ್ವಜನಿಕ ಕ್ಷೇತ್ರದಲ್ಲಿ ಗೌರವಾದರಗಳಿಗೆ ಕಾರಣರಾಗಬೇಕು. ಸ್ವಂತಿಕೆಗಾಗಿ ಹಾಗೂ ಸಮುದಾಯದ ಜನರ ಅಗತ್ಯ ಕೊರತೆ ನಿವಾರಿಸುವುದಕ್ಕಾಗಿ ಪ್ರಯತ್ನಿಸುವುದು ಪ್ರಜ್ಞಾವಂತಿಕೆಯ ಲಕ್ಷಣವೆನಿಸುತ್ತದೆ, ವ್ಯಕ್ತಿಯ ಕಾರ್ಯ ಹಾಗೂ ಅಭಿವ್ಯಕ್ತಿ ಜನರು ಅವರ ಹತ್ತಿರ ಹೋಗುವಂತೆ ಮಾಡುತ್ತಿರ ಬೇಕು, ಇಲ್ಲದೆ ಹೋದರೆ ಸಿಡಿದು ಹೋಗುತ್ತಾರೆ. ಅದರಿಂದ ಮನಸ್ಸಿಗೆ ಬಿಸಿ ತಾಗುತ್ತದೆ. ಜನರಿಗೆ ಉಪಯುಕ್ತ ಕಾರ್ಯ ಮಾಡದಿದ್ದರೆ ಅಪಾಯವಿಲ್ಲ; ಮಾಡುವವರಲ್ಲಿ ಸಭ್ಯತೆಯ ಉಪಾಯವಿದೆ ಬೇಕು.

ನಾನು, ನನ್ನಿಂದ ಎಂಬ ಅಹಂಕಾರ ದಿಂದ ಕುಟುಂಬದ ಸದಸ್ಯರೇ ಸಿಡಿದೇಳುತ್ತಾರೆ, ಅಂದಮೇಲೆ ಸ್ನೇಹಿತರು ಶತ್ರುಗಳಾಗದಿರಬಹುದೇ ಈ ಸತ್ಯವನ್ನು ತಿಳಿದ ಮೇಲೆ ವ್ಯಕ್ತಿ ನಾನು ಎಂಬ ದುರಭಿಮಾನ ತೊರೆಯಬೇಕು, ಅಂತಹ ಗುಣ, ಸ್ವಭಾವದಿಂದ ಶತ್ರುಗಳೂ ಮಿತ್ರರಾಗುತ್ತಾರೆ.

ವಿಶ್ವಾಸ್.ಡಿ.ಗೌಡ

ನಾವು ಬದುಕಿದರೂ, ವಿಧಿಯಾಟದಿಂದ ಸದುಸ್ಯೆಗಳು ಉಂಟಾಗುವ ಸಾಧ್ಯತೆಯೂ ಇರುತ್ತದೆ. ಇವುಗಳಿಂದ ಹೊರ ಬರಲು ದೊಂದಿಗೆ ಬೆರೆಯುವದು, ಸರಳ ಹಾಗೂ ಸಮಾನ ಮನಸ್ಕರೊಂದಿಗೆ ನಿಕಟ ಸ್ನೇಹ ತುಂಬ ಅಗತ್ಯ.

ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ ಕೊಟ್ಟದ್ದು ಕೆಟ್ಟತೆನಬೇಡ, ಅದು ಮುಂದೆ ಕಟ್ಟಿಹುದು ಬುತ್ತಿ ಸರ್ವಜ್ಞ ಎಂದು ಕವಿಮಾತು ಹೇಳಿದ್ದಾರೆ.

ಇಂತಹ ವಿಚಾರಗಳನ್ನು ಮಂಥನ ಮಾಡಿಕೊಂಡು ಮಾಡಿದ ಸತ್ಕಾರ್ಯ ಹಾಗೂ ಸೇವೆಯಿಂದ ಸಂತುಷ್ಟನಾಗಬೇಕು. ಆ ಮೂಲಕ ಮನಸ್ಸು ಶಾಂತವಾಗಿರ ಬಲ್ಲದು, ಅಧಿಕಾರ ಲಾಲಸೆಯಿಂದ ಸಲ್ಲದ ಹವ್ಯಾಸಗಳ ನ್ಯಾಯ-ನೀತಿಯನ್ನು ಪಾಲಿಸುತ್ತಿರುವವರು ಬಾಳಿನ ಪವಿತ್ರಿಯ ಪಾವಿತ್ರ್ಯವನ್ನೂ ಧಾರ್ಮಿಕತೆಯನ್ನೂ ರಕ್ಷಿಸಿಕೊಳ್ಳುವರು, ಕುಟುಂಬದೊಂದಿಗೆ ಸಮಾಜಕ್ಕೂ ಸಂಪತ್ತಾಗಬಲ್ಲರು. ಎಷ್ಟೇ ಐಶ್ವರ್ಯವಂತನಾದರೂ ಅಹಂಕಾರಿಯಾದರೆ, ಮಾನ್ಯತೆ ದೊರೆಯದು. ದನ ,ಭೂ ಒಡೆತನ ಹಾಗೂ ಅಧಿಕಾರ ಇದ್ದವರು ಸಜ್ಜೆಯ ತೆನೆಯಂತಾಗಬಾರದು. ಮನುಷ್ಯ ಹೃದಯದ ರೆಕ್ಕೆಯೋಪಾದಿ ಇರುವ ನಡತೆ, ಹಾಗೂ ಜ್ಞಾನದಿಂದ ಉತ್ತಮನಾಗಬೇಕು, ಜ್ಞಾನ ವೆನ್ನುವುದು ಅಮೃತಕ್ಕೆ ಸಮಾನವಾದುದು. ಅದಕ್ಕೆ ಸಮನಾದ ಸಾಧನೆ ಮತ್ತೊಂದಿಲ್ಲ ಎಂದು ಶೃತಿ ತಿಳಿಸುತ್ತದೆ.

**ಸತ್ಕಾರ್ಯ ಮಾಡುವವನನ್ನು ಮೋಹ, ಭ್ರಾಂತಿ ಪರಿಣಾಮ ಮಾಡಲಾರವು**

ದೇಶದ ಸುವ್ಯವಸ್ಥೆಯೂ ಸಹ ಪ್ರಕೃತಿ ವಿಕೋಪದಿಂದ ಪ್ರಜ್ಞಾವಂತರು ಎಂದೂ ಕೈಕಟ್ಟಿಕೊಂಡು ಕೂರಬಾರದು. ಇಂತಹ ವ್ಯವಸ್ಥೆಯಲ್ಲಿ ಸಾಮಾನ್ಯರಿಗೆ ಸಮರ್ಥರ ನೆರವು ಮಾರ್ಗದರ್ಶನ ಆಗತ್ಯವಿರುತ್ತದೆ, ಆ ಸಂದರ್ಭದಲ್ಲಿ ಅತೃಪ್ತರಿಂದ ಸಂಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಅಹಂಕಾರ ತೊರೆದು, ಅಡ್ಡಗಾಲು ಹಾಕುವವರ ಬಗೆಗೂ ಸಹಿಸಿ ಕೊಳ್ಳಬೇಕಾಗುತ್ತದೆ, ಆ ಮೂಲಕ ನಮ್ಮ ಮನಸ್ಸು ನೆಮ್ಮದಿ ಕಾಣುತ್ತದೆ.

ಸತ್ಕಾರ್ಯ ಮಾಡುವವನನ್ನು ಮೋಹ ಹಾಗೂ ಭ್ರಾಂತಿ ಪರಿಣಾಮ ಮಾಡಲಾರವು ಈ ಕಾರ್ಯದ ಮೂಲಕ ಅಹಂಕಾರ ಕುಗ್ಗುವುದು. ಬದುಕು ಕಹಿಯಾಗುವುದಕ್ಕೂ ಇಲ್ಲವೆ ಸಿಹಿಯಾಗುವುದಕ್ಕೂ ಆಯಾ ವ್ಯಕ್ತಿಯೇ ಕಾರಣ. ದೇವರನ್ನು ಶಪಿಸುವುದು ವಿನಾಕಾರಣ,ದಿನವೂ ಕೆಲವು ಸಮಯವಾದರೂ ಅಂದಂದಿನ ಕೆಲಸಗಳ ಸಿಂಹಾವಲೋಕನ ಮಾಡುವುದರ ಮೂಲಕ ಮನಸೋಸಿಕೊಳ್ಳಬೇಕು. ಜೊತೆಗೆ ದೇವರ ಸ್ಮರಣೆಗೆ ಗಮನಕೊಡಬೇಕು, ಅದರಿಂದ ಅಹಂಕಾರ ವಿಮುಕ್ತಗೊಳ್ಳುವುದು.

# ಹಲಾಲ್ ಮುಕ್ತ ಯುಗಾದಿ ಆಚರಿಸಲು ಹಿಂದೂ ಸಂಘಟನೆಗಳ ಕರೆ !



☛ ಉದಯವಾಹಿನಿ ಚಿತ್ರ

**ಜಟ್ಕಾ ಮಾಂಸ ಖರೀದಿಸಿ**

• **ಉದಯವಾಹಿನಿ, ಬೆಂಗಳೂರು**

ಮಾರ್ಚ್ 30 ಯುಗಾದಿ ಹಬ್ಬವಿದೆ. ಯುಗಾದಿಯ ಮರುದಿನ ಹೊಸತೊಡಕು ಆಚರಣೆ ಮಾಡಲಾಗುತ್ತದೆ. ಈ ದಿನ ಸಾಮಾನ್ಯವಾಗಿ ಕರ್ನಾಟಕದ ಬಹುತಾಂಶ ಜಿಲ್ಲೆಗಳಲ್ಲಿ ಮಾಂಸಹಾರ ಭೋಜನ ಮಾಡುವ ಪದ್ಧತಿ ಇದೆ. ಈ ಸಮಯದಲ್ಲಿ ಹಿಂದೂ ಬಾಂಧವರು ಹಲಾಲ್ ಮಾಂಸದ ಬದಲು, ಹಿಂದೂ ಪದ್ಧತಿಯ ಜಟ್ಕಾ ಮಾಂಸ ಖರೀಧಿ ಮಾಡಬೇಕು ಎಂದು ಹಿಂದೂ ಜನಜಾಗೃತಿ ಸಮಿತಿಯ ಶ್ರೀ. ಶರತ್ ಕುಮಾರ್ ಇವರು ಕರೆ ನೀಡಿದರು. ಅವರು ಮಾರ್ಚ್ 27 ರಂದು ಬೆಂಗಳೂರಿನ ವಿಜಯನಗರದ ವಿವೇಕ ಪಾರ್ಕ್ ನಲ್ಲಿ ನಡೆದ ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡುತ್ತಿದ್ದರು. ಈ ವೇಳೆ ಹಿಂದೂ ಮುಖಂಡರಾದ ಶ್ರೀ. ಎಂ. ಎಲ್. ಶಿವಕುಮಾರ್, ಹಿಂದವೀ ಜಟ್ಕಾ ಮೀಟ್‌ನ ಮಾಲೀಕರಾದ ಶ್ರೀ. ಮುನೆ ಗೌಡ, ಅಖಿಲ ಭಾರತೀಯ ಅಸಂಘಟಿತ ಪುರೋಹಿತ ಕಾರ್ಮಿಕ ಪರಿಷತ್‌ನ ರಾಷ್ಟ್ರೀಯ ಕಾರ್ಯದರ್ಶಿಗಳಾದ ಡಾ. ಬಿ ಎನ್. ಮಹೇಶ್ ಕುಮಾರ್, ರಾಷ್ಟ್ರ ರಕ್ಷಣಾ ಪಡೆಯ ಶ್ರೀ. ಪುನೀತ್ ಕೆರೆಹಳ್ಳಿ ಉಪಸ್ಥಿತರಿದ್ದರು.

ಶ್ರೀ. ಶರತ್ ಕುಮಾರ ಮುಂದೆ ಮಾತನಾಡಿ ಯುಗಾದಿಯ ಮರುದಿನ ಮೈಲಾರ, ಕಾಲಭೈರವ, ಹುಲಿಯರಾಯ, ಬೀರಪ್ಪ ಜಾತರ, ಕುಲದೇವರುಗಳಿಗೆ ಮಾಂಸಹಾರ ಭೋಜನ ನೈವೇದ್ಯ ಮಾಡುವ ಪದ್ಧತಿ ಇದೆ. ಹಲಾಲ್ ಮಾಂಸದಲ್ಲಿ ಮುಸಲ್ಮಾನರು ಪ್ರಾಣಿಬಲಿ ಮಾಡುವಾಗ ಅವರು ಕುರಾನ್ ಕಲ್ಮಾಗಳನ್ನು ಹೇಳಿ, ಪ್ರಾಣಿಯನ್ನು ಮೆಕ್ಕಾ ದಿಕ್ಕಿಗೆ ಮುಖ ಮಾಡಿ, ಅಲ್ಲಹಾನಿಗೆ ಅರ್ಪಣೆ ಮಾಡುತ್ತಾರೆ. ಅದನ್ನು ಪುನಃ ಹಿಂದೂ ದೇವರಿಗೆ ಅರ್ಪಿಸುವುದು ಹಿಂದೂ ಧರ್ಮಕ್ಕೆ ವಿರುದ್ಧವಾಗಿದೆ. ಹಾಗಾಗಿ ಹಿಂದೂ ಸಮಾಜವು ಜಟ್ಕಾ ಮಾಂಸವನ್ನು ಬಳಸಬೇಕೆಂದು ಕರೆ ನೀಡುತ್ತೇವೆ. ಸರ್ಕಾರವು ಹಿಂದೂಗಳ ಈ ಅಗತ್ಯತೆಯನ್ನು ಗಮನದಲ್ಲಿರಿಸಿ ರಾಜ್ಯದ ಎಲ್ಲ ಕಡೆ ಜಟ್ಕಾ ಮಾಂಸವನ್ನು ಉಪಲಬ್ದವಾಗುವ ಹಾಗೆ ವ್ಯವಸ್ಥೆಯನ್ನು ಮಾಡಬೇಕು ಎಂದರು.

ರಾಜ್ಯದಲ್ಲಿ ಹಲಾಲ್ ಪ್ರಮಾಣಪತ್ರದ ಮೇಲೆ ನಿಷೇಧ ಹೇರಿ ! - ಹಿಂದೂ ಜನಜಾಗೃತಿ ಸಮಿತಿ ಹಲಾಲ್ ಪ್ರಮಾಣಪತ್ರದ ಮೂಲಕ ದೇಶದ 4 ಲಕ್ಷ ಕೋಟಿ ಮಾಂಸದ ವ್ಯಾಪಾರದ ಮೇಲೆ ಒಂದೇ ಸಮುದಾಯದ ಏಕಸ್ವಾಮ್ಯವಿದೆ. ಇದರಿಂದ ವಂಶಪಾರಂಪರ್ಯವಾಗಿ ಮಾಂಸದ ವ್ಯಾಪಾರ ಮಾಡುತ್ತಿದ್ದ ಮಾದಿಗ, ಚಮ್ಮಾರ್, ಕುರುಬ, ಯಾದವ, ಮುಂತಾದ ಹಿಂದುಳಿದ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮುದಾಯಗಳ ವ್ಯಾಪಾರದ ಮೇಲೆ ಗಂಬೀರ ಪರಿಣಾಮವಾಗಿದೆ. ಇದು ಅವರ ಆರ್ಥಿಕ ಹಿತಾಸಕ್ತಿಯನ್ನು ರಕ್ಷಣೆ ಮಾಡಬೇಕೆನ್ನುವ ಸಂವಿದಾನದ ಕಲಂ 46 ರ ಉಲ್ಲಂಘನೆಯಾಗಿದೆ. ಹಲಾಲ್ ಪ್ರಮಾಣ ಪತ್ರದ ಮೂಲಕ ಭಾರತದ ಅರ್ಥವ್ಯವಸ್ಥೆಗೆ ಸಮಾನಾಂತರವಾಗಿ ಪ್ರತ್ಯೇಕ ಇಸ್ಲಾಮಿಕ್ ಅರ್ಥವ್ಯವಸ್ಥೆಯನ್ನು ನಿರ್ಮಾಣ ಮಾಡುವ ಪ್ರಯತ್ನವನ್ನು ಜಮಿಯತ್ ಉಲೇಮ್ ಹಿಂದ್ ನಂತಹ ಹಲಾಲ್ ಪ್ರಮಾಣಪತ್ರ ನೀಡುವ ಇಸ್ಲಾಮಿಕ್ ಸಂಘಟನೆಗಳು ಮಾಡುತ್ತಿವೆ. ದೇಶದಲ್ಲಿ ಆಹಾರದ ಉತ್ಪನ್ನಗಳ ಬಗ್ಗೆ ಪ್ರಮಾಣಪತ್ರಗಳನ್ನು ನೀಡಲು ಕೇಂದ್ರ ಸರಕಾರದ ಅಧಿಕೃತ ಸಂಸ್ಥೆಗಳಾದ ಎಫ್.ಎಸ್.ಎಸ್.ಎ.ಐ ಎಫ್‌ಡಿಎ ಯಂತಹ ಸಂಸ್ಥೆಗಳು ಇರುವಾಗ, ಧರ್ಮದ ಆಧಾರದ ಮೇಲೆ ಹಲಾಲ್ ಪ್ರಮಾಣಪತ್ರವನ್ನು ನೀಡುವುದು ಸಂವಿಧಾನಬಾಹಿರವಾಗಿದೆ. ಈ ಮೂಲಕ ಜಮಿಯತ್ ಉಲೇಮಾ ಹಿಂದ್ ನೂರಾರು ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡುತ್ತಿದೆ. ಇದು ಎಫ್.ಎಸ್.ಎಸ್.ಎ.ಐ ನಿಯಮಕ್ಕೆ ವಿರುದ್ಧವಾಗಿದೆ. ಈ ಹಣವು ಅನೇಕ ದೇಶ ವಿರೋಧಿ ಚಟುವಟಿಕೆಗಳಿಗೆ ಬಳಕೆಯಾಗುತ್ತಿದೆ. ಇದನ್ನು ಗಮನದಲ್ಲಿರಿಸಿ ಉತ್ತರ ಪ್ರದೇಶ ಸರಕಾರವು ಹಲಾಲ್ ಪ್ರಮಾಣಪತ್ರ, ಹಲಾಲ್ ಉತ್ಪನ್ನದ ಮೇಲೆ ನಿಷೇಧ ಹೇರಿದೆ. ಹಾಗಾಗಿ ಕರ್ನಾಟಕದಲ್ಲಿ ಸಹ ಹಲಾಲ್ ಪ್ರಮಾಣಪತ್ರವನ್ನು ಕೂಡಲೇ ನಿಷೇಧ ಮಾಡಬೇಕೆಂದು ಆಗ್ರಹಿಸಿದರು.

# ಹೊಳೆಯುವ ತ್ವಚೆಗೆ ಟ್ರೈ ಮಾಡಿ



**ಬೇಸಿಗೆಯಲ್ಲಿ ದೇಹಕ್ಕೆ ಹೆಚ್ಚು ನೀರಿನಂಶದ ಅಗತ್ಯವಿರುತ್ತದೆ. ದೇಹ ಡಿಹೈಡ್ರೇಟ್ ಆಗದಂತೆ ತಡೆಯಲು ಸಾಧ್ಯವಾದಷ್ಟು ಆರೋಗ್ಯಕರ ಪಾನೀಯಗಳನ್ನು ಸೇವಿಸಬೇಕಾಗುತ್ತದೆ. ಜೊತೆಗೆ ತ್ವಚೆಯ ಹೊಳಪನ್ನು ಕಾಪಾಡಲು ಸಾಕಷ್ಟು ಪ್ರಮಾಣದ ನೀರಿನಂಶದ ಅಗತ್ಯವಿರುತ್ತದೆ. ಬೇಸಿಗೆಯಲ್ಲಿ ತ್ವಚೆಯ ಹೊಳಪಿಗೆ ವಿಶೇಷ ಪಾನೀಯವನ್ನು ತಯಾರಿಸುವ ವಿಧಾನವನ್ನು ತಿಳಿಯೋಣ.**

ಈ ಪಾನೀಯದಲ್ಲಿ ಗೊಂದ ಕಟೀರಾ(ಬಾದಾಮ್ ಪಿಸಿನ್), ದಾಳಿಂಬೆ, ಪುದೀನಾ ಎಲೆಗಳು, ನಿಂಬೆ, ಕಪ್ಪು ಉಪ್ಪು, ಹುರಿದ ಜೀರಿಗೆ (ಜೀರಿಗೆ), ಸೋಂಪು ಪುಡಿ, ಚಾಟ್ ಮಸಾಲಾ, ಐಸ್ ಕ್ಯೂಬ್‌ಗಳು ಮತ್ತು ನೀರು ಸೇರಿವೆ. ನಿಮ್ಮ ರುಚಿಗೆ ಅನುಗುಣವಾಗಿ ಮಸಾಲೆ ಮಿಶ್ರಣವನ್ನು ನೀವು ಸರಿಹೊಂದಿಸಬಹುದು.

**ಫ್ರೂಟ್ ಮಾಕ್ಟೇಲ್ ವಿಶೇಷತೆ ಏನು:** ಗೊಂದ್ ಕಟೀರಾ (ತಿನ್ನಬಹುದಾದ ಗಮ್) ದೇಹವನ್ನು ನೈಸರ್ಗಿಕವಾಗಿ ತಂಪಾಗಿಸುತ್ತದೆ. ನೀರಿನಲ್ಲಿ ನೆನೆಸಿದಾಗ ಇದು ಊದಿಕೊಳ್ಳುತ್ತದೆ ಮತ್ತು ದೇಹದ ಉಷ್ಣತೆಯನ್ನು ನಿಯಂತ್ರಿಸಲು ಸಹಾಯ ಮಾಡುವ ಜೆಲ್ಲಿ ತರಹದ ವಸ್ತುವಾಗಿ ರೂಪಾಂತರಗೊಳ್ಳುತ್ತದೆ. ಇದನ್ನು ಭಾರತದಲ್ಲಿ ಹೆಚ್ಚಿನವರು ಸೇವಿಸುತ್ತಾರೆ. ಇದು ಬೇಸಿಗೆಯ ತಿಂಗಳುಗಳಲ್ಲಿ ದೇಹದ ಶಾಖವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ, ನಿರ್ಜಲೀಕರಣ ಮತ್ತು ಕರುಳಿನ ಸಂಬಂಧಿತ ಸಮಸ್ಯೆಗಳನ್ನು ತಡೆಯುತ್ತದೆ. ಈ ಪದಾರ್ಥಗಳ ಹೈಡ್ರೇಟಿಂಗ್ ಗುಣಲಕ್ಷಣಗಳು ಚರ್ಮದ ಸ್ಥಿತಿಸ್ಥಾಪಕತ್ವವನ್ನು ಕಾಪಾಡಿಕೊಳ್ಳಲು ಮತ್ತು ನೈಸರ್ಗಿಕವಾಗಿ ತೇವಾಂಶವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.



**ಮಾಕ್ಟೇಲ್ ತಯಾರಿಸುವ ವಿಧಾನ:** ಇವೆರಡೂ ಉತ್ಕರ್ಷಣ ನಿರೋಧಕಗಳು ಮತ್ತು ವಿಟಮಿನ್ ಸಿ ಯಿಂದ ಸಮೃದ್ಧವಾಗಿವೆ, ಇದು ದೇಹದಲ್ಲಿ ಫ್ರಿರಾಡಿಕಲ್ ಹಾನಿಯ ವಿರುದ್ಧ ಹೋರಾಡಲು ಮತ್ತು ಆಕ್ಸಿಡೇಟಿವ್ ಒತ್ತಡ ಕಡಿಮೆ ಮಾಡಲು ಸಹಾಯ ಮಾಡುತ್ತದೆ. ದಾಳಿಂಬೆ ಒಂದು ಆರೋಗ್ಯಕರ ಹಣ್ಣಾಗಿದ್ದು, ಕಡಿಮೆ ಕ್ಯಾಲೋರಿ ಮತ್ತು ಕೊಬ್ಬಿನಂಶವಿದೆ ಆದರೆ ಫೈಬರ್, ವಿಟಮಿನ್ಗಳು ಮತ್ತು ಖನಿಜಾಂಶಗಳು ಅಧಿಕವಾಗಿವೆ. ಪ್ರಯೋಜನಗಳು ಉತ್ಕರ್ಷಣ ನಿರೋಧಕಗಳು, ಹೃದಯದ ಆರೋಗ್ಯ, ಮೂತ್ರದ ಆರೋಗ್ಯಕ್ಕೂ ಒಳ್ಳೆಯದು.

**ತಯಾರಿಸುವುದು ಹೇಗೆ:** ಈ ಪಾನೀಯವು 150 ಕಿಲೋ ಕ್ಯಾಲೊರಿಗಳನ್ನು ಹೊಂದಿದೆ ಮತ್ತು ನಿಮ್ಮ ಕರುಳಿನ ಆರೋಗ್ಯ, ಚರ್ಮ ಮತ್ತು ದೇಹದ ನೀರಿನ ಸಮತೋಲನಕ್ಕೆ ಸೂಕ್ತವಾಗಿದೆ. ಮೊದಲಿಗೆ, ಕಪ್ಪು ಉಪ್ಪು, ಹುರಿದ ಜೀರಿಗೆ ಪುಡಿ, ಸೋಂಪು ಪುಡಿ ಮತ್ತು ಚಾಟ್ ಮಸಾಲಾ ಮಿಶ್ರಣವನ್ನು ತಯಾರಿಸಿ. ಒಂದು ಲೋಟವನ್ನು ತೆಗೆದುಕೊಂಡು ದಾಳಿಂಬೆ ಬೀಜ, ಗೊಂದ್ ಕಟೀರಾ ಜೊತೆಗೆ ಕೆಲವು ಪುದೀನಾ ಎಲೆಗಳು ಮತ್ತು ನಿಂಬೆ ರಸವನ್ನು ಸೇರಿಸಿ.

ಎಲ್ಲವನ್ನೂ ರುಬ್ಬಿಕೊಂಡು ಮಸಾಲೆ ಮಿಶ್ರಣ ಮತ್ತು ಐಸ್ ಕ್ಯೂಬ್ ಗಳನ್ನು ಸೇರಿಸಿ. ಲೋಟದಲ್ಲಿ ರುಬ್ಬಿಕೊಂಡ ಮಿಶ್ರಣವನ್ನು ತುಂಬಿಸಿ ಮತ್ತು ಎಲ್ಲವನ್ನೂ ಚೆನ್ನಾಗಿ ಮಿಶ್ರಣ ಮಾಡಿ. ದಾಳಿಂಬೆ ಬೀಜ ಮತ್ತು ನಿಂಬೆ ಹಣ್ಣಿನ ತುಂಡಿನಿಂದ ಅಲಂಕರಿಸಿ, ವಿಶೇಷ ಪಾನೀಯವನ್ನು ಸವಿಯಿರಿ. ಇದು ನಿಮ್ಮ ತ್ವಚೆಯ ಆರೋಗ್ಯಕ್ಕೆ ಉತ್ತಮ. ನಿಮ್ಮ ಚರ್ಮ ನೈರ್ಗಿಕವಾಗಿ ಹೊಳೆಯಲು ಸಹಾಯ ಮಾಡುತ್ತದೆ.

# ಬೆಚ್ಚಗಿನ ನೀರು ಕುಡಿದ್ರೆ!

**ಪ್ರತಿದಿನ ಬೆಳಗ್ಗೆ ಎದ್ದ ತಕ್ಷಣ ಒಂದು ಗ್ಲಾಸ್ ಬೆಚ್ಚಗಿನ ನೀರು ಕುಡಿಯಬೇಕು, ಇದು ಆರೋಗ್ಯಕ್ಕೆ ಒಳ್ಳೆಯದು ಎನ್ನುವುದನ್ನು ನೀವು ಕೇಳಿರಬಹುದು. ಆದರೆ ನೀವು ನಿರಂತರವಾಗಿ ಇದನ್ನು ಅನುಸರಿಸಿದರೆ ನಿಮ್ಮ ದೇಹಕ್ಕೆ ಏನಾಗುತ್ತದೆ ಇದು ನಿಜವಾಗಿಯೂ ಕೆಲಸ ಮಾಡುತ್ತದೆಯೇ ಅಥವಾ ಇದೊಂದು ಆರೋಗ್ಯದ ಬಗೆಗಿನ ಮಿಥ್ಯವೇ ಎನ್ನುವುನ್ನು ನಾವಿಲ್ಲಿ ತಿಳಿಯೋಣ.**

30 ದಿನಗಳ ಕಾಲ ಬೆಳಿಗ್ಗೆ ಬೆಚ್ಚಗಿನ ನೀರನ್ನು ಕುಡಿಯುವುದರಿಂದ ಉತ್ತಮ ಜೀರ್ಣಕ್ರಿಯೆಯಿಂದ ಹಿಡಿದು ಹೊಳೆಯುವ ಚರ್ಮ ಮತ್ತು ಸುಧಾರಿತ ಚಯಾಪಚಯ ಕ್ರಿಯೆಯವರೆಗೆ ಹಲವಾರು ಪ್ರಯೋಜನಗಳನ್ನು ಪಡೆಯಬಹುದು.

**ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ:** ನೀವು ಆಮ್ಲೀಯತೆ ಅಥವಾ ಮಲಬದ್ಧತೆಯಿಂದ ಬಳಲುತ್ತಿದ್ದರೆ, ನೀವು ಬೆಳಗ್ಗೆ ಎದ್ದ ತಕ್ಷಣ ಖಾಲಿ ಹೊಟ್ಟೆ ಒಂದು ಗ್ಲಾಸ್ ಬೆಚ್ಚಗಿನ ನೀರನ್ನು ಕುಡಿಯುವುದು ಒಳ್ಳೆಯದು. ಇದು ಜೀರ್ಣಕ್ರಿಯೆಯನ್ನು ಉತ್ತಮವಾಗಿಸುವುದರಲ್ಲದೆ ಸೇವಿಸಿದ ಆಹಾರವನ್ನು ವೇಗವಾಗಿ ಒಡೆಯಲು ಸಹಾಯ ಮಾಡುತ್ತದೆ. ಜೀರ್ಣಾಂಗ ವ್ಯವಸ್ಥೆಯನ್ನು ಸರಾಗವಾಗಿ ನಡೆಸುತ್ತದೆ.

**ತೂಕ ಇಳಿಸಿಕೊಳ್ಳಲು ಸಹಾಯ:** ಬೆಚ್ಚಗಿನ ನೀರನ್ನು ಕುಡಿಯುವುದರಿಂದ ಕೆಲವು ಕಿಲೋಗ್ರಾಂಗಳಷ್ಟು ತೂಕ ಇಳಿಸಿಕೊಳ್ಳಲು ಸಹಾಯ ಮಾಡುತ್ತದೆ. ನೀವು ತೂಕ ಇಳಿಸಲು ಪ್ರಯತ್ನಿಸುತ್ತಿದ್ದರೆ, ಸಕ್ಕರೆ ಭರಿತ ಪಾನೀಯದ ಬದಲಿಗೆ ಬೆಚ್ಚಗಿನ ನೀರಿನಿಂದ ನಿಮ್ಮ ದಿನವನ್ನು ಪ್ರಾರಂಭಿಸಿ. ಇದು ದೇಹದ ಉಷ್ಣತೆಯನ್ನು ಹೆಚ್ಚಿಸುತ್ತದೆ, ಇದು ಚಯಾಪಚಯ ಕ್ರಿಯೆಯನ್ನು ವೇಗಗೊಳಿಸುತ್ತದೆ. ಬೆಚ್ಚಗಿನ ನೀರು ಕರುಳಿನಲ್ಲಿನ ಕೊಬ್ಬಿನ ನಿಕ್ಷೇಪಗಳನ್ನು ಒಡೆಯಲು ಮತ್ತು ಕೊಬ್ಬು ಸಂಗ್ರಹವಾಗುವುದನ್ನು ತಡೆಯಲು ಸಹಾಯ ಮಾಡುತ್ತದೆ.ಅನಗತ್ಯ ಕ್ಯಾಲೋರಿ ಸೇವನೆಯನ್ನು ಕಡಿಮೆ ಮಾಡುತ್ತದೆ.

**ಚರ್ಮವನ್ನು ಪೋಷಿಸುತ್ತದೆ:** ಜಲಸಂಚಯನವು ಹೊಳೆಯುವ ಚರ್ಮದ ನಿಜವಾದ ರಹಸ್ಯವಾಗಿದೆ. ಬೆಚ್ಚಗಿನ ನೀರು ರಕ್ತ ಪರಿಚಲನೆಯನ್ನು ಹೆಚ್ಚಿಸುತ್ತದೆ, ನಿಮಗೆ ನೈಸರ್ಗಿಕ ಹೊಳಪನ್ನು ನೀಡುತ್ತದೆ. ಇದು ವಿಷವನ್ನು ಹೊರಹಾಕುತ್ತದೆ, ಮೊಡವೆ ಮತ್ತು ಚರ್ಮದ ಬಿರುಕುಗಳನ್ನು ತಡೆಯುತ್ತದೆ. ಸುಕ್ಕುಗಳನ್ನು ನಿವಾರಿಸುತ್ತದೆ.

**ಕೊಬ್ಬನ್ನು ಕರಗಿಸುತ್ತದೆ:** ಬೆಚ್ಚಗಿನ ನೀರು ಪೆರಿಸ್ಟಲ್ಸಿಸ್ ಅನ್ನು ಸಕ್ರಿಯಗೊಳಿಸುತ್ತದೆ. ಇದು ನಿಮ್ಮ ಕರುಳಿನ ಮೂಲಕ ಆಹಾರವನ್ನು ಚಲಿಸುವ ನಿಮ್ಮ ಕರುಳಿನ ತರಂಗ ಚಲನೆಯಾಗಿದೆ. ಇದು ಕಠಿಣ ಕೊಬ್ಬನ್ನು ಕರಗಿಸುತ್ತದೆ ಮತ್ತು ಆಹಾರವನ್ನು ಹೆಚ್ಚು ಪರಿಣಾಮಕಾರಿಯಾಗಿ ಜೀರ್ಣಿಸುತ್ತದೆ, ಹೊಟ್ಟೆ ಉಬ್ಬುವುದು ಮತ್ತು ಮಲಬದ್ಧತೆಯನ್ನು ನಿವಾರಿಸುತ್ತದೆ. ತಿನ್ನುವ ಮೊದಲು ಬೆಚ್ಚಗಿನ ನೀರನ್ನು ಕುಡಿಯುವುದರಿಂದ ಪೋಷಕಾಂಶಗಳ ಹೀರಿಕೊಳ್ಳುವಿಕೆಯೂ ಹೆಚ್ಚಾಗುತ್ತದೆ.

**ಮುಟ್ಟಿನ ಸೆಳೆತ ಕಡಿಮೆಮಾಡುತ್ತದೆ:** ಮುಟ್ಟಿನ ಸಮಯದಲ್ಲಿ ಬೆಚ್ಚಗಿನ ನೀರು ಕುಡಿಯೋದರಿಂದ ಇದು ಸ್ನಾಯುಗಳನ್ನು ಸಡಿಲಗೊಳಿಸುವ ಮೂಲಕ ಸೆಳೆತದ ತೀವ್ರತೆಯನ್ನು ಕಡಿಮೆಮಾಡುತ್ತದೆ. ಬೆಚ್ಚಗಿನ ನೀರು ರಕ್ತ ಪರಿಚಲನೆಯನ್ನು ಹೆಚ್ಚಿಸುತ್ತದೆ, ಇದು ಹೊಟ್ಟೆ ಉಬ್ಬುವುದು ಮತ್ತು ನೋವನ್ನು ಕಡಿಮೆ ಮಾಡುತ್ತದೆ. ಇದು ನೀರಿನ ಧಾರಣವನ್ನು ತಡೆಯುತ್ತದೆ, ಅಸ್ವಸ್ಥತೆಯನ್ನು ನಿವಾರಿಸುತ್ತದೆ.



**ವಿಷವನ್ನು ಹೊರಹಾಕುವ ಅಮೃತ**

### ದೇಹವನ್ನು ನಿರ್ವಿಷಗೊಳಿಸುತ್ತದೆ

ಬೆಚ್ಚಗಿನ ನೀರನ್ನು ನಿಮ್ಮ ದೇಹದ ನೈಸರ್ಗಿಕ ಫ್ಲಶ್ ಸಿಸ್ಟಮ್ ಎಂದು ಭಾವಿಸಿ. ನೀವು ನಿಧಾನ ಅಥವಾ ಮಲಬದ್ಧತೆ ಅನುಭವಿಸುತ್ತಿದ್ದರೆ, ಇದು ಸುಲಭವಾದ ಅಭ್ಯಾಸವಾಗಿದ್ದು, ಕೆಲವೇ ವಾರಗಳಲ್ಲಿ ನಿಮ್ಮ ಹೊಟ್ಟೆಯನ್ನು ಸಂಪೂರ್ಣವಾಗಿ ಸ್ವಚ್ಛವಾಗಿಸುತ್ತದೆ. ಇದು ಬೆವರುವಿಕೆಯನ್ನು ಉತ್ತೇಜಿಸುತ್ತದೆ, ದೇಹವು ಬೆವರಿನ ಮೂಲಕ ವಿಷವನ್ನು ಹೊರಹಾಕಲು ಕಾರಣವಾಗುತ್ತದೆ. ಇದು ಮೂತ್ರಪಿಂಡದ ಕಾರ್ಯಕ್ಕೆ ಸಹಾಯ ಮಾಡುತ್ತದೆ, ಇದು ತ್ಯಾಜ್ಯ ನಿರ್ಮೂಲನೆಯನ್ನು ಸುಗಮಗೊಳಿಸುತ್ತದೆ. ಬೆಚ್ಚಗಿನ ನೀರಿಗೆ ನಿಂಬೆ ರಸ ಸೇರಿಸೋದರಿಂದ ಯಕೃತ್ತಿನ ಕಾರ್ಯವನ್ನು ಸುಧಾರಿಸಬಹುದು ಮತ್ತು ಶುದ್ಧೀಕರಣ ಪ್ರಕ್ರಿಯೆಯನ್ನು ಹೆಚ್ಚಿಸುತ್ತದೆ.

### ಒತ್ತಡ ಮತ್ತು ಆತಂಕ ನಿವಾರಣೆ

ಪ್ಯಾರಾಸಿಂಪಥೆಟಿಕ್ ನರಮಂಡಲವು ಬೆಚ್ಚಗಿನ ನೀರಿನಿಂದ ಉತ್ತೇಜಿಸಲ್ಪಡುತ್ತದೆ, ಇದು ನಿಮ್ಮ ದೇಹವನ್ನು ವಿಶ್ರಾಂತಿ ಪಡೆಯಲು ಸಹಾಯ ಮಾಡುತ್ತದೆ. ಇದು ಕಾರ್ಟಿಸೋಲ್ ಅನ್ನು ಅಂದರೆ ಒತ್ತಡದ ಹಾರ್ಮೋನ್ ಅನ್ನು ಕಡಿಮೆ ಮಾಡುತ್ತದೆ. ಇದು ನಿಮ್ಮನ್ನು ಹೆಚ್ಚು ಆರಾಮವಾಗಿರಿಸುತ್ತದೆ. ಮಲಗುವ ಮುನ್ನ ಒಂದು ಲೋಟ ಬೆಚ್ಚಗಿನ ನೀರು ಕುಡಿಯೋದರಿಂದ ನಿದ್ರೆಯ ಗುಣಮಟ್ಟವನ್ನು ಹೆಚ್ಚಿಸುತ್ತದೆ.




# ಮೋದಿ ಭೇಟಿಗಾಗಿ ಭಾರತಕ್ಕೆ ಬರಲು ಸಜ್ಜಾದ ವ್ಲಾಡಿಮಿರ್ ಪುಟಿನ್

## ವ್ಲಾಡಿಮಿರ್ ಪುಟಿನ್ ಭಾರತ ಪ್ರವಾಸ ಕೈಗೊಳ್ಳಲು ಮುಂದಾಗಿರುವುದು ಜಾಗತಿ ಮಟ್ಟದಲ್ಲಿ ಚರ್ಚೆ

**ಮಾಸ್ಕೋ:** ರಷ್ಯಾ-ಉಕ್ರೇನ್ ಯುದ್ಧವನ್ನು ಕೊನೆಗಾಣಿಸುವ ನಿಟ್ಟಿನಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸತತ ಪ್ರಯತ್ನ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಉಭಯ ಬಣಗಳನ್ನು ಕದನ ವಿರಾಮ ಒಪ್ಪಂದದ ಮಹತ್ವದ ಅಂಶಗಳಿಗೆ ಒಪ್ಪಿಸುವಲ್ಲಿ ಯಶಸ್ವಿಯೂ ಆಗಿದ್ದಾರೆ. ಈ ಮಧ್ಯೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಭಾರತ ಪ್ರವಾಸ ಕೈಗೊಳ್ಳಲು ಮುಂದಾಗಿರುವುದು ಜಾಗತಿ ಮಟ್ಟದಲ್ಲಿ ಗಮನ ಸೆಳೆದಿದೆ.

ಹೌದು, ರಷ್ಯಾ ಮತ್ತು ಭಾರತದ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸಯವ ನಿಟ್ಟಿನಲ್ಲಿ, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಶೀಘ್ರದಲ್ಲೇ ಭಾರತಕ್ಕೆ ಭೇಟಿ ನೀಡಲಿದ್ದಾರೆ. ರಷ್ಯಾ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್ ಈ ವಿಷಯವನ್ನು ಖಚಿತಪಡಿಸಿದ್ದು, ನರೇಂದ್ರ ಮೋದಿ ಅವರು 3ನೇ ಬಾರಿಗೆ ಭಾರತದ ಪ್ರಧಾನಮಂತ್ರಿಯಾಗಿ ಚುನಾಯಿತರಾದ ಬಳಿಕ,

**ಉಭಯ ದೇಶಗಳ ನಡುವಿನ ವ್ಯಾಪಾರವನ್ನು ವೃದ್ಧಿಸುವುದು, ಹೊಸ ವ್ಯಾಪಾರ ಮಾರ್ಗಗಳನ್ನು ಅಭಿವೃದ್ಧಿಪಡಿಸುವುದು ಮತ್ತು ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವುದು ಈ ಭೇಟಿಯ ಮುಖ್ಯ ಉದ್ದೇಶವಾಗಿದೆ. ಎಂದು ರಷ್ಯಾ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್ ಮಾಹಿತಿ ನೀಡಿದ್ದಾರೆ.**

ರಷ್ಯಾಗೆ ಮೊದಲ ವಿದೇಶ ಪ್ರವಾಸವನ್ನು ಕೈಗೊಂಡಿದ್ದರು.

ಇದೀಗ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್



ಅವರು ಭಾರತಕ್ಕೆ ಭೇಟಿ ನೀಡುವ ಸರದಿ ಬಂದಿದೆ. ಎಂದು ಹೇಳಿದ್ದಾರೆ. ವ್ಲಾಡಿಮಿರ್ ಪುಟಿನ್ ಅವರ ಭಾರತ ಭೇಟಿಯ ಸಿದ್ಧತೆಗಳು ನಡೆಯುತ್ತಿವೆ. ಆದರೆ ಪುಟಿನ್ ಅವರ ಭಾರತ ಭೇಟಿಯ ದಿನಾಂಕವನ್ನು

- **ರಷ್ಯಾ ಅಧ್ಯಕ್ಷರ ಭಾರತ ಭೇಟಿಗೆ ವೇದಿಕೆ ಸಜ್ಜು**
- **ಭಾರತಕ್ಕೆ ಬರಲಿದ್ದಾರೆ ವ್ಲಾಡಿಮಿರ್ ಪುಟಿನ್**
- **ಪ್ರಧಾನಿ ಮೋದಿ ಭೇಟಿಗೆ ಸಜ್ಜಾದ ರಷ್ಯಾ ಅಧ್ಯಕ್ಷ**
- **ಭಾರತ-ರಷ್ಯಾ ದ್ವಿಪಕ್ಷೀಯ ಸಂಬಂಧಕ್ಕೆ ಒತ್ತು**

ಇನ್ನೂ ನಿಗದಿಪಡಿಸಿಲ್ಲ. ಪ್ರಧಾನಿ ಮೋದಿ ಅವರು ಕಳೆದ ವರ್ಷ ರಷ್ಯಾಗೆ ಭೇಟಿ ನೀಡಿದ್ದಾಗ, ಭಾರತಕ್ಕೆ ಭೇಟಿ ನೀಡುವಂತೆ ಪುಟಿನ್ ಅವರನ್ನು ಆಹ್ವಾನಿಸಿದ್ದರು. ಅದರಂತೆ ಪುಟಿನ್ ಅವರು ಇದೀಗ ಭಾರತ ಭೇಟಿಗೆ ನಿರ್ಧಾರ ಮಾಡಿದ್ದಾರೆ ಎಂದು ಸೆರ್ಗೆ ಲಾವ್ರೊವ್ ತಿಳಿಸಿದ್ದಾರೆ.

**ರಷ್ಯಾ ಮತ್ತು ಭಾರತ:** ಹೊಸ ದ್ವಿಪಕ್ಷೀಯ ಕಾರ್ಯಸೂಚಿಯ ಕಡೆಗೆ ಎಂಬ ಸಮ್ಮೇಳನದಲ್ಲಿ ಲಾವ್ರೊವ್ ಈ ಹೇಳಿಕೆ ನೀಡಿದ್ದಾರೆ. ರಷ್ಯಾದ ಅಂತಾರಾರಾಷ್ಟ್ರೀಯ ವ್ಯವಹಾರಗಳ ಮಂಡಳಿ ಈ ಸಭೆಯನ್ನು ಆಯೋಜಿಸಿತ್ತು. ಉಕ್ರೇನ್‌ನಲ್ಲಿ ಯುದ್ಧ ಪ್ರಾರಂಭವಾದ ನಂತರ ಪುಟಿನ್ ಅವರ ಮೊದಲ ಭಾರತ ಭೇಟಿ ಇದಾಗಲಿದೆ.

# ಬ್ಯಾಂಕಿಂಗ್ ವ್ಯವಸ್ಥೆ ಕ್ಷೀಣಿಸುತ್ತಿದೆ ಸಂಸದ ರಾಘವ್ ಚಡ್ಡಾ

**ನವದೆಹಲಿ:** ಹೆಚ್ಚುತ್ತಿರುವ ವಂಚನೆ, ಅಧಿಕ ಸಾಲದ ಬಡ್ಡಿದರಗಳು ಮತ್ತು ಠೇವಣಿದಾರರಿಗೆ ಕಳಪೆ ಆರ್ಥಿಕ ಭದ್ರತೆಯಿಂದಾಗಿ ಭಾರತದ ಬ್ಯಾಂಕಿಂಗ್ ವ್ಯವಸ್ಥೆಯ ಮೇಲಿನ ಸಾರ್ವಜನಿಕ ನಂಬಿಕೆ ಕ್ಷೀಣಿಸುತ್ತಿದೆ ಎಂದು ಎಎಪಿ ರಾಜ್ಯಸಭಾ ಸಂಸದ ರಾಘವ್ ಚಡ್ಡಾ ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ಬ್ಯಾಂಕಿಂಗ್ ಕಾನೂನುಗಳ ಮಸೂದೆ, 2024ರ ಮೇಲಿನ ಚರ್ಚೆಯ ಸಂದರ್ಭದಲ್ಲಿ ಮಾತನಾಡಿದ ಚಡ್ಡಾ, ಈ ಶಾಸನವನ್ನು ನಾಗರಿಕರ ಪ್ರಮುಖ ಕಾಳಜಿಗಳನ್ನು ಪರಿಹರಿಸಲು ವಿಫಲವಾದ ಕೇವಲ ಕಾರ್ಯವಿಧಾನದ ಸುಧಾರಣೆ ಎಂದು ಟೀಕಿಸಿದರು.

ಬ್ಯಾಂಕ್ ಖಾತೆದಾರರಿಗೆ ನಾಲ್ಕು ನಾಮನಿರ್ದೇಶಿತರನ್ನು ಹೊಂದಲು ಅವಕಾಶ ನೀಡುವ ಬ್ಯಾಂಕಿಂಗ್ ಕಾನೂನುಗಳ (ತಿದ್ದುಪಡಿ) ಮಸೂದೆ, 2024 ಅನ್ನು ಸಂಸತ್ತು ಬುಧವಾರ ಅಂಗೀಕರಿಸಿತ್ತು. ಲೋಕಸಭೆಯು 2024ರ ಡಿಸೆಂಬರ್‌ನಲ್ಲಿ ಬ್ಯಾಂಕಿಂಗ್ ಕಾನೂನುಗಳ (ತಿದ್ದುಪಡಿ) ಮಸೂದೆಯನ್ನು ಅಂಗೀಕರಿಸಿತು. ಎಎಪಿ ಬಿಡುಗಡೆ ಮಾಡಿದ ಅಧಿಕೃತ ಹೇಳಿಕೆಯ ಪ್ರಕಾರ, ಬ್ಯಾಂಕುಗಳು ಕೇವಲ ಹಣಕಾಸು ಸಂಸ್ಥೆಗಳಲ್ಲ ಆದರೆ ಪ್ರಜಾಪ್ರಭುತ್ವದ ಅಡಿಪಾಯವಾಗಿದ್ದು, ಜನರ ಜೀವನದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ ಎಂದು ಚಡ್ಡಾ ಹೇಳಿದರು.



ಆದಾಗ್ಯೂ, ಹೆಚ್ಚುತ್ತಿರುವ ಬ್ಯಾಂಕಿಂಗ್ ವಂಚನೆಗಳು, ಹೆಚ್ಚಿನ ಸಾಲದ ದರಗಳು ಮತ್ತು ಕುಸಿಯುತ್ತಿರುವ ಉಳಿತಾಯ ಬಡ್ಡಿದರಗಳು ಜನರನ್ನು ಎಫ್ ನಿಂದ ದೂರ ತಳ್ಳುತ್ತಿವೆ ಚಡ್ಡಾ ಆರೋಪಿಸಿದರು.

## ಹಮಾಸ್‌ಗೆ ಬೆಂಬಲ ನೆಪವೊಡ್ಡಿ ವೀಸಾ ರದ್ದು: ಟರ್ಕಿ ಮೂಲದ ಸ್ಟೂಡೆಂಟ್ ಬಂಧನ

# ಅಮೆರಿಕದಲ್ಲಿ ವಲಸೆ ವಿದ್ಯಾರ್ಥಿಗಳೇ ಗುರಿ

**ಅಮೆರಿಕ:** ಹಮಾಸ್ ನಾಯಕರನ್ನು ಬೆಂಬಲಿಸಿದ ಹಿನ್ನೆಲೆ, ಕೊಲಂಬಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ ವೀಸಾ ರದ್ದು ಮಾಡಿ, ಗಡಿಪಾರು ಮಾಡಿದ ಘಟನೆ ಇತ್ತೀಚೆಗೆ ನಡೆದಿತ್ತು.

ಈ ಬೆನ್ನಲ್ಲೇ ಮತ್ತೊಬ್ಬ ವಿದ್ಯಾರ್ಥಿನಿಯನ್ನು ಅಮೆರಿಕ ಹೋಮಲ್ಯಾಂಡ್ ಪೊಲೀಸರು ಬಂಧಿಸಿರುವ ಘಟನೆ ನಡೆದಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ನ ವಲಸೆ ನೀತಿ ದಿನದಿಂದ ದಿನಕ್ಕೆ ಕಠಿಣವಾಗುತ್ತಿದೆ. ವಲಸಿಗರನ್ನು ಹತ್ತಿಕ್ಕಲು ಬೇರೆ ದೇಶದಿಂದ ವ್ಯಾಸಂಗಕ್ಕಾಗಿ ಅಮೆರಿಕಕ್ಕೆ ಬಂದ ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡು, ವಿದೇಶಾಂಗ ನೀತಿಗೆ ಅಡೆತಡೆ, ಯಹೂದಿಗಳ ವಿರೋಧಿಸುತ್ತಿದ್ದಾರೆ. ಪ್ಯಾಲೆಸ್ಟೈನ್ ಪರ ಪ್ರತಿಭಟನೆ ಎಂಬ ಕಾರಣಗಳನ್ನು ಕೊಟ್ಟು ಗಡಿಪಾರು ಮಾಡುವುದರಲ್ಲಿ ಅಮೆರಿಕ ನಿರತವಾಗಿದೆ.

30 ವರ್ಷದ ರುಮೈಸಾ ಒಜ್‌ಟರ್ಕ್ ಬೋಸ್ಟನ್ ಬಳಿಯ ಟಫ್ಟ್ಸ್ ವಿಶ್ವವಿದ್ಯಾಲಯದಲ್ಲಿ ಪಿಎಚ್‌ಡಿ ವ್ಯಾಸಂಗ ಮಾಡುತ್ತಿದ್ದರು. ಮಕ್ಕಳ ಅಧ್ಯಯನ ಮತ್ತು ಮಾನವ ಅಭಿವೃದ್ಧಿ ವಿಷಯಾಧಾರಿತ ಡಾಕ್ಟರೇಟ್ ಅಧ್ಯಯನ ಮಾಡುತ್ತಿದ್ದರು ಎಂಬ ಮಾಹಿತಿ ಲಿಂಕ್‌ಡಿನ್‌ನಲ್ಲಿ ಇದೆ. ಆಕೆಯ ವೀಸಾ ರದ್ದುಗೊಳಿಸಿರುವ ಹಿನ್ನೆಲೆ, ಅಮೆರಿಕ ಹೋಮ್ ಲ್ಯಾಂಡ್ ಪೊಲೀಸರು ಬಂಧಿಸಿದ್ದಾರೆ.

ಮ್ಯಾಸಚೂಸೆಟ್ಸ್‌ನ ಸೋಮರ್‌ವಿಲ್ಲೆಯಲ್ಲಿರುವ ಆಕೆಯ ಅಪಾರ್ಟ್‌ಮೆಂಟ್ ಬಳಿ ಮುಖಗವುಸು ಧರಿಸಿದ ಐದು ಮಂದಿ ಪೊಲೀಸರು ಆಕೆಯ



### ನ್ಯಾಯಾಧೀಶರು ಹೇಳಿದ್ದೇನು?

**ರುಮೈಸಾ ಒಜ್‌ಟರ್ಕ್ ಅವರನ್ನು ಮ್ಯಾಸಚೂಸೆಟ್ಸ್‌ನಿಂದ ಗಡಿಪಾರು ಮಾಡಬಾರದು ಎಂದು ಅಮೆರಿಕದ ಜಿಲ್ಲಾ ನ್ಯಾಯಾಧೀಶೆ ಇಂದಿರಾ ತಲ್ವಾನಿ ಹೇಳಿದ್ದಾರೆ. ವೀಸಾ ರದ್ದು ಮಾಡಿದ ನಂತರ ಕನಿಷ್ಠ 48 ಗಂಟೆಗಳ ಕಾಲ ಅವರನ್ನು ರಾಜ್ಯದಲ್ಲಿ ಇರಿಸಿಕೊಳ್ಳಬೇಕು ಎಂದು ಅಮೆರಿಕದ ವಲಸೆ ಮತ್ತು ಕಸ್ಟಮ್ಸ್ ಜಾರಿ ಅಧಿಕಾರಿಗಳಿಗೆ ಆದೇಶ ಹೊರಡಿಸಿದ್ದಾರೆ.**

ಮನೆಯ ಮುಂದೆ ಕೆಲಹೊತ್ತು ನಿಂತು ವಾಗ್ವಾದ ನಡೆಸಿ, ಅವರನ್ನು ಕರೆದುಕೊಂಡು ಹೋಗುತ್ತಿರುವ ದೃಶ್ಯಾವಳಿಗಳು ಕಂಡುಬಂದಿದೆ. ರುಮೈಸಾ

- **ಟರ್ಕಿ ಮೂಲದ ಅಮೆರಿಕ ವಿದ್ಯಾರ್ಥಿ ಬಂಧನ**
- **ಹಮಾಸ್ ಬೆಂಬಲ ನೆಪವೊಡ್ಡಿ ವೀಸಾ ರದ್ದು**
- **ಪಿಎಚ್‌ಡಿ ವ್ಯಾಸಂಗ ರುಮೈಸಾ ಒಜ್‌ಟರ್ಕ್ ಬಳಿ ಬಂಧನ**

ಒಜ್‌ಟರ್ಕ್ ಪರ ವಕೀಲರು ಬೋಸ್ಟನ್ ಫೆಡರಲ್ ನ್ಯಾಯಾಲಯದಲ್ಲಿ ಈ ಬಗ್ಗೆ ಮೊಕದ್ದಮೆ ಹೂಡಿದ್ದಾರೆ ಎನ್ನಲಾಗಿದೆ.

ಮಾರ್ಚ್ ಆರಂಭದಲ್ಲಿ ರೋಡ್ ಐಲೆಂಡ್‌ನ ಬ್ರೌನ್ ವಿಶ್ವವಿದ್ಯಾಲಯದ ಲೆಬನಾನಿನ ವೈದ್ಯೆ, ಸಹಾಯಕ ಪ್ರಾಧ್ಯಾಪಕಿಯೊಬ್ಬರ ಅಮೆರಿಕ ಮರು ಪ್ರವೇಶವನ್ನು ನಿರಾಕರಿಸಿ ಲೆಬನಾನ್‌ಗೆ ಗಡಿಪಾರು ಮಾಡಲಾಯಿತು. ಅವರ ಫೋನ್‌ನಲ್ಲಿ ಹಿಜ್ಬುಲ್ಲಾ ಬಗ್ಗೆ ಸಹಾನುಭೂತಿ ಹೊಂದಿರುವ ಫೋಟೋ ಇದೆ. ಹೀಗಾಗಿ ಅಮೆರಿಕಕ್ಕೆ ಪ್ರವೇಶ

### ಎಷ್ಟು ಜನರ ವೀಸಾ ರದ್ದು?

**ಕಳೆದ ಕೆಲ ದಿನಗಳ ಹಿಂದೆ, ಹಮಾಸ್ ಬೆಂಬಲಿಸಿದ ಹಿನ್ನೆಲೆ, ಕಾನೂನು ಬದ್ಧವಾಗಿ ಅಮೆರಿಕದಲ್ಲಿ ನೆಲೆಸಿದ್ದ ಮಹಮೂದ್ ಖಲೀಲ್‌ರನ್ನು ಬಂಧಿಸಲಾಯಿತು. ಯಾವುದೇ ಪುರಾವೆಗಳಿಲ್ಲದೆ ಹಮಾಸ್ ಅನ್ನು ಬೆಂಬಲಿಸುತ್ತಿದ್ದಾರೆ ಎಂದು ಆರೋಪಿಸಿ ಖಲೀಲ್‌ರನ್ನು ಬಂಧಿಸಲಾಗಿತ್ತು. ರಂಜನಿ ಶ್ರೀನಿವಾಸ್ ಎಂಬುವವರು ಸಹ ಕೊಲಂಬಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದು, ಅವರ ವೀಸಾ ಸಹ ರದ್ದು ಗೊಳಿಸಲಾಗಿತ್ತು. ಆನಂತರ ಅವರು ಸ್ವಯಂ ಗಡಿಪಾರು ಗೊಂಡಿದ್ದರು.**

ನಿರಾಕರಿಸಲಾಗಿದೆ ಎಂದು ಆರೋಪಿಸಲಾಗಿದೆ. ಟ್ರಂಪ್ ಆಡಳಿತವು ನ್ಯೂಯಾರ್ಕ್‌ನ ಕಾರ್ನೆಲ್ ವಿಶ್ವವಿದ್ಯಾಲಯ ಮತ್ತು ವಾಷಿಂಗ್ಟನ್‌ನ ಜಾರ್ಜ್‌ಟೌನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಸಹ ಗುರಿಯಾಗಿಸಿಕೊಂಡಿದೆ ಎನ್ನಲಾಗುತ್ತಿದೆ.

ಭಾರತ ಮೂಲದ ವಿದ್ಯಾರ್ಥಿ ಬದರ್ ಖಾನ್ ಸೂರಿ ಯಹೂದಿಗಳ ವಿರುದ್ಧ, ಪ್ಯಾಲೆಸ್ಟೈನಿ ಪರ ಬೆಂಬಲ ವ್ಯಕ್ತಪಡಿಸಿದ್ದರೆಂದು ಅವರ ವೀಸಾ ಸಹ ರದ್ದು ಮಾಡಲಾಗಿತ್ತು. ಅಮೆರಿಕದ ಜಾರ್ಜ್‌ಟೌನ್ ವಿಶ್ವವಿದ್ಯಾಲಯದ ಸಂಶೋಧಕರಾಗಿರುವ ಬದರ್ ಖಾನ್ ಸೂರಿಯನ್ನು ಅವರ ಮನೆ ಬಳಿ ಬಂಧಿಸಲಾಗಿತ್ತು.

## ಮಿನಿ ನ್ಯೂಸ್

### ಅಪ್ರಾಪ್ತೆ ಮೇಲೆ ಅತ್ಯಾಚಾರ

**ಗಾಜಿಯಾಬಾದ್:** ಹದಿನೇಳು ವರ್ಷದ ಬಾಲಕಿಯನ್ನು ಇಬ್ಬರು ಅಪಹರಿಸಿ ಸ್ಮಶಾನಕ್ಕೆ ಕರೆದೊಯ್ದು ಅತ್ಯಾಚಾರ ಎಸಗಿರುವ ಘಟನೆ ಗಾಜಿಯಾಬಾದ್‌ನಲ್ಲಿ ನಡೆದಿದೆ. ದೂರಿನಲ್ಲಿ ಇಸ್ರೇಲ್ ಮತ್ತು ಅಶ್ರಫ್ ಎಂಬ ಇಬ್ಬರು ವ್ಯಕ್ತಿಗಳ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಮೋದಿನಗರದ ನಿವಾರಿ ಪ್ರದೇಶದಲ್ಲಿ ಈ ಘಟನೆ ನಡೆದಿದೆ. ಆರೋಪಿಗಳಲ್ಲಿ ಒಬ್ಬ ಬಾಲಕಿಯನ್ನು ನೀರಿನ ಟ್ಯಾಂಕ್ ಬಳಿ ಕರೆದನು ಮತ್ತು ಅವಳು ಅಲ್ಲಿಗೆ ಬಂದಾಗ, ಅವನು ಮತ್ತು ಅವನ ಸ್ನೇಹಿತ ಮೋಟಾರ್‌ಸೈಕಲ್‌ನಲ್ಲಿ ತಮ್ಮೊಂದಿಗೆ ಸ್ಮಶಾನಕ್ಕೆ ಹೋಗುವಂತೆ ಒತ್ತಾಯಿಸಿದರು ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಮಶಾನದಲ್ಲಿ, ಅವರಲ್ಲಿ ಒಬ್ಬರು ಅವಳ ಮೇಲೆ ಅತ್ಯಾಚಾರ ಎಸಗಿದರೆ, ಇನ್ನೊಬ್ಬರು ಕಾವಲು ಕಾಯುತ್ತಿದ್ದರು. ಸಂತ್ರಸ್ತೆ ಸಹಾಯಕ್ಕಾಗಿ ಕಿರುಚಿದಾಗ, ಆರೋಪಿಗಳು ಅವಳ ಬಾಯಿಯನ್ನು ಬಟ್ಟೆ ತುರುಕಿ ಥಳಿಸಿದ್ದಾರೆ ಎಂದು ಡಿಸಿಪಿ ಸುರೇಂದ್ರ ನಾಥ್ ತಿವಾರಿ ತಿಳಿಸಿದ್ದಾರೆ.

### ವಿಷಪೂರಿತ ಆಹಾರ ಸೇವಿಸಿ 20 ಮಕ್ಕಳು ಅಸ್ವಸ್ಥ, ಇಬ್ಬರ ಧಾರುಣ ಸಾವು

**ಲಕ್ನೋ :** ಉತ್ತರ ಪ್ರದೇಶದ ಪ್ಯಾರಾ ಪ್ರದೇಶದ ಮಕ್ಕಳ ಸರ್ಕಾರಿ ಪುನರ್ವಸತಿ ಕೇಂದ್ರದಲ್ಲಿ ವಿಷಪೂರಿತ ಆಹಾರ ಸೇವಿಸಿ ಕನಿಷ್ಠ ಇಬ್ಬರು ಮಕ್ಕಳು ಸಾವನ್ನಪ್ಪಿದ್ದು, ಹಲವಾರು ಮಂದಿ ಅಸ್ವಸ್ಥರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೇಂದ್ರದಲ್ಲಿ ವಾಸಿಸುವ ಸುಮಾರು 20 ವಿಶೇಷ ಅಗತ್ಯವಿರುವ ಮಕ್ಕಳು ಹಠಾತ್ ಅನಾರೋಗ್ಯವನ್ನು ಅನುಭವಿಸಿದರು ಮತ್ತು ಅವರನ್ನು ಲೋಕಬಂಧು ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಈ ಎಲ್ಲಾ ಮಕ್ಕಳು ಮಾನಸಿಕ ಅಸ್ವಸ್ಥರು. ಅವರು ಬಂದಾಗ ಅವರು ತೀವ್ರವಾಗಿ ನಿರ್ಜಲೀಕರಣಗೊಂಡಿದ್ದರು. ನಮ್ಮ ಅತ್ಯುತ್ತಮ ಪ್ರಯತ್ನಗಳ ಹೊರತಾಗಿಯೂ, ಇಬ್ಬರು ಮಕ್ಕಳು ಸಾವನ್ನಪ್ಪಿದ್ದಾರೆ ಎಂದು ಲೋಕ ಬಂಧು ರಾಜ್ ನಾರಾಯಣ್ ಸಂಯೋಜಿತ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ರಾಜೀವ್ ಕುಮಾರ್ ದೀಕ್ಷಿತ್ ತಿಳಿಸಿದ್ದಾರೆ. ಗಂಭೀರ ಸ್ಥಿತಿಯಲ್ಲಿದ್ದ ಇಬ್ಬರು ಮಕ್ಕಳನ್ನು ಮತ್ತೊಂದು ಸರ್ಕಾರಿ ಆಸ್ಪತ್ರೆಗೆ ಕಳುಹಿಸಲಾಗಿದ್ದು, ಉಳಿದ 16 ಮಕ್ಕಳ ಸ್ಥಿತಿ ಸುಧಾರಿಸಿದೆ ಎಂದು ಅವರು ಹೇಳಿದರು.

ಈ ಘಟನೆಯು ಸ್ಥಳೀಯ ಅಧಿಕಾರಿಗಳ ತನಿಖೆಯನ್ನು ಪ್ರಚೋದಿಸಿತು. ಲಕ್ನೋ ಜಿಲ್ಲಾ ಮ್ಯಾಜಿಸ್ಟ್ರೇಟ್ ಆಹಾರದ ಕಾರಣವನ್ನು ನಿರ್ಧರಿಸಲು ಸಮಿತಿಯನ್ನು ರಚಿಸಿದ್ದಾರೆ.

### ಸ್ಫೋಟಗೊಂಡ ಗೋದಾಮಿನಲ್ಲಿತ್ತು 11,000 ಕೆಜಿ ಗನ್ ಪೌಡರ್

**ಪಣಜಿ:** ದಕ್ಷಿಣ ಗೋವಾದ ಖಾಸಗಿ ಸಣ್ಣ ಕ್ಯಾಲಿಬರ್ ಮದ್ದುಗುಂಡು ತಯಾರಿಕಾ ಕಾರ್ಖಾನೆಯ ಗೋದಾಮಿನಲ್ಲಿ ನಡೆದ ಸ್ಫೋಟದ ತನಿಖೆಯ ವೇಳೆ ಸುಮಾರು 11,000 ಕೆಜಿ ಗನ್ ಪೌಡರ್ ಅನ್ನು ಅಕ್ರಮವಾಗಿ ಘಟಕದಲ್ಲಿ ಸಂಗ್ರಹಿಸಿರುವುದು ತಿಳಿದುಬಂದಿದೆ.

ಡ್ಯೂಸ್ ಪ್ರಿಸಿಶನ್ ಮ್ಯಾನುಫ್ಯಾಕ್ಚರಿಂಗ್ ಕಾರ್ಖಾನೆಯಲ್ಲಿ ಅಧಿಕಾರಿಗಳಿಂದ ಅಗತ್ಯವಾದ ಪರವಾನಗಿಯನ್ನು ಪಡೆಯದೆ ಸುಮಾರು 11,000 ಕೆಜಿ ಗನ್‌ಪೌಡರ್ ಅನ್ನು ಮ್ಯಾಗಜೀನ್‌ಗಳಲ್ಲಿ ಸಂಗ್ರಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾತ್ರಿ 10.30 ರ ಸುಮಾರಿಗೆ ಗೋದಾಮಿನಲ್ಲಿ ನಡೆದ ಬೆಂಕಿ ಅವಘಡದಲ್ಲಿ ಸುಮಾರು 14.5 ಟನ್ ಗನ್ ಪೌಡರ್ ನಾಶಗೊಂಡು ಬೃಹತ್ ಸ್ಫೋಟ ಸಂಭವಿಸಿದೆ. ಯಾವುದೇ ಪ್ರಾಣಹಾನಿ ಸಂಭವಿಸಿಲ್ಲವಾದರು ಅಕ್ಕಪಕ್ಕದಲ್ಲಿ ವಾಸಿಸುವ ಜನರ ಮನೆಗಳಲ್ಲಿ ಬಿರುಕುಗಳನ್ನು ಸೃಷ್ಟಿಸಿದೆ..

ಕ್ವೆಪೆಮ್ ಪಟ್ಟಣದಲ್ಲಿ ದಕ್ಷಿಣ ಗೋವಾದ ಜಿಲ್ಲಾ ಆಧಿಕಾರೊಗಳು ದೂರು ದಾಖಲಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮಾರ್ಗಸೂಚಿಗಳನ್ನು ಪಾಲಿಸದಿರುವುದು ಬೆಂಕಿ ಅವಘಡಕ್ಕೆ ಕಾರಣವಾಯಿತು ಎಂದು ತಿಳಿಸಲಾಗಿದೆ.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಪೆಟ್ರೋಲಿಯಂ ಮತ್ತು ಸ್ಫೋಟಕಗಳ ಸುರಕ್ಷತಾ ಸಂಸ್ಥೆ (ಪಿಇಎಸ್‌ಒ) ಯಿಂದ ಅನುಮತಿ ಪಡೆಯದೆ ಕಂಪನಿಯು 11,000 ಕಿಲೋಗ್ರಾಂಗಳಷ್ಟು ಗನ್‌ಪೌಡರ್ ಅನ್ನು ಸಂಗ್ರಹಿಸಿದೆ ಎಂದು ಇದುವರೆಗೆ ನಡೆಸಲಾದ ಪೊಲೀಸ್ ವಿಚಾರಣೆಯು ಸೂಚಿಸಿದೆ ಎಂದು ವಕ್ತಾರರು ತಿಳಿಸಿದ್ದಾರೆ.

## 2036ರ ಒಲಿಂಪಿಕ್ ಕ್ರೀಡಾಕೂಟಕ್ಕೆ ಸೌಲಭ್ಯಗಳನ್ನು ಸೃಷ್ಟಿಸಲು ಮಾಸ್ಟರ್ ಪ್ಲಾನ್

# ಒಲಿಂಪಿಕ್ಸ್ ಆಯೋಜನೆ: ಸಾಕಾರಗೊಳಿಸಲು ಭರದ ಸಿದ್ಧತೆ

**ಅಹಮದಾಬಾದ್:** 2036 ರ ಒಲಿಂಪಿಕ್ಸ್ ಆಯೋಜಿಸುವ ಕನಸು ಕಾಣುತ್ತಿರುವ ಭಾರತ ಇದನ್ನು ಸಾಕಾರಗೊಳಿಸಲು ಭರದ ಸಿದ್ಧತೆ ನಡೆಸುತ್ತಿದೆ. 2036 ರ ಒಲಿಂಪಿಕ್ ಕ್ರೀಡಾಕೂಟಕ್ಕೆ ಸೌಲಭ್ಯಗಳನ್ನು ಸೃಷ್ಟಿಸಲು ಒಂದು ಮಾಸ್ಟರ್ ಪ್ಲಾನ್ ಸಿದ್ಧಪಡಿಸಲಾಗುತ್ತಿದೆ.

ಇದಕ್ಕಾಗಿ ಸರ್ದಾರ್ ಪಟೇಲ್ ಸ್ಪೋರ್ಟ್ಸ್ ಎನ್‌ಕ್ಲೇವ್, ಒಲಿಂಪಿಕ್ ವಿಲೇಜ್ ಮತ್ತು ಇತರ ಕ್ರೀಡಾ ಸೌಲಭ್ಯಗಳಿಗಾಗಿ ಮೊಟೆರಾದಲ್ಲಿರುವ ಅತ್ಯಾಚಾರ ಅಪರಾಧಿ ಅಸಾರಾಂ ಆಶ್ರಮ ಸೇರಿದಂತೆ ಮೂರು ಆಶ್ರಮಗಳ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ನಿರ್ಧರಿಸಲಾಗಿದೆ ಎಂದು ವರದಿಯಾಗಿದೆ.

ಸಂತ ಶ್ರೀ ಆಸಾರಾಮ್ ಆಶ್ರಮ, ಭಾರತೀಯ ಸೇವಾ ಸಮಾಜ ಮತ್ತು ಸದಾಶಿವ ಪ್ರಜ್ಞಾ ಮಂಡಲ ಎಂಬ ಮೂರು ಆಶ್ರಮಗಳನ್ನು ಸ್ಥಳಾಂತರಿಸುವ ಸಾಧ್ಯತೆಯಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಈ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಮತ್ತು ಮೂರು ಟ್ರಸ್ಟ್‌ಗಳಿಗೆ ಪರ್ಯಾಯ ನಿವೇಶನಗಳನ್ನು ಒದಗಿಸುವ ಪ್ರಕ್ರಿಯೆ ನಡೆಯುತ್ತಿದೆ. ಅಹಮದಾಬಾದ್ ಮುನ್ಸಿಪಲ್ ಕಮಿಷನರ್, ಅಹಮದಾಬಾದ್ ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಜಾಡಾ ಸಿಇಒ ಒಳಗೊಂಡ ಮೂವರು ಸದಸ್ಯರ ಸಮಿತಿಯು ಮಾಸ್ಟರ್ ಪ್ಲಾನ್‌ಗಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ ಎಂದು ಮೂಲಗಳು ತಿಳಿಸಿವೆ.

ಕ್ರೀಡಾಂಗಣದ ಸಮೀಪವಿರುವ ಶಿವನಗರ ಮತ್ತು ವಂಜಾರ ವಾಸ್‌ನಂತಹ ವಸತಿ ಪ್ರದೇಶಗಳನ್ನು ಸಹ ಮಾಸ್ಟರ್ ಪ್ಲಾನ್‌ನಲ್ಲಿ ಸೇರಿಸಲಾಗಿದೆ. ಫೆಬ್ರವರಿ 20, 2025 ರಂದು, ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ನೇತೃತ್ವದ ಸಮಿತಿಯು ಅಹಮದಾಬಾದ್ ಮುನ್ಸಿಪಲ್ ಕಾರ್ಪೊರೇಷನ್ ನಿವಾಸಿಗಳನ್ನು ಸ್ಥಳಾಂತರಿಸಲು ನಿರ್ಧರಿಸಿದೆ.

### ಭೂ ಸ್ವಾಧೀನ ಪ್ರಕ್ರಿಯೆ

**ಸ್ವಾಧೀನ ಪ್ರಕ್ರಿಯೆಯ ಜವಾಬ್ದಾರಿಯನ್ನು ಅಹಮದಾಬಾದ್ ಕಲೆಕ್ಟರ್ ಕಚೇರಿಗೆ ಹಸ್ತಾಂತರಿಸಲಾಗಿದೆ. ಜಾಡಾ ಮೂಲಗಳ ಪ್ರಕಾರ, ಅಂತಾರಾಷ್ಟ್ರೀಯ ಸಲಹಾ ಸಂಸ್ಥೆ ಪಾಪ್ಯುಲಸ್, ಸರ್ದಾರ್ ಪಟೇಲ್ ಸ್ಪೋರ್ಟ್ಸ್ ಎನ್‌ಕ್ಲೇವ್ ಮತ್ತು ಒಲಿಂಪಿಕ್ ವಿಲೇಜ್‌ಗಾಗಿ ಮಾಸ್ಟರ್ ಪ್ಲಾನ್ ಸಿದ್ಧಪಡಿಸುತ್ತಿದೆ.**

# ಬಿಜೆಪಿ ನಾಯಕನ ನಿವಾಸದ ಹೊರಗೆ ಗುಂಡಿನ ದಾಳಿ

**ಕೋಲ್ಕತ್ತಾ:** ಪಶ್ಚಿಮ ಬಂಗಾಳದ ಭಾತ್ಪಾರಾದಲ್ಲಿರುವ ಬಿಜೆಪಿ ನಾಯಕ ಮತ್ತು ಮಾಜಿ ಸಂಸದ ಅರ್ಜುನ್ ಸಿಂಗ್ ಅವರ ನಿವಾಸದ ಹೊರಗೆ ಅಪರಿಚಿತ ದುಷ್ಕರ್ಮಿಗಳು ಬಾಂಬ್ ಎಸೆದು ಗುಂಡಿನ ದಾಳಿ ನಡೆಸಿದ್ದಾರೆ. ತಡರಾತ್ರಿ ನಡೆದ ದಾಳಿಯಲ್ಲಿ ಯುವಕನೊಬ್ಬ ಗಾಯಗೊಂಡಿದ್ದಾನೆ ಎಂದು ಅವರು ಪೊಲೀಸರು ತಿಳಿಸಿದ್ದಾರೆ.

ಸಿಂಗ್ ಮತ್ತು ಅವರ ಆಪ್ತರು ದಾಳಿಕೋರರನ್ನು ಬೆನ್ನಟ್ಟಿದ್ದು, ಆದರೆ ಅವರು ಸ್ಥಳದಿಂದ ಪಾರಿಯಾಗಿದ್ದಾರೆ ಎಂದು ವರದಿಯಾಗಿದೆ. ಪರಿಸ್ಥಿತಿ ಈಗ ನಿಯಂತ್ರಣದಲ್ಲಿದೆ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಬ್ಯಾರಕ್‌ಪೋರ್ ಪೊಲೀಸ್ ಕಮಿಷನರ್ ಅಜಯ್ ಠಾಕೂರ್ ಹೇಳಿದ್ದಾರೆ.

ಈ ದಾಳಿಯ ಹಿಂದೆ ತೃಣಮೂಲ ಕಾಂಗ್ರೆಸ್ ಕೌನ್ಸಿಲರ್ ಸುನಿತಾ ಸಿಂಗ್ ಅವರ ಪುತ್ರ ನಮಿತ್ ಸಿಂಗ್ ಕೈವಾಡವಿದೆ ಎಂದು ಸಿಂಗ್ ಆರೋಪಿಸಿದ್ದಾರೆ. ಪೊಲೀಸರ ಮುಂದೆ ಗುಂಡು ಹಾರಿಸಿ. ಬಾಂಬ್ ದಾಳಿ ನಡೆದಿದೆ ಎಂದು ಹೇಳಿದ್ದಾರೆ. ಪೊಲೀಸ್ ಮೂಲಗಳ ಪ್ರಕಾರ, ಪ್ರದೇಶದ ಮೇಘನಾ ಜೂಟ್ ಮಿಲ್‌ನಲ್ಲಿ ಎರಡು ಗುಂಪುಗಳ ಕಾರ್ಮಿಕರ ನಡುವಿನ ವಿವಾದದ ನಂತರ



ಹಿಂಸಾಚಾರ ಭುಗಿಲೆದ್ದಿದೆ. ಏತನ್ಮಧ್ಯೆ, ಟಿಎಂಸಿಯ ಜಗದ್ದಲ್ ಶಾಸಕ ಸೋಮನಾಥ್ ಶ್ಯಾಮ್ ಸಿಂಗ್ ಮತ್ತು ಅವರ ಬೆಂಬಲಿಗರು ಹಿಂಸಾಚಾರವನ್ನು ಪ್ರಚೋದಿಸುತ್ತಿದ್ದಾರೆ ಎಂದು ಆರೋಪಿಸಿದರು.

ನಾನು ನನ್ನ ಆಪ್ತರೊಂದಿಗೆ ಮನ್ಸೂರ್ ಭವನದಲ್ಲಿದ್ದೆ. ರಾತ್ರಿ 10:30 ರ ಸುಮಾರಿಗೆ ನನಗೆ ಇದ್ದಕ್ಕಿದ್ದಂತೆ ಗುಂಡಿನ ಸದ್ದು ಕೇಳಿಸಿತು. ನಾನು ಹೊರಗೆ ಧಾವಿಸಿ ದುಷ್ಕರ್ಮಿಗಳು ನಮ್ಮ ಮೇಲೆ ಗುಂಡಿನ ದಾಳಿ ನಡೆಸಿದರು. ದಾಳಿಯ ನಂತರ, ಅವನು ಮತ್ತು ಅವನ ಸಹಚರರು ದಾಳಿಕೋರರನ್ನು ಬೆನ್ನಟ್ಟಿದರು, ಈ ಸಮಯದಲ್ಲಿ ಅವರಲ್ಲಿ ಒಬ್ಬರು ಚರಂಡಿಗೆ ಬಿದ್ದು ಗಾಯಗೊಂಡ ಪರಿಸ್ಥಿತಿಯನ್ನು ನಿಯಂತ್ರಿಸಲು ಕ್ಷಿಪ್ರ ಕಾರ್ಯಾಚರಣೆ ಪಡೆ ಸಿಬ್ಬಂದಿ ಸೇರಿದಂತೆ ಪೊಲೀಸ್ ತುಕಡಿಯನ್ನು ಪ್ರದೇಶದಲ್ಲಿ ನಿಯೋಜಿಸಲಾಗಿದೆ.

## ಜಾಗತಿಕ ಆರ್ಥಿಕತೆಯಲ್ಲಿ ಭಾರತದ ಕುಣಿತ

# ದಶಕದಲ್ಲಿ ಇಂಡಿಯಾ ಜಿಡಿಪಿ ಡಬಲ್

**ಹೊಸದಿಲ್ಲಿ:** ಹಲವು ಕಾರಣಗಳಿಂದ ಜಾಗತಿಕ ಆರ್ಥಿಕತೆ ಕಳೆದ ಒಂದು ದಶಕದಿಂದ ಕುಂಟುತ್ತಾ ಸಾಗಿದೆ. ಆದರೆ, ಇದೇ ಅವಧಿಯಲ್ಲಿ ಭಾರತ ಪರಾಕ್ರಮ ಮೆರೆದಿದ್ದು, ಕಳೆದ 10 ವರ್ಷಗಳಲ್ಲಿ ವಿಶ್ವದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿ ಹೊರಹೊಮ್ಮಿದೆ. ಅಂತಾರಾಷ್ಟ್ರೀಯ ಹಣಕಾಸು ನಿಧಿಯ ಇತ್ತೀಚಿನ ವರದಿ ಬಿಡುಗಡೆಯಾಗಿದ್ದು, ಜಿಡಿಪಿಯಲ್ಲಿ ಕಳೆದ ಒಂದು ದಶಕದಲ್ಲಿ ಭಾರತ ಶೇ.105ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ. ಇದು ವಿಶ್ವದ ಟಾಪ್ 2 ಆರ್ಥಿಕತೆಗಳಾಗಿರುವ ಅಮೆರಿಕ ಹಾಗೂ ಚೀನಾವನ್ನು ಬೆಸ್ತು ಬೀಳಿಸಿದ್ದು, ಆ ಎರಡು ದೇಶಗಳ ಬೆಳವಣಿಗೆ ದರಕ್ಕಿಂತಲೂ ಹೆಚ್ಚಿನ ವೇಗದಲ್ಲಿ ಭಾರತದ ಜಿಡಿಪಿ ಹೆಚ್ಚಾಗಿದೆ. ಈಗ ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯಾಗಿರುವ ಭಾರತ, ಜಪಾನ್ ಅನ್ನು ಕೆಲವೇ ದಿನಗಳಲ್ಲಿ ಹಿಂದಿಕ್ಕಲಿದೆ. ಇದೇ ವೇಗದಲ್ಲಿ ಭಾರತದ ಆರ್ಥಿಕ ಪ್ರಗತಿ ಮುಂದುವರಿದರೆ 2027ರ ಹೊತ್ತಿಗೆ ಭಾರತ ಜರ್ಮನಿಯನ್ನು ಹಿಂದಿಕ್ಕಲ್ಲಿದ್ದು, ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ಐಎಂಎಫ್ ಅಂದಾಜಿಸಿದೆ.

ಹೌದು, ಕಳೆದ 10 ವರ್ಷದಲ್ಲಿ ಭಾರತ ಬಹಳ ವೇಗದ ಆರ್ಥಿಕ ಪ್ರಗತಿಯನ್ನು ಕಂಡಿದೆ. 2015ಕ್ಕೆ ಹೋಲಿಸಿದರೆ ಜಿಡಿಪಿ ಡಬಲ್ ಆಗಿದ್ದು, ಜಗತ್ತಿನ ಒಂದೊಂದೆ ರಾಷ್ಟ್ರಗಳನ್ನು ಹಿಂದಕ್ಕೆ ಹಾಕುತ್ತಾ ಸಾಗಿದೆ. ಐಎಂಎಫ್ ಪ್ರಕಾರ ಪ್ರಸ್ತುತ ಭಾರತದ ಜಿಡಿಪಿ 4.3 ಟ್ರಿಲಿಯನ್ ಡಾಲರ್ ಆಗಿದೆ.

ನರೇಂದ್ರ ಮೋದಿ ಅವರು ಅಧಿಕಾರ ವಹಿಸಿಕೊಂಡು



ಒಂದು ವರ್ಷ ಆಗಿದ್ದಾಗ ಅಂದ್ರೇ 2015ರಲ್ಲಿ ಭಾರತದ ಜಿಡಿಪಿ 2.1 ಟ್ರಿಲಿಯನ್ ಡಾಲರ್ ಆಗಿತ್ತು. ಅಲ್ಲಿಂದ ಇಲ್ಲಿಯವರೆಗೆ ಭಾರತವು ಜಿಡಿಪಿ ವಿಚಾರದಲ್ಲಿ ಡಬಲ್ ಸಾಧನೆ ಮಾಡಿದ್ದು, 4.3 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಿ ಹೊರ ಹೊಮ್ಮಿದೆ. ಈ ಬಗ್ಗೆ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಪ್ರತಿಕ್ರಿಯಿಸಿದ್ದು, ಭಾರತದ 10 ವರ್ಷಗಳ ಆರ್ಥಿಕ ಸಾಧನೆಯನ್ನು ಅತ್ಯುತ್ತಮ ಎಂದು ಕರೆದಿದ್ದು, ಜಿಡಿಪಿ ಡಬಲ್ ಆಗಿದ್ದಕ್ಕೆ ದೇಶವನ್ನು

### ಜಪಾನ್, ಜರ್ಮನಿಯನ್ನು ಹಿಂದಿಕ್ಕಲಿದೆ

**ಸದ್ಯ ಭಾರತ ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯಾಗಿದ್ದು, ಶೀಘ್ರದಲ್ಲೇ ನಾಲ್ಕನೇ ಸ್ಥಾನದಲ್ಲಿರುವ ಜಪಾನ್ ಅನ್ನು ಹಿಂದಿಕ್ಕಲಿದೆ ಎನ್ನಲಾಗಿದೆ. ಜಪಾನ್‌ನ ಜಿಡಿಪಿ 4.4 ಟ್ರಿಲಿಯನ್ ಡಾಲರ್ ಇದ್ದು, ಭಾರತ ಕೊಂಚ ಹಿಂದೆ ಇದೆ. 2025ರ ಸೆಪ್ಟೆಂಬರ್ ಹೊತ್ತಿಗೆ ಜಪಾನ್ ಅನ್ನು ಹಿಂದಿಕ್ಕುವ ಸಾಧ್ಯತೆ ಇದೆ. ಅದಲ್ಲದೇ ಇದೇ ಸರಾಸರಿಯಲ್ಲಿ ಜಿಡಿಪಿ ಬೆಳವಣಿಗೆಯನ್ನು ಭಾರತ ಮುಂದುವರಿಸಿದರೆ 2027ರ ಜೂನ್ ಹೊತ್ತಿಗೆ ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಭಾರತ ಹೊರಹೊಮ್ಮಲಿದ್ದು, ಜರ್ಮನಿಯನ್ನು ಹಿಂದಕ್ಕೆ ಹಾಕಲಿದೆ. ಜರ್ಮನಿಯ ಜಿಡಿಪಿ ಸದ್ಯ 4.9 ಟ್ರಿಲಿಯನ್ ಡಾಲರ್ ಇದೆ.**

# ಐಶ್ವರ್ಯಾ ರೈ ಕಾರು ಅಪಘಾತ

**ಮುಂಬೈ:** ಮುಂಬೈನ ಜುಹು ಪ್ರದೇಶದಲ್ಲಿ ನಟಿ ಐಶ್ವರ್ಯಾ ರೈ ಅವರ ಕಾರು ಅಪಘಾತ ಸಂಭವಿಸಿದೆ. ಈ ಘಟನೆ ಜುಹುವಿನಲ್ಲಿರುವ ಐಶ್ವರ್ಯಾ ಅವರ ನಿವಾಸದ ಬಳಿ ನಡೆದಿದೆ. ಐಶ್ವರ್ಯಾ ಅವರ ಕಾರು ಅಪಘಾತಕ್ಕೀಡಾಗಿದೆ ಎಂದು ತಿಳಿದ ತಕ್ಷಣ ಅಭಿಮಾನಿಗಳಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಅದೃಷ್ಟವಶಾತ್, ಈ ಅಪಘಾತದಲ್ಲಿ ಯಾರಿಗೂ ಯಾವುದೇ ಹಾನಿಯಾಗಿಲ್ಲ.

ಈ ಅಪಘಾತದಲ್ಲಿ ಕಾರಿಗೆ ಯಾವುದೇ ಹಾನಿಯಾಗಿಲ್ಲ. ಈ ಅಪಘಾತದ ವಿಡಿಯೋ ಕೂಡ ವೈರಲ್ ಆಗುತ್ತಿದೆ. ಐಶ್ವರ್ಯಾ ರೈ ಅವರ ಕಾರಿಗೆ ಹಿಂದಿನಿಂದ ಬೆಸ್ಟ್ ಬಸ್ ಡಿಕ್ಕಿ ಹೊಡೆದಿದೆ. ಡಿಕ್ಕಿಯ ನಂತರ ಅಂಗರಕ್ಷಕ ಕಾರಿನಿಂದ ಇಳಿದು ಬಸ್ ಚಾಲಕನ ಕಿವಿಗೆ ಹೊಡೆದಿದ್ದಾನೆ ಹೇಳಲಾಗುತ್ತಿದೆ. ಹೊಡೆತ ತಿಂದ ಬಸ್ ಚಾಲಕ



ಕೂಡ 100 ಗೆ ಕರೆ ಮಾಡಿದ್ದಾನೆ. ಪೊಲೀಸರು ಸ್ಥಳಕ್ಕೆ ಬರುವ ಮೊದಲೇ, ಅಮಿತಾಬ್ ಬಚ್ಚನ್ ಅವರ ಬಂಗಲೆಯ ಮೇಲ್ವಿಚಾರಕ ಬಸ್ ಚಾಲಕನಿಗೆ ಕ್ಷಮೆಯಾಚಿಸಿದ್ದಾನೆ ಎನ್ನಲಾಗಿದೆ.

## ಅಮೆರಿಕವು ತನ್ನ ಹಣವನ್ನು ಬೇರೆಡೆಗೆ ತಿರುಗಿಸುತ್ತಿದೆ, ಇದರಿಂದಾಗಿ ಜಾಗತಿಕ ಆರೋಗ್ಯ ಕಾರ್ಯಕ್ರಮಗಳಿಗೆ ಹೊಡೆತ

# ಬಡ ದೇಶಗಳಿಗೆ ಲಸಿಕೆಗಾಗಿ ನೀಡಲಾಗುವ ಹಣಕ್ಕೆ ಕತ್ತರಿ ಹಾಕಿದ ಟ್ರಂಪ್

**ವಾಷಿಂಗ್ಟನ್:** ಡೊನಾಲ್ಡ್ ಟ್ರಂಪ್ ಸರ್ಕಾರವು ವ್ಯಾಕ್ಸಿನ್‌ಗಾಗಿ ಮೀಸಲಾಗಿಟ್ಟಿರುವ ಹಣವನ್ನು ಕಡಿತಗೊಳಿಸಲು ನಿರ್ಧರಿಸಿದೆ. ಇದೊಂದು ಜಾಗತಿಕ ಆರೋಗ್ಯ ಸಂಸ್ಥೆಯಾಗಿದ್ದು, ಅಭಿವೃದ್ಧಿ ಶೀಲ ರಾಷ್ಟ್ರಗಳಿಗೆ ಲಸಿಕೆಗಳನ್ನು ನೀಡುತ್ತದೆ.

ಯುಎಸ್‌ಯಡಿ ಸಂಸ್ಥೆಯು ಅಮೆರಿಕಾ ಕಾಂಗ್ರೆಸ್‌ಗೆ ಕಳುಹಿಸಿದ 281 ಪುಟಗಳ ವರದಿಯಲ್ಲಿ ಈ ನಿರ್ಧಾರವನ್ನು ಸೇರಿಸಲಾಗಿದೆ. ಅಮೆರಿಕದ ಈ ನಿರ್ಧಾರದಿಂದ ಲಸಿಕೆಗಳನ್ನು ಪಡೆಯುವ ಬಡ ರಾಷ್ಟ್ರಗಳಿಗೆ ತೊಂದರೆಯಾಗಲಿದೆ. ಯಾವ ಅನುದಾನವನ್ನು ಮುಂದುವರಿಸಬೇಕು ಮತ್ತು ಯಾವುದನ್ನು ರದ್ದುಗೊಳಿಸಬೇಕು ಎನ್ನುವುದನ್ನು ಈ ಸಂಸ್ಥೆ ನಿರ್ಧರಿಸುತ್ತದೆ.

ನ್ಯೂಯಾರ್ಕ್ ಟೈಮ್ಸ್ ವರದಿಯ ಪ್ರಕಾರ, ಅಮೆರಿಕಾವು ಮಲೇರಿಯಾಗೆ ಸಂಬಂಧ ಪಟ್ಟಂತೆ ಆರೋಗ್ಯ ವಲಯದಲ್ಲಿ ನೀಡಲಾಗುವ ಬೆಂಬಲವನ್ನು ಕಡಿಮೆ ಮಾಡಲಿದೆ.

ಆದರೆ ಜಿಎವಿಐ, ಕ್ಷಯರೋಗ ಮತ್ತು ಆಹಾರ ಭದ್ರತೆಗೆ ನೀಡಲಾಗುತ್ತಿರುವ ಸಹಾಯವನ್ನು ಮುಂದುವರಿಸಲಿದೆ. ಈ ಸಹಾಯವು, ವಿವಿಧ ಆಂತರಿಕ ಸಂಘರ್ಷಗಳನ್ನು ಮತ್ತು ನೈಸರ್ಗಿಕ ವಿಕೋಪಗಳನ್ನು ಎದುರಿಸುತ್ತಿರುವ ದೇಶಗಳಿಗೆ ಮಾತ್ರ ಸಿಗುತ್ತಿದೆ.

ಜಿಎವಿಐ ಸಂಸ್ಥೆಯಲ್ಲಿ ಸುಮಾರು ಆರು ಸಾವಿರ ಉದ್ಯೋಗಿಗಳು ಈ ಹಿಂದೆ ಇದ್ದರು, ಈಗ ಕೇವಲ 869 ಉದ್ಯೋಗಿಗಳು ಮಾತ್ರ ಕೆಲಸ ಮಾಡುತ್ತಿದ್ದಾರೆ. ಟ್ರಂಪ್ ಆಡಳಿತವು ಸುಮಾರು 900 ವಿವಿಧ ಅನುದಾನಗಳನ್ನು ಮಾತ್ರ ಮುಂದುವರಿಸಲು ನಿರ್ಧರಿಸಿದೆ.

5,340 ಕ್ಕೂ ಹೆಚ್ಚು ಅನುದಾನಗಳನ್ನು ರದ್ದುಗೊಳಿಸಲು ಟ್ರಂಪ್ ಸರ್ಕಾರ ನಿರ್ಧರಿಸಿದೆ. ಈ ಸಂಸ್ಥೆಯ ತಮ್ಮ ವಾರ್ಷಿಕ

**ಅಮೆರಿಕಾವು ತನ್ನ ಆರ್ಥಿಕ ಸಹಾಯವನ್ನು ಹಿಂದಕ್ಕೆ ಪಡೆದುಕೊಂಡರೆ, ಲಸಿಕೆಗಳ ಮೂಲಕ ತಡೆಗಟ್ಟಬಹುದಾದ ರೋಗಗಳಿಂದ ಜನರನ್ನು ರಕ್ಷಿಸಲು ಭಾರೀ ಹೊಡೆತ ಬೀಳಲಿದೆ. ಇಷ್ಟೇ ಅಲ್ಲದೇ, ಇಂತಹ ರೋಗಗಳು ಅಮೆರಿಕಾದಲ್ಲಿ ಹರಡುವುದೂ ಹೆಚ್ಚಾಗಲಿದೆ ಎಂದು ಜಾನ್ಸ್ ಹಾಪ್ಕಿನ್ಸ್ ಬ್ಲೂಮ್‌ಬರ್ಗ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್‌ನ ಅಂತರರಾಷ್ಟ್ರೀಯ ಲಸಿಕೆಗಳ ಪ್ರವೇಶ ಕೇಂದ್ರದ ಕಾರ್ಯನಿರ್ವಾಹಕ ನಿರ್ದೇಶಕ ವಿಲಿಯಂ ಮಾಸ್ ಹೇಳಿದ್ದಾರೆ.**



ಬಜೆಟ್‌ನಲ್ಲಿ ಸುಮಾರು 40 ಬಿಲಿಯನ್ ಕಡಿತಗೊಳಿಸುವ ಯೋಜನೆಯನ್ನು ಹಾಕಿಕೊಂಡಿದೆ.

ಈ ಸಂಸ್ಥೆಯನ್ನು ಸ್ಟೇಟ್ ಡಿಪಾರ್ಟ್‌ಮೆಂಟ್‌ನೊಂದಿಗೆ ವಿಲೀನಗೊಳಿಸುವ ನಿರ್ಧಾರಕ್ಕೂ ಟ್ರಂಪ್ ಸರ್ಕಾರ ಬಂದಿದೆ.

ಜಿಎವಿಐಯು ಸ್ವಿಜರ್ಲ್ಯಾಂಡಿನ ಜಿನೀವಾದಲ್ಲಿ ತಮ್ಮ ಪ್ರಧಾನ ಕಚೇರಿಯನ್ನು ಹೊಂದಿದೆ. ಇದು, ಸಾರ್ವಜನಿಕ ಖಾಸಗಿ ಸಹಭಾಗಿತ್ವದೊಂದಿಗೆ ನಡೆಯುತ್ತಿರುವ ಸಂಸ್ಥೆ. ಅಮೆರಿಕಾದ ಬೆಂಬಲ ನಮಗೆ ಅತ್ಯಂತ ನಿರ್ಣಾಯಕ.

ಅಮೆರಿಕಾದ ಸಹಕಾರದೊಂದಿಗೆ ಮುಂದಿನ ಐದು ವರ್ಷಗಳಲ್ಲಿ 8 ಮಿಲಿಯನ್ ಜೀವಗಳನ್ನು ಉಳಿಸಬಹುದಾಗಿದೆ.

ಮತ್ತು, ಲಕ್ಷಾಂತರ ಮಕ್ಕಳಿಗೆ ಆರೋಗ್ಯಕರವಾದ ಭವಿಷ್ಯವನ್ನು ನೀಡಬಹುದಾಗಿದೆ ಗವಿಯ ಅಧಿಕಾರಿಗಳು ಹೇಳಿದ್ದಾರೆ.

ಇದುವರೆಗೆ ಅಂದರೆ, ಕಳೆದ 25 ವರ್ಷಗಳಲ್ಲಿ ಅಮೆರಿಕಾದ ಬೆಂಬಲದಿಂದಾಗಿ 18 ಮಿಲಿಯನ್ ಜೀವಗಳನ್ನು ಉಳಿಸಲು ಸಹಾಯವಾಗಿತ್ತು.

- **ಅಮೆರಿಕವು ತನ್ನ ಹಣವನ್ನು ಬೇರೆಡೆಗೆ ತಿರುಗಿಸುತ್ತಿದೆ, ಇದರಿಂದಾಗಿ ಜಾಗತಿಕ ಆರೋಗ್ಯ ಕಾರ್ಯಕ್ರಮಗಳಿಗೆ ಹೊಡೆತ**
- **ಮಲೇರಿಯಾಗೆ ಸಂಬಂಧ ಪಟ್ಟಂಗೆ ಆರೋಗ್ಯ ವಲಯದಲ್ಲಿ ನೀಡಲಾಗುವ ಬೆಂಬಲವನ್ನು ಕಡಿಮೆ ಮಾಡಲಿದೆ**
- **ಗವಿ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದೊಂದಿಗೆ ನಡೆಯುತ್ತಿರುವ ಸಂಸ್ಥೆ**

# ಬೌಲರ್‌ಗಳಿಗೆ ಮನಃಶಾಸ್ತ್ರಜ್ಞರ ಅಗತ್ಯವಿದೆ

ಟೀಮ್ ಇಂಡಿಯಾದ ಮಾಜಿ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಕ್ರಿಕೆಟ್‌ಗೆ ಸಂಬಂಧಿಸಿದಂತೆ ಏನೇ ಹೇಳಿದರೂ ಅದು ಚರ್ಚಾ ವಿಷಯವಾಗುತ್ತದೆ. ಇದೀಗ ಐಪಿಎಲ್ ನಡುವೆ ನೀಡಿರುವ ಹೇಳಿಕೆಯೊಂದು ಭಾರೀ ಚರ್ಚೆಗೆ ಕಾರಣವಾಗಿದೆ. ಹೀಗೆ ಚರ್ಚೆಗೀಡಾಗಲು ಮುಖ್ಯ ಕಾರಣ ರವಿಚಂದ್ರನ್ ಅಶ್ವಿನ್ ಬೌಲರ್‌ಗಳ ಮಾನಸಿಕ ಸ್ಥಿತಿ ಬಗ್ಗೆ ಮಾತನಾಡಿರುವುದು.

ಐಪಿಎಲ್ 2025ರ ಆರಂಭದ ಬೆನ್ನಲ್ಲೇ ಬ್ಯಾಟರ್‌ಗಳ ಅಬ್ಬರ ಜೋರಾಗಿದೆ. ಇದನ್ನೇ ಪ್ರಸ್ತಾಪಿಸಿರುವ ಅಶ್ವಿನ್, ಐಪಿಎಲ್‌ನಲ್ಲಿ ಬ್ಯಾಟಿಂಗ್ ನಡೆಯುತ್ತಿರುವ ರೀತಿ ನೋಡಿದರೆ, ಶೀಘ್ರದಲ್ಲೇ ಪ್ರತಿಯೊಬ್ಬ ಬೌಲರ್‌ಗಳು ವೈಯಕ್ತಿಕ ಮನಃಶಾಸ್ತ್ರಜ್ಞರನ್ನು ನೇಮಿಸಿಕೊಳ್ಳಬೇಕಾಗಿ ಬರಬಹುದು ಎಂದಿದ್ದಾರೆ. ಟಿ20 ಕ್ರಿಕೆಟ್‌ನಲ್ಲಿ ಬ್ಯಾಟ್ಸ್‌ಮನ್‌ಗಳು ಸ್ಫೋಟಕ ಶೈಲಿಯನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಟಿ20 ಲೀಗ್ ಮತ್ತು ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಹಲವು ರೀತಿಯ ನಿಯಮಗಳು ಬಂದಿವೆ. ಆದರೆ ಇವೆಲ್ಲವೂ ಬ್ಯಾಟ್ಸ್‌ಮನ್‌ಗಳಿಗೆ ಸಹಾಯಕವಾಗುತ್ತಿದೆ. ವಿಶೇಷವಾಗಿ ಐಪಿಎಲ್‌ನಲ್ಲಿ, ಕಳೆದ ಸೀಸನ್‌ನಿಂದ ಬೃಹತ್ ಸ್ಕೋರ್‌ಗಳು ಮೂಡಿ ಬರುತ್ತಿವೆ.

ಐಪಿಎಲ್ 2024 ರಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವು 277 ಮತ್ತು 287 ರನ್ ಗಳಿಸುವ ಮೂಲಕ ಎಲ್ಲರನ್ನೂ ಅಚ್ಚರಿಗೊಳಿಸಿತ್ತು. ಈ ಸೀಸನ್‌ನ ಎರಡನೇ ಪಂದ್ಯದಲ್ಲಿ ಎಸ್‌ಆರ್ ಹೆಚ್ ತಂಡವು 286 ರನ್ ಗಳಿಸುವ ಮೂಲಕ ಮತ್ತೊಮ್ಮೆ ಅಬ್ಬರಿಸಿದೆ. ಅಲ್ಲದೆ ಐಪಿಎಲ್‌ನಲ್ಲಿ ಈಗ 300 ರನ್‌ಗಳ ಗುರಿ ಮುಟ್ಟುವವರು ಯಾರು ಎಂಬುದರ ಚರ್ಚೆ ನಡೆಯುತ್ತಿದೆ. ಅತ್ತ ಸನ್‌ರೈಸರ್ಸ್ ಹೈದರಾಬಾದ್ ತಂಡದ ಬ್ಯಾಟರ್‌ಗಳು ನಮ್ಮ ಮುಂದಿನ ಗುರಿ 300 ರನ್‌ಗಳು ಎಂಬುದನ್ನು ಬಹಿರಂಗವಾಗಿಯೇ ಹೇಳಿದ್ದಾರೆ. ಅದನ್ನು ಸಾಧಿಸಿ ತೋರಿಸುವ ರಣ ಉತ್ಸಾಹದಲ್ಲಿದ್ದಾರೆ. ಇದಕ್ಕೆ ಸಾಕ್ಷಿ ಎಂಬಂತೆ ಈ ಬಾರಿಯ ಐಪಿಎಲ್‌ನ ಮೊದಲ ಪಂದ್ಯದಲ್ಲೇ 286 ರನ್ ಚಚ್ಚಿದ್ದಾರೆ. ಇದರಿಂದ ಸಂಕಷ್ಟಕ್ಕೆ ಸಿಲುಕಿರುವುದು ಮಾತ್ರ ಬೌಲರ್‌ಗಳು.

**ಮಾನಸಿಕ ಆರೋಗ್ಯಕ್ಕೆ ಅಪಾಯಕಾರಿ:** ಐಪಿಎಲ್ ಸೇರಿದಂತೆ ಟಿ20 ಕ್ರಿಕೆಟ್‌ನಲ್ಲಿ ಬ್ಯಾಟರ್‌ಗಳ ಪರಾಕ್ರಮವು ಬೌಲರ್‌ಗಳ ಮಾನಸಿಕ ಆರೋಗ್ಯಕ್ಕೆ ಅಪಾಯಕಾರಿ ಎಂದು ರವಿಚಂದ್ರನ್ ಅಶ್ವಿನ್ ಅಭಿಪ್ರಾಯಪಟ್ಟಿದ್ದಾರೆ. ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ನಡೆದ ಚರ್ಚೆಯ ಸಂದರ್ಭದಲ್ಲಿ ಮಾತನಾಡಿದ ಅಶ್ವಿನ್, ಟಿ20 ಕ್ರಿಕೆಟ್ ಬದಲಾಗಿರುವ ರೀತಿಯ ಬಗ್ಗೆ ಮಾತನಾಡಲು ನಾನು ಬಯಸುತ್ತೇನೆ. ಏಕೆಂದರೆ ಬೌಲರ್‌ಗಳಿಗೆ ರನ್‌ಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ.

ಇದು ಅವರನ್ನು ಮಾನಸಿಕವಾಗಿ ಒತ್ತಡಕ್ಕೀಡು ಮಾಡುತ್ತದೆ. ಇಂತಹ ಒತ್ತಡಗಳಿಂದಾಗಿ ಬೌಲರ್‌ಗಳಿಗೆ ಶೀಘ್ರದಲ್ಲೇ ವೈಯಕ್ತಿಕ ಮನಃ ಶಾಸ್ತ್ರಜ್ಞರು ಬೇಕಾಗಿ ಬರಬಹುದು ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಈಗ ಟಿ20 ಕ್ರಿಕೆಟ್‌ನಲ್ಲಿ ಬೌಲಿಂಗ್ ಅಕ್ಷರಶಃ ಅಸಾಧ್ಯವಾಗಿದೆ. ಕೆಲವು ಪಿಚ್‌ಗಳು ಸಂಪೂರ್ಣ ಬ್ಯಾಟಿಂಗ್ ಸ್ನೇಹಿಯಾಗಿ ಮಾರ್ಪಟ್ಟಿದೆ. ಇದರಿಂದ ಬೌಲರ್‌ಗಳು ನಿಷ್ಪ್ರಯೋಜಕರಾಗುತ್ತಿದ್ದಾರೆ ಎಂಬುದು ನನ್ನ ಭಾವನೆ. ಹೀಗಾಗಿ ಬೌಲರ್‌ಗಳ ಪಾಲಿಗೆ ಮನಃಶಾಸ್ತ್ರಜ್ಞರ ಅಗತ್ಯವಿದೆ ಎಂದು ರವಿಚಂದ್ರನ್ ಅಶ್ವಿನ್ ಹೇಳಿದ್ದಾರೆ.



# ಬಲಿಷ್ಠ ಹೈದರಾಬಾದ್‌ಗೆ ಸೋಲಿನ ಶಾಕ್ ನೀಡಿದ ಲಕ್ನೋ



## ಲಕ್ನೋಗೆ ಸುಲಭ ಜಯ

ಐಪಿಎಲ್ 2025 ರ ಹೈ-ವೋಲ್ಟೇಜ್ ಪಂದ್ಯವು ಸನ್‌ರೈಸರ್ಸ್ ಹೈದರಾಬಾದ್ ಮತ್ತು ಲಕ್ನೋ ಸೂಪರ್ ಜೈಂಟ್ಸ್ ನಡುವೆ ನಡೆಯಿತು. ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಸನ್ ರೈಸರ್ಸ್ ಹೈದರಾಬಾದ್ ತಂಡ 20 ಓವರ್ ಗಳಲ್ಲಿ ಒಂಬತ್ತು ವಿಕೆಟ್ ನಷ್ಟಕ್ಕೆ 190 ರನ್ ಗಳಿಸಿತು. ಹೈದರಾಬಾದ್ ಪರ ಟ್ರಾವಿಸ್ ಹೆಡ್ ಅತ್ಯಧಿಕ 47 ರನ್‌ಗಳ ಇನ್ನಿಂಗ್ಸ್ ಆಡಿದರು.

ಅವರ ಇನ್ನಿಂಗ್ಸ್‌ನಲ್ಲಿ 5 ಬೌಂಡರಿ, 3 ಸಿಕ್ಸರ್ ಗಳು ಸೇರಿದ್ದವು. ಇದಕ್ಕೆ ಉತ್ತರವಾಗಿ ಲಕ್ನೋ ತಂಡ 16.1 ಓವರ್‌ಗಳಲ್ಲಿ ಐದು ವಿಕೆಟ್ ನಷ್ಟಕ್ಕೆ 193 ರನ್ ಗಳಿಸಿ ಐದು ವಿಕೆಟ್‌ಗಳ ಅಂತರದಿಂದ ಪಂದ್ಯವನ್ನು ಗೆದ್ದುಕೊಂಡಿತು. ಲಕ್ನೋ ತಂಡದ ಈ ಗೆಲುವಿನಲ್ಲಿ ಶಾರ್ದೂಲ್ ಠಾಕೂರ್, ನಿಕೋಲಸ್ ಪೂರನ್ ಹಾಗೂ ಮಿಚೆಲ್ ಮಾರ್ಷ್ ಪ್ರಮುಖ ಪಾತ್ರವಹಿಸಿದರು.

**ಲಕ್ನೋಗೆ ಸುಲಭ ಜಯ:** ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಸನ್ ರೈಸರ್ಸ್ ಹೈದರಾಬಾದ್ ತಂಡ 20 ಓವರ್‌ಗಳಲ್ಲಿ ಒಂಬತ್ತು ವಿಕೆಟ್ ನಷ್ಟಕ್ಕೆ 190 ರನ್‌ಗಳಿಸಿತು.

ಇದಕ್ಕೆ ಉತ್ತರವಾಗಿ ಲಕ್ನೋ ತಂಡ 16.1 ಓವರ್‌ಗಳಲ್ಲಿ ಐದು ವಿಕೆಟ್ ನಷ್ಟಕ್ಕೆ 193 ರನ್ ಗಳಿಸಿ ಐದು ವಿಕೆಟ್‌ಗಳ ಅಂತರದಿಂದ ಪಂದ್ಯವನ್ನು ಗೆದ್ದುಕೊಂಡಿತು.

**ಎಲ್‌ಎಸ್‌ಜಿ- 189/5:** 16 ಓವರ್‌ಗಳಲ್ಲಿ ಲಕ್ನೋ ತಂಡ 5 ವಿಕೆಟ್‌ಗಳ ನಷ್ಟಕ್ಕೆ 189 ರನ್‌ಗಳಿಸಿದೆ. ಈಗ ಗೆಲ್ಲಲು ಕೇವಲ 2 ರನ್‌ಗಳು ಬೇಕಾಗಿವೆ.

**ರಿಷಭ್ ಪಂತ್ ಔಟ್:** 5 ಎಸೆತಗಳಲ್ಲಿ 15 ರನ್ ಗಳಿಸಿದ ನಂತರ ರಿಷಭ್ ಪಂತ್ ಹರ್ಷಲ್ ಪಟೇಲ್ ಗೆ ಬಲಿಯಾದರು. ಇದರೊಂದಿಗೆ ಲಕ್ನೋ ತಂಡದ ಅರ್ಧದಷ್ಟು ಜನರು ಪೆವಿಲಿಯನ್‌ಗೆ ಮರಳಿದ್ದಾರೆ.

**28 ರನ್ ಬೇಕು:** 14 ಓವರ್‌ಗಳು ಮುಗಿದಿದ್ದು, ಲಕ್ನೋ ತಂಡ 4 ವಿಕೆಟ್‌ಗಳ ನಷ್ಟಕ್ಕೆ 163 ರನ್‌ಗಳಿಸಿದೆ. ಈಗ ಲಕ್ನೋ ಗೆಲುವಿನಿಂದ ಕೇವಲ 28 ರನ್‌ಗಳ ದೂರದಲ್ಲಿದೆ.

**ಮೂರನೇ ವಿಕೆಟ್:** ಮಿಚೆಲ್ ಮಾರ್ಷ್ ಔಟಾದರು ಮತ್ತು ಇದರೊಂದಿಗೆ ಲಕ್ನೋ ತನ್ನ ಮೂರನೇ ವಿಕೆಟ್ ಕಳೆದುಕೊಂಡಿತು. ಮಾರ್ಷ್ 31 ಎಸೆತಗಳಲ್ಲಿ 52 ರನ್ ಗಳಿಸಿದರು.

**ಸತತ ಎರಡನೇ ಅರ್ಧಶತಕ:** ಮಿಚೆಲ್ ಮಾರ್ಷ್ ಸತತ ಎರಡನೇ ಅರ್ಧಶತಕ ಗಳಿಸಿದರು. ಅವರು ಕೇವಲ 29 ಎಸೆತಗಳಲ್ಲಿ ಈ ಸಾಧನೆ ಮಾಡಿದರು.

10 ಓವರ್‌ಗಳ ನಂತರ- 129/2

10 ಓವರ್‌ಗಳ ಆಟ ಮುಗಿದಿದೆ. ಲಕ್ನೋ ಸೂಪರ್ ಜೈಂಟ್ಸ್ ತಂಡ 2 ವಿಕೆಟ್ ನಷ್ಟಕ್ಕೆ 129 ರನ್ ಗಳಿಸಿದೆ.

# ಚೆಪಾಕ್ ಪಿಚ್ ಆರ್‌ಸಿಬಿಗೆ ದೊಡ್ಡ ಸವಾಲು



ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಎರಡನೇ ಐಪಿಎಲ್ ಪಂದ್ಯದಲ್ಲಿ ಚೆಪಾಕ್ ಪಿಚ್ ರಾಯಲ್ ಚಾಲೆಂಜರ್ಸ್ ಬೆಂಗಳೂರುಗೆ ದೊಡ್ಡ ಸವಾಲು ಆಗುವ ಸಾಧ್ಯತೆಯಿದೆ ಎಂದು ಆಸ್ಟ್ರೇಲಿಯಾದ ಮಾಜಿ ಆಲ್‌ರೌಂಡರ್ ಶೇನ್ ವ್ಯಾಟ್ಸನ್ ಹೇಳಿದ್ದಾರೆ. ಕೆಕೆಆರ್ ವಿರುದ್ಧ ಉತ್ತಮ ಗೆಲುವು ಸಾಧಿಸಿದ ಬಳಿಕ ಎರಡನೇ ಪಂದ್ಯದಲ್ಲಿ ಸಿಎಸ್ ಕೆ ಎದುರಿಸಲಿರುವ ಆರ್ ಸಿಬಿಗೆ ಚೆಪಾಕ್ ಪಿಚ್ ದೊಡ್ಡ ಸವಾಲಾಗಿದೆ. ಅದರಲ್ಲೂ ವಿಶೇಷವಾಗಿ ಚೆನ್ನೈ ಸೂಪರ್ ಕಿಂಗ್ಸ್ ಬೌಲರ್‌ಗಳ ಗುಣಮಟ್ಟವನ್ನು ನೋಡಿದರೆ, ಆರ್ ಸಿಬಿಪಿಚ್‌ಗೆ ತಕ್ಕಂತೆ ತಮ್ಮ ತಂಡವನ್ನು ಸರಿಹೊಂದಿಸಬೇಕಾಗಿದೆ. ತಪ್ಪು ಮಾಡ ಗಬೇಡಿ. ಚೆಪಾಕ್ ಒಂದು ಕೋಟೆಯಾಗಿದೆ ಎಂದು ಜಿಯೋಸ್ಟಾರ್ ಗೆ ವ್ಯಾಟ್ಸನ್ ಹೇಳಿದ್ದಾರೆ. MIನಲ್ಲಿ ಸಿಎಸ್‌ಕೆ ಹಾಗೂ ಆರ್ ಸಿಬಿ ಎರಡಕ್ಕೂ ಆಡಿರುವ ವ್ಯಾಟ್ಸನ್, ಚೆನ್ನೈ ಸ್ಪಿನ್ನರ್ ಗಳ ಗುಣಮಟ್ಟವನ್ನು ಉಲ್ಲೇಖಿಸಿದ್ದು, ತವರು ನೆಲದಲ್ಲಿ ಅವರ ಪ್ರಾಬಲ್ಯಕ್ಕೆ ಕಾರಣವಿರಬಹುದು ಎಂದಿದ್ದಾರೆ.

# 17 ವರ್ಷಗಳ ಗೆಲುವಿನ ಬರವನ್ನು ನೀಗಿಸಿಕೊಳ್ಳುತ್ತಾ ಆರ್‌ಸಿಬಿ ಬಲಾಬಲ ಹೇಗಿದೆ

ಐಪಿಎಲ್‌ನಲ್ಲಿ ಎರಡು ಬಲಿಷ್ಠ ತಂಡಗಳು ಹೈವೋಲ್ಟೇಜ್ ಕಾಳಗಕ್ಕೆ ಸಜ್ಜಾಗಿವೆ. ಕಿಕ್ಕಿರಿದು ತುಂಬುವ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಲು ಆರ್‌ಸಿಬಿ ಹಾಗೂ ಸಿಎಸ್‌ಕೆ ತಯಾರಿ ನಡೆಸಿವೆ. ಈ ಎರಡು ತಂಡಗಳ ಪಂದ್ಯ ಚೆನ್ನೈ ಎಂಎ ಚಿದಂಬರಂ ಕ್ರೀಡಾಂಗಣದಲ್ಲಿ ನಡೆಯಲಿದೆ. ಈ ಪಂದ್ಯದಲ್ಲಿ ಜಯ ಸಾಧಿಸುವ ಮೂಲಕ ಆರ್‌ಸಿಬಿ ತನ್ನ 17 ವರ್ಷಗಳ ಗೆಲುವಿನ ಬರವನ್ನು ನೀಗಿಸಿಕೊಳ್ಳಲು ಪ್ರಯತ್ನಿಸಿದರೆ, ಇತ್ತ ಸಿಎಸ್‌ಕೆ ಕೂಡ ತನ್ನ ಗೆಲುವಿನ ಓಟವನ್ನು ಮುಂದುವರೆಸಲು ಎದುರು ನೋಡುತ್ತಿದೆ. ವಾಸ್ತವವಾಗಿ ಆರ್‌ಸಿಬಿ ತಂಡವು ಇದುವರೆಗೆ ಚೆಪಾಕ್ ಕ್ರೀಡಾಂಗಣದಲ್ಲಿ ಸಿಎಸ್‌ಕೆ ತಂಡವನ್ನು ಒಮ್ಮೆ ಮಾತ್ರ ಸೋಲಿಸಿದೆ. 2008 ರಲ್ಲಿ ನಡೆದಿದ್ದ ಮೊದಲ ಐಪಿಎಲ್‌ನಲ್ಲಿ ಆರ್‌ಸಿಬಿ, ಸಿಎಸ್‌ಕೆ ತಂಡವನ್ನು ಅವರ ತವರು ನೆಲದಲ್ಲಿ ಸೋಲಿಸಿತ್ತು. ಅದನ್ನು ಹೊರತುಪಡಿಸಿ, ಆರ್‌ಸಿಬಿಗೆ ಚೆನ್ನೈ ನಲ್ಲಿ ಪಂದ್ಯವನ್ನು ಗೆಲ್ಲಲು ಸಾಧ್ಯವಾಗಿಲ್ಲ.

**ಚೆಪಾಕ್ ಚೆನ್ನೈನ ಭದ್ರಕೋಟೆ:** ಆರ್‌ಸಿಬಿಯ ಗೆಲುವಿನ ಕನಸನ್ನು ನನಸಾಗಿಸುವುದು ಅಷ್ಟು ಸುಲಭವಲ್ಲ. ಏಕೆಂದರೆ ಚೆನ್ನೈ ತಂಡ ಯಾವಾಗಲೂ ತನ್ನ ತವರು ಮೈದಾನದಲ್ಲಿ ಮೇಲುಗೈ ಸಾಧಿಸಿದೆ. ವಿಶೇಷವಾಗಿ ಸ್ಪಿನ್ನರ್‌ಗಳಿಗೆ ಸಾಕಷ್ಟು ಸಹಾಯ ಸಿಗುವ ಪಿಚ್‌ನಲ್ಲಿ ಸಿಎಸ್‌ಕೆ ತಂಡವನ್ನು ಮಣಿಸುವುದು ಸುಲಭದ ಮಾತಲ್ಲ. ಸಿಎಸ್‌ಕೆ ತಂಡದಲ್ಲಿ ರವೀಂದ್ರ ಜಡೇಜಾ ಅವರಂತಹ ಅನುಭವಿ ಬೌಲರ್ ಗಳಿದ್ದು, ಕಳೆದ ವರ್ಷದ ಹರಾಜಿನಲ್ಲಿ ರವಿಚಂದ್ರನ್ ಅಶ್ವಿನ್ ಅವರನ್ನು ಖರೀದಿಸಲಾಗಿದೆ. ಇವರೊಂದಿಗೆ ಅಫ್ಘಾನಿಸ್ತಾನದ ಎಡಗೈ ವೇಗಿ ನೂರ್ ಅಹ್ಮದ್ ಕೂಡ ತಂಡದಲ್ಲಿ ಸ್ಥಾನ ಪಡೆದಿದ್ದು, ಈ ಮೂವರು ಇತ್ತೀಚೆಗೆ ಮುಂಬೈ ಇಂಡಿಯನ್ಸ್ ವಿರುದ್ಧ ಅದ್ಭುತ ಪ್ರದರ್ಶನ ನೀಡಿದ್ದರು. ಈ ಸ್ಪಿನ್ನರ್‌ಗಳು ಮುಂಬೈ ವಿರುದ್ಧ 11 ಓವರ್‌ಗಳಲ್ಲಿ ಕೇವಲ 70 ರನ್‌ಗಳಿಗೆ 5 ವಿಕೆಟ್‌ಗಳನ್ನು ಪಡೆದರು. ಈ ಪಂದ್ಯದಲ್ಲೂ ಪಿಚ್ ಇದೇ ರೀತಿ ವರ್ತಿಸುವ ನಿರೀಕ್ಷೆಯಿದೆ. ಹೀಗಾಗಿ ಆರ್‌ಸಿಬಿ ಬ್ಯಾಟ್ಸ್‌ಮನ್‌ಗಳು, ವಿಶೇಷವಾಗಿ ಕೊಹ್ಲಿ, ಅನುಭವಿ ಸಿಎಸ್‌ಕೆ ಬೌಲರ್‌ಗಳ ವಿರುದ್ಧ ತಮ್ಮ ಅತ್ಯುತ್ತಮ ಪ್ರದರ್ಶನವನ್ನು ನೀಡಬೇಕಾಗುತ್ತದೆ. ಈ ಮೈದಾನದಲ್ಲಿ ಆಕ್ರಮಣಶೀಲತೆ ಮಾತ್ರ ಕೆಲಸ ಮಾಡುವುದಿಲ್ಲ, ಬದಲಿಗೆ ಸ್ಪಿನ್ನರ್‌ಗಳನ್ನು ಬುದ್ಧಿವಂತಿಕೆಯಿಂದ ಎದುರಿಸಬೇಕಾಗುತ್ತದೆ. ಕಳೆದ ಕೆಲವು ವರ್ಷಗಳಲ್ಲಿ ಕೊಹ್ಲಿ ಸ್ಪಿನ್ ವಿರುದ್ಧ ತಮ್ಮ ಆಟವನ್ನು ಬಹಳಷ್ಟು ಸುಧಾರಿಸಿಕೊಂಡಿದ್ದಾರೆ. ವಿಶೇಷವಾಗಿ ಸ್ವೀಪ್ ಮತ್ತು ಸ್ಲಾಗ್ ಸ್ವೀಪ್ ಹೊಡೆತಗಳ ಮೂಲಕ ಸ್ಪಿನ್ನರ್ ವಿರುದ್ಧ ರನ್‌ಗಳಿಸುವ ಕೊಹ್ಲಿ ಈ ಪಂದ್ಯದಲ್ಲೂ ಅದೇ ತಂತ್ರವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ.



**ಭುವನೇಶ್ವರ್ ಕುಮಾರ್ ಆಡುತ್ತಾರಾ:** ಆದರೆ, ಕೊಹ್ಲಿ ಒಬ್ಬಂಟಿಯಾಗಿ ಸಿಎಸ್‌ಕೆ ತಂಡದ ಬೌಲಿಂಗ್ ಅನ್ನು ಸೋಲಿಸಲು ಸಾಧ್ಯವಿಲ್ಲ. ಅವರಿಗೆ ಫಿಲ್ ಸಾಲ್ಟ್, ನಾಯಕ ರಜತ್ ಪಟಿದಾರ್, ಲಿಯಾಮ್ ಲಿವಿಂಗ್ ಸ್ಟೋನ್ ಜಿತೇಶ್ ಶರ್ಮಾ ಅವರಂತಹ ಬ್ಯಾಟ್ಸ್‌ಮನ್ ಗಳಿಂದ ಸಂಪೂರ್ಣ ಬೆಂಬಲ ಬೇಕಾಗುತ್ತದೆ. ಪಿಚ್ ಅನ್ನು ಅವಲಂಬಿಸಿ, ಆರ್‌ಸಿಬಿ ತಂಡದ ಆಡಳಿತವು ಟಿಮ್ ಡೇವಿಡ್ ಬದಲಿಗೆ ಜಾಕೋಬ್ ಬೆಥಾಲ್ ಅವರನ್ನು ಆಡಿಸುವ ಬಗ್ಗೆಯೂ ಪರಿಗಣಿಸಬಹುದು.

# ಪ್ರಭಾಸ್‌ಗೆ ಕೂಡಿಬಂತು ಕಂಕಣ ಭಾಗ್ಯ



ನಟ ಪ್ರಭಾಸ್ ಅವರ ಮದುವೆ ಬಗ್ಗೆ ಯಾವಾಗಲೂ ಪ್ರಶ್ನೆ ಎದುರಾಗುತ್ತದೆ.

ಈ ಪ್ಯಾನ್ ಇಂಡಿಯಾ ಹೀರೋ ಯಾವಾಗ ಮದುವೆ ಆಗುತ್ತಾರೆ ಎಂಬುದನ್ನು ತಿಳಿಯಲು ಫ್ಯಾನ್ಸ್ ಕಾಯುತ್ತಿದ್ದಾರೆ. ಈಗ ಪ್ರಭಾಸ್ ಅವರಿಗೆ 45 ವರ್ಷ ವಯಸ್ಸು. ಚಿತ್ರರಂಗದಲ್ಲಿ ಅವರು ಸಾಧನೆ ಮಾಡಿದ್ದಾರೆ. ಆದರೆ ಮದುವೆ ವಿಚಾರದಲ್ಲಿ ವಿಳಂಬ ಮಾಡಿದ್ದಾರೆ. ಈಗ ಅವರಿಗೆ ಕಂಕಣ ಭಾಗ್ಯ ಕೂಡಿಬಂದಿದೆ ಎಂದು ಸುದ್ದಿ ಹಬ್ಬಿದೆ.

ಈ ಸುದ್ದಿ ಕೇಳುತ್ತಿದ್ದಂತೆಯೇ ಅಭಿಮಾನಿಗಳಿಗೆ ಅನುಷ್ಕಾ ಶೆಟ್ಟಿ ನೆನಪಾಗಿದೆ. ಆದರೆ ಪ್ರಭಾಸ್ ಮದುವೆ ಆಗುತ್ತಿರುವ ಹುಡುಗಿ ಅನುಷ್ಕಾ ಶೆಟ್ಟಿ ಅಲ್ಲ ಎಂಬುದು ಬೇಸರದ ವಿಷಯ. ವರದಿಗಳ ಪ್ರಕಾರ, ಪ್ರಭಾಸ್ ಅವರ ಮದುವೆ ಮಾತುಕಥೆ ಜಾರಿಯಲ್ಲಿದೆ. ಹೈದರಾಬಾದ್‌ನ ಹುಡುಗಿ ಜೊತೆ ಪ್ರಭಾಸ್ ಅವರು ಹಸೆಮಣೆ ಏರಲು ಸಜ್ಜಾಗಿದ್ದಾರೆ. ದೊಡ್ಡ ಉದ್ಯಮಿಯೊಬ್ಬರ ಮಗಳ ಜೊತೆ ಪ್ರಭಾಸ್ ಮದುವೆ ನೆರವೇರಲಿದೆ ಎಂದು ಹೇಳಲಾಗುತ್ತಿದೆ. ಈಗಾಗಲೇ ಮದುವೆ ತಯಾರಿ ನಡೆದಿತ್ತು ಪ್ರಭಾಸ್ ಸಂಬಂಧಿ ಶ್ಯಾಮಲಾ ದೇವಿ ಅವರು ಎಲ್ಲಾ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ ಎಂದು ವರದಿ ಆಗಿದೆ. ಸದ್ಯಕ್ಕಂತೂ ಇದು ಅಂತೆ-ಕಂತೆಗಳ ಹಂತದಲ್ಲೇ ಇದೆ. ಆದರೂ ಬೆಂಕಿ ಇಲ್ಲದೇ ಹೊಗೆ ಆಡುವುದಿಲ್ಲ ಎಂಬುದನ್ನು ಗಾಸಿಪ್ ಮಂದಿ ಬಲವಾಗಿ ನಂಬಿದ್ದಾರೆ. ಕೇಳಿಬರುತ್ತಿರುವ ಗಾಸಿಪ್‌ಗಳ ಬಗ್ಗೆ ಪ್ರಭಾಸ್ ಕುಟುಂಬದವರು ಇನ್ನೂ ಅಧಿಕೃತವಾಗಿ ಯಾವುದೇ ಹೇಳಿಕೆ ನೀಡಿಲ್ಲ. ಕುಟುಂಬದ ಯಾರಾದರೂ ಪ್ರತಿಕ್ರಿಯೆ ನೀಡಿದರೆ ಮಾತ್ರ ಈ ಸುದ್ದಿ ಖಚಿತ ಆಗುತ್ತದೆ.

ಪ್ರಭಾಸ್ ಮತ್ತು ಅನುಷ್ಕಾ ಶೆಟ್ಟಿ ನಡುವೆ ಉತ್ತಮ ಬಾಂಧವ್ಯ ಇದೆ. ಬಾಹುಬಲಿ, ಮಿರ್ಚಿ ಮುಂತಾದ ಸಿನಿಮಾಗಳಲ್ಲಿ ಅವರಿಬ್ಬರು ಒಟ್ಟಿಗೆ ನಟಿಸಿದ್ದಾರೆ.

# ಚಾಮುಂಡೇಶ್ವರಿ ದೇವಿ ಭಕ್ತರಿಗೆ ಕ್ಷಮೆ ಕೋರಿದ ರಕ್ಷಕ್ ಬುಲೆಟ್



ಬಿಗ್ ಬಾಸ್' ರಕ್ಷಕ್ ಬುಲೆಟ್ ಅವರು ಇತ್ತೀಚಿನ ಶೋವೊಂದರಲ್ಲಿ ಡೈಲಾಗ್ ಮೂಲಕ ನಾಡದೇವಿ ಚಾಮುಂಡೇಶ್ವರಿಗೆ ಅವಮಾನ ಮಾಡಿದ್ದಾರೆ ಎಂದು ದೇವಿ ಆರಾಧಕರು ಹಿಂದೂ ಸಂಘಟನೆಗಳು ತಿರುಗಿಬಿದ್ದಿದ್ದರು. ಈ ಬೆನ್ನಲ್ಲೇ ರಕ್ಷಕ್ ಕ್ಷಮೆಯಾಚಿಸಿದ್ದಾರೆ. ಯಾರಿಗಾದರೂ ಬೇಸರವಾಗಿದ್ದಲ್ಲಿ ನಾನು ಕ್ಷಮೆಯಾಚಿಸುತ್ತೇನೆ. ಮುಂದೆ ಇಂತಹ ಅಚಾತುರ್ಯ ನಡೆಯೋದಿಲ್ಲ ಎಂದು ಮನವಿ ಮಾಡಿದ್ದಾರೆ. ಸೋಶಿಯಲ್ ಮೀಡಿಯಾದಲ್ಲಿ ನಟ ಪೋಸ್ಟ್ ಮಾಡಿ ನಾನು ನಿಮ್ಮ ರಕ್ಷಕ್ ಬುಲೆಟ್, ಇತ್ತೀಚೆಗೆ ಒಂದು ರಿಯಾಲಿಟಿ ಶೋನಲ್ಲಿ ನಾನು ಒಂದು ಹೆಸರಾಂತ ಚಿತ್ರದ ಡೈಲಾಗ್ ಅನ್ನು ಒಂದು ಸ್ಕಿಟ್‌ನಲ್ಲಿ ಹೇಳಿದ್ದೆ, ಅದು ಸಾಕಷ್ಟು ಚರ್ಚೆಗೆ ಗ್ರಾಸವಾಗಿತ್ತು. ನನ್ನ ತಂದೆಯವರಾದ ದಿವಂಗತ ಬುಲೆಟ್ ಪ್ರಕಾಶ್ ಅವರು ನನ್ನ ತಾಯಿ ಹಾಗೂ ಕುಟುಂಬಸ್ಥರು ಪರಮ ಭಕ್ತರು. ನಮ್ಮ ತಂದೆಯವರು ಇದ್ದಾಗಿನಿಂದಲೂ ನಾವು ತಾಯಿ ಚಾಮುಂಡೇಶ್ವರಿಗೆ ಪೂಜೆ ಮಾಡುತ್ತಾ ನಡೆದುಕೊಂಡು ಬಂದಿದ್ದೇವೆ.

# ನಟಿ ಫೋಟೋಶೂಟ್ ಬಾಲಿವುಡ್ ಬ್ಯೂಟಿಯಂತೆ ಮಿಂಚಿದ ಇಶಿತಾ



ಸಿನಿ ವಾಹಿನಿ

ಜನಪ್ರಿಯ 'ಅಮೃತಧಾರೆ' ಸೀರಿಯಲ್ ನಟಿ ಇಶಿತಾ ವರ್ಷ ದುಬೈ ಮರಳುಗಾಡಿನಲ್ಲಿ ಅದ್ದೂರಿಯಾಗಿ ಫೋಟೋಶೂಟ್ ಮಾಡಿಸಿದ್ದಾರೆ. ಬಾಲಿವುಡ್ ಬ್ಯೂಟಿಯಂತೆ ಕಂಗೊಳಿಸಿದ ನಟಿಯ ಕಂಡು ಫ್ಯಾನ್ಸ್ ಬೆರಗಾಗಿದ್ದಾರೆ.

ಸದಾ ಒಂದಲ್ಲಾ ಒಂದು ಶೈಲಿಯಲ್ಲಿ ಬೋಲ್ಡ್ ಆಗಿ ಫೋಟೋಶೂಟ್ ಮಾಡಿಸೋ ಇಶಿತಾ ಇದೀಗ ದುಬೈಗೆ ಹಾರಿದ್ದಾರೆ. ಅಲ್ಲಿ ಮರುಳುಗಾಡಿನಲ್ಲಿ ನಿಂತು ವಿವಿಧ ಭಂಗಿಯಲ್ಲಿ ಫೋಟೋಶೂಟ್ ಮಾಡಿಸಿದ್ದಾರೆ. ರೆಡ್ ಕಲರ್ ಡ್ರೆಸ್ ಧರಿಸಿ ಬಾಲಿವುಡ್ ಬ್ಯೂಟಿಯಂತೆ ಕ್ಯಾಮೆರಾಗೆ ಪೋಸ್ ಕೊಟ್ಟಿದ್ದಾರೆ. ಸ್ಟಾರ್ ನಟಿಯರನ್ನೇ ಸೆಡ್ಡು ಹೊಡೆಯುವಂತೆ ಇಶಿತಾ ನಯಾ ಫೋಟೋಶೂಟ್ ಮಾಡಿಸಿ ಗಮನ ಸೆಳೆದಿದ್ದಾರೆ. ಬಳುವ ಬಳ್ಳಿಯಂತೆ ಮಿಂಚಿರೋ ಇಶಿತಾರನ್ನು ಕಂಡು ಪಡ್ಡೆಹುಡುಗರು ಖುಷಿಪಟ್ಟಿದ್ದಾರೆ. 'ಅಗ್ನಿಸಾಕ್ಷಿ' ಸೀರಿಯಲ್‌ನಲ್ಲಿ ಮಾಯಾ ಪಾತ್ರಧಾರಿಯಾಗಿ ಸತತ 7 ವರ್ಷಗಳ ಕಾಲ ರಂಜಿಸಿದರು. ಇಂದಿಗೂ ಅವರ ಪಾತ್ರವನ್ನು ಜನರು ಸ್ಮರಿಸುತ್ತಾರೆ. ಅಷ್ಟರ ಮಟ್ಟಿಗೆ ಈ ಸೀರಿಯಲ್ ಸೂಪರ್ ಹಿಟ್ ಆಗಿತ್ತು. ಪ್ರಸ್ತುತ ಅಮೃತಧಾರೆ ಸೀರಿಯಲ್‌ನಲ್ಲಿ ಗೌತಮ್ ದಿವಾನ್ ತಂಗಿಯಾಗಿ ಇಶಿತಾ ನಟಿಸುತ್ತಿದ್ದಾರೆ. ರೀಪ್ಲೇಸ್‌ಮೆಂಟ್ ಪಾತ್ರಕ್ಕೆ ಅವರು ಎಂಟ್ರಿ ಕೊಟ್ಟಿದ್ರೂ ಕೂಡ ಅದ್ಭುತವಾಗಿ ನಟಿಸುತ್ತಿದ್ದಾರೆ. ಅವರ ನಟನೆ ಮತ್ತೆ ಪ್ರೇಕ್ಷಕರ ಮನಗೆದ್ದಿದೆ. ನೃತ್ಯ ಸಂಯೋಜಕ ಮುರುಗಾನಂದ ಜೊತೆ ಇಶಿತಾ ಮದುವೆ ಆಗಿದ್ದಾರೆ. ಅವರ ಕೂಡ ಬಣ್ಣದ ಲೋಕದಲ್ಲಿ ಸ್ಟಾರ್ ನಟರ ಸಿನಿಮಾಗಳಿಗೆ ಕೆಲಸ ಮಾಡ್ತಿರೋದ್ರಿಂದ ಪತ್ನಿಯ ಕೆರಿಯರ್‌ಗೆ ಪ್ರೋತ್ಸಾಹಿಸುತ್ತಿದ್ದಾರೆ.

# ಡ್ರ್ಯಾಗನ್ ಹೀರೋ ಜೊತೆ ಮಮಿತಾ ಬೈಜು ರೊಮ್ಯಾನ್ಸ್





ಡ್ರ್ಯಾಗನ್ ಸಿನಿಮಾ ಮೂಲಕ ಸೆನ್ಸೇಷನ್ ಕ್ರಿಯೆಟ್ ಮಾಡಿರುವ ಪ್ರದೀಪ್ ರಂಗನಾಥನ್‌ಗೆ ಪ್ರೇಮಲು ಬ್ಯೂಟಿ ಮಮಿತಾ ಬೈಜು ಜೊತೆಯಾಗಿದ್ದಾರೆ. ಇವರ ಹೊಸ ಸಿನಿಮಾಗೆ 'ಪುಷ್ಪ 2' ಚಿತ್ರ ನಿರ್ಮಿಸಿದ್ದ ಸಂಸ್ಥೆ ಮೈತ್ರಿ ಮೂವಿ ಮೇಕರ್ಸ್ ಸಾಥ್ ನೀಡುತ್ತಿದೆ. ಡ್ರ್ಯಾಗನ್' ಸಿನಿಮಾ ಸೂಪರ್ ಹಿಟ್ ಆಗಿರೋ ಬೆನ್ನಲ್ಲೇ ಪ್ರದೀಪ್ ಹೊಸ ಸಿನಿಮಾದಲ್ಲಿ ನಟಿಸಲು ಬಂಪರ್ ಆಫರ್ ಸಿಕ್ಕಿದೆ. ಮಮಿತಾ ಬೈಜು ಜೊತೆ ಅವರು ರೊಮ್ಯಾನ್ಸ್ ಮಾಡಲು ಅವರು ರೆಡಿಯಾಗಿದ್ದಾರೆ. ಮತ್ತೊಂದು ವಿಭಿನ್ನ ಸಿನಿಮಾದೊಂದಿಗೆ ಅವರು ಬರುತ್ತಿದ್ದಾರೆ.

ಸದ್ಯ ಸಿನಿಮಾದ ಮುಹೂರ್ತ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿದೆ.

ಸದ್ಯದಲ್ಲೇ ಶೂಟಿಂಗ್ ಕೂಡ ಶುರು ಆಗಲಿದೆ. ಪ್ರದೀಪ್ ನಟಿಸಲಿರುವ ಹೊಸ ಚಿತ್ರಕ್ಕೆ ಬ್ಯಾಂಗರ್' ಎಂದು ಕ್ಯಾಚಿ ಟೈಟಲ್ ಇಡಲಾಗಿದೆ. ಹೊಚ್ಚ ಹೊಸ ಪ್ರೇಮ ಕಥೆಗೆ ಕೀರ್ತಿಶ್ವರನ್ ಎಂಬುವವರು ನಿರ್ದೇಶನ ಮಾಡುತ್ತಿದ್ದಾರೆ. ಈ ಚಿತ್ರವನ್ನು ಮೈತ್ರಿ ಮೂವಿ ಮೇಕರ್ಸ್ ನಿರ್ಮಾಣ ಮಾಡುತ್ತಿದೆ.

# ರಶ್ಮಿಕಾರನ್ನು ನೋಡಿ ನನ್ನ ಆ ದಿನಗಳು ನೆನಪಾದವು



ರಶ್ಮಿಕಾ ಮಂದಣ್ಣ ಹೋದಲೆಲ್ಲ ತಮ್ಮ ವೃತ್ತಿಪರತೆ, ಕಠಿಣ ಪರಿಶ್ರಮದಿಂದ ಹೊಗಳಿಕೆಗಳನ್ನು ಜೊತೆಗೆ ಅದ್ಭುತ ಯಶಸ್ಸನ್ನೂ ಸಹ ಪಡೆಯುತ್ತಿದ್ದಾರೆ. ತೆಲುಗು ಚಿತ್ರರಂಗದಲ್ಲಿ ನಂಬರ್ 1 ನಟಿಯಾಗಿ ಮೆರೆದ ನಟಿ ರಶ್ಮಿಕಾ ಮಂದಣ್ಣ ಈಗ ಬಾಲಿವುಡ್‌ನಲ್ಲಿಯೂ ನಂಬರ್ 1 ನಟಿಯಾಗುವತ್ತ ಹೆಜ್ಜೆ ಇಡುತ್ತಿದ್ದಾರೆ. ರಣ್‌ಬೀರ್ ಕಪೂರ್ ಅಂಥಹಾ ಸ್ಟಾರ್ ನಟರೊಟ್ಟಿಗೆ ನಟಿಸಿ ದೊಡ್ಡ ಹಿಟ್ ಕೊಟ್ಟ ನಟಿ ಇದೀಗ ಸಲ್ಮಾನ್ ಖಾನ್ ಜೊತೆ ಸಿಖಂಧರ್ ಸಿನಿಮಾನಲ್ಲಿ ನಟಿಸಿದ್ದಾರೆ. ಸಾಮಾನ್ಯವಾಗಿ ಇತರೆ ನಟರನ್ನು ಹೊಗಳದ ಸಲ್ಮಾನ್ ಖಾನ್, ರಶ್ಮಿಕಾರನ್ನು ಮಾತ್ರ ಕೊಂಡಾಡಿದ್ದಾರೆ.

ಆಮಿರ್ ಖಾನ್, ಸಲ್ಮಾನ್ ಖಾನ್, ಸಿಖಂಧರ್ ಸಿನಿಮಾ ನಿರ್ದೇಶಕ ಎಆರ್ ಮುರುಗದಾಸ್ ಅವರುಗಳು ಸಿನಿಮಾದ ಪ್ರಚಾರಕ್ಕಾಗಿ ಪ್ರೊಮೋಷನಲ್ ವಿಡಿಯೋ ಒಂದನ್ನು ಮಾಡಿದ್ದು, ಮೂವರು ಕೂತು ಸಿನಿಮಾ ಬಗ್ಗೆ ಮಾತನಾಡಿದ್ದಾರೆ.

ಈ ವೇಳೆ ಆಮಿರ್ ಖಾನ್ ಸಿಂಖಧರ್' ಸಿನಿಮಾದ ನಾಯಕಿ ಯಾರು ಎಂದು ಕೇಳಿದ್ದಾರೆ. ಆಗ ಮಾತನಾಡಿದ ಸಲ್ಮಾನ್ ಖಾನ್, ರಶ್ಮಿಕಾ ಮಂದಣ್ಣ ನಾಯಕಿ, ಆಕೆ ಬಹಳ ಪರಿಣಾಮಕಾರಿ ಮತ್ತು ಕಠಿಣ ಪರಿಶ್ರಮಿ ನಟಿ ಎಂದಿದ್ದಾರೆ. ಮುಂದುವರೆದು ಮಾತನಾಡಿದ ಸಲ್ಮಾನ್ ಖಾನ್, ರಶ್ಮಿಕಾ ಮಂದಣ್ಣ ಅದ್ಭುತವಾದ ನಟಿ. ನಾವು ಹೈದರಾಬಾದ್‌ನಲ್ಲಿ ಶೂಟಿಂಗ್ ಮಾಡುವಾಗ ಬೆಳಿಗಿನ ಜಾವ ಆರು ಗಂಟೆಗೆ ರೆಡಿಯಾಗಿ ಪುಷ್ಪ 2 ಸಿನಿಮಾದ ಚಿತ್ರೀಕರಣದಲ್ಲಿ ಭಾಗಿ ಆಗುತ್ತಿದ್ದರು. ಆ ಸಿನಿಮಾದ ಚಿತ್ರೀಕರಣ ಮುಗಿಸಿ ಬಳಿಕ ನಮ್ಮ ಜೊತೆ ಚಿತ್ರೀಕರಣದಲ್ಲಿ ಬರುತ್ತಿದ್ದರು. ಆ ನಟಿಗೆ ವಿಶ್ರಾಂತಿಗೆ ಸಿಗುತ್ತಿದ್ದ ಸಮಯ, ಕೇವಲ ಒಂದು ಸೆಟ್‌ನಿಂದ ಇನ್ನೊಂದು ಸೆಟ್‌ಗೆ ಹೋಗುವ ಪ್ರಯಾಣದ ಸಮಯವಷ್ಟೆ' ಎಂದಿದ್ದಾರೆ ಸಲ್ಮಾನ್ ಖಾನ್. ಅದೂ ಜ್ವರ ಇದ್ದಾಗಲೂ ಸಹ ಯಾವುದೇ ವಿಶ್ರಾಂತಿ ಇಲ್ಲದೆ ಆ ನಟಿ ಕೆಲಸ ಮಾಡಿದರು. ಆಕೆಯನ್ನು ನೋಡಿದಾಗ ನನಗೆ ನನ್ನ ಹಳೆಯ ದಿನಗಳು ನೆನಪಾದವು. 20-25 ವರ್ಷದ ಹಿಂದೆ ನಾನು, ಆಮಿರ್ ಖಾನ್ ಇನ್ನೂ ಹಲವರು ಹೀಗೆಯೇ ಎರಡು, ಮೂರು ಶಿಫ್ಟ್‌ಗಳಲ್ಲಿ ಕೆಲಸ ಮಾಡುತ್ತಿದ್ದೆವು. ರಶ್ಮಿಕಾ ಈಗ ದಿನಕ್ಕೆ ಎರಡು, ಮೂರು ಶಿಫ್ಟ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದಿದ್ದಾರೆ ಸಲ್ಮಾನ್ ಖಾನ್. ಸಿಖಂಧರ್ ಸಿನಿಮಾನಲ್ಲಿ ರಶ್ಮಿಕಾ ಮತ್ತು ಸಲ್ಮಾನ್ ಖಾನ್ ಒಟ್ಟಿಗೆ ನಟಿಸಿದ್ದು, ಸಿನಿಮಾದ ಮಾರ್ಚ್ 30 ರಂದು ಬಿಡುಗಡೆ ಆಗಲಿದೆ. ಸಿನಿಮಾಕ್ಕೆ ಸಲ್ಮಾನ್ ಖಾನ್‌ರ ಆಪ್ತ ಗೆಳೆಯ ಸಾಜಿದ್ ನಾಡಿಯಾವಾಲ ಬಂಡವಾಳ ಹೂಡಿದ್ದಾರೆ. ಸಿನಿಮಾ ನಿರ್ದೇಶನ ಮಾಡಿರುವುದು ತಮಿಳಿನ ಖ್ಯಾತ ನಿರ್ದೇಶಕ ಎಆರ್ ಮುರುಗದಾಸ್. ಸಿನಿಮಾದ ಅಡ್ವಾನ್ಸ್ ಬುಕಿಂಗ್ ಜೋರಾಗಿ ನಡೆಯುತ್ತಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966